ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಉಡ್ತಾ ಸೆನ್ಸಾರ್




ಸಂಪುಟ 10 | ಸಂಚಿಕೆ 26 | ಪುಟ 16 | ಜೂನ್ 26, 2016 | ರೂ. 10/-

web: www.janashakthi.co.in e-mail : js_weekly@yahoo.com

ಹವಾಮಾನ ವೈಪರೀತ್ಯ ಮತ್ತು ಕೃಷಿ

ಜನವಿರೋಧಿ ಚಿಲ್ಲರೆ ವ್ಯಾಪಾರ ನೀತಿ



ಜೆಡಿ(ಎಸ್) ಅಧಃಪತನ

ISKCON ಭೂ ಹಗರಣ; 'ಗೋಕುಲ' mantri ಆಗಿದ್ದು

ವಿಶೇಷ ತನಿಖಾ ವರದಿ



ವಿಕಾಸ-ಕೋಮು ಧ್ರುವೀಕರಣ : ಯು.ಪಿ.ಯಲ್ಲಿ ಮತ್ತೆ ಬಿಜೆಪಿ ಡಬ್ಬಲ್ ಆಕ್ಟಿಂಗ್



ಸೆ. 2-ಮುಷ್ಕರದತ್ತ; ಜೆ.ಸಿ.ಟಿ.ಯು.

33 ಲಕ್ಷ ಕೇಂದ್ರ ಸರಕಾರೀ, ರಕ್ಷಣಾ ಮತ್ತು ರೈಲ್ವೆ ನೌಕರರ ಅನಿರ್ದಿಷ್ಟ ಕಾಲದ ಮುಷ್ಕರ

ನವದೆಹಲಿಯಲ್ಲಿ ಸಭೆ ಸೇರಿದ ಕೇಂದ್ರ ಸರಕಾರೀ ಇಲಾಖೆಗಳ ನೌಕರರ ರಾಷ್ಟ್ರೀಯ ಜಂಟಿ ಕ್ರಿಯಾ ಮಂಡಳಿ(ಎನ್‌ಜೆಸಿಎ) ಜುಲೈ 11ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ನಿರ್ಧರಿಸಿದೆ.

ಕೇಂದ್ರ ಸರಕಾರೀ ನೌಕರರ ಸಮನ್ವಯ ಸಮಿತಿ, ಅಖಿಲ ಭಾರತ ರಕ್ಷಣಾ ನೌಕರರ ಒಕ್ಕೂಟ (ಎಐಡಿಇಎಫ್), ಅಖಿಲ ಭಾರತ ರೈಲ್ವೇ ನೌಕರರ ಒಕ್ಕೂಟ(ಎಐಆರ್‌ಎಫ್) ಮತ್ತು ಭಾರತೀಯ ರೈಲ್ವೆ ನೌಕರರ ರಾಷ್ಟ್ರೀಯ ಒಕ್ಕೂಟ(ಎನ್‌ಎಫ್‌ಐಆರ್) ಈ ಜಂಟಿ ಕ್ರಿಯಾಸಮಿತಿಯಲ್ಲಿ ಇವೆ. 33 ಲಕ್ಷ ನೌಕರರನ್ನು ಪ್ರತಿನಿಧಿಸುವ ಈ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ ಈ ಸಭೆ, ಜಂಟಿ ಕ್ರಿಯಾ ಮಂಡಳಿಯ 10ಬೇಡಿಕೆಗಳಿಗೆ ಸರಕಾರದಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ದೊರೆಯದ್ದರಿಂದ ಈ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ನಿರ್ಧರಿಸಿದೆ.

ಡಿಸೆಂಬರ್ 11, 2014ರಂದು ನಡೆದ ರಾಷ್ಟ್ರೀಯ ಸಮಾವೇಶ ರೂಪಿಸಿ ಅಂಗೀಕರಿಸಿದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರೈಸುವ ಪ್ರಕ್ರಿಯೆಯಲ್ಲಿ ನೌಕರರು ಮಾದರಿ ಐಕ್ಯತೆಯನ್ನು ಬೆಸೆದಿದ್ದಾರೆ ಎಂದು ಅಭಿನಂದಿಸಿರುವ ಈ ಸಭೆ, ನೌಕರರ ಹಲವು ಕಾರ್ಯಾಚರಣೆಗಳಿಂದಾಗಿ 7ನೇ ಕೇಂದ್ರೀಯ ವೇತನ ಆಯೋಗವನ್ನು ರಚಿಸಿದರೂ, ಮಧ್ಯಂತರ ಪರಿಹಾರ ಮತ್ತು ತುಟ್ಟಿಭತ್ಯೆ ವಿಲೀನದ ಬೇಡಿಕೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿದೆ, ಅಲ್ಲದೆ ಅಂಚೆ ಇಲಾಖೆಯ ಗ್ರಾಮೀಣ ಡಾಕ್ ಸೇವಕ್ ವರ್ಗವನ್ನು ಇದರಿಂದ ಹೊರಗಿಟ್ಟಿದೆ ಎಂಬ ಬಗ್ಗೆ ಆಕ್ರೋಶ ವ್ಯಕ್ತಪಡಿಸಿತು.

ಅಲ್ಲದೆ ಭಾರತೀಯ ರೈಲ್ವೆಯನ್ನು ಖಾಸಗೀಕರಿಸುವುದಿಲ್ಲ ಎಂದು ಪ್ರಧಾನ ಮಂತ್ರಿಗಳು, ರೈಲ್ವೆ ಮಂತ್ರಿಗಳು ಹಲವು ಸಂದರ್ಭಗಳಲ್ಲಿ, ಸಂಸತ್ತಿನಲ್ಲೂ ಸಾರ್ವಜನಿಕ ಭರವಸೆಯನ್ನು ನೀಡಿದ್ದರೂ, ಸರಕಾರ ನೇಮಿಸಿದ ಡಾ.ಬಿಬೇಕ್ ದೇಬ್ ರಾಯ್ ಸಮಿತಿಯ ವರದಿ ಭಾರತೀಯ ರೈಲ್ವೆಯ ಖಾಸಗೀಕರಣದ ಒಂದು ಸ್ಪಷ್ಟ ನಕ್ಷೆಯೇ ಆಗಿದೆ ಎಂದು ಈ ಸಭೆ ಅಭಿಪ್ರಾಯ ಪಟ್ಟಿತು.

ರೈಲ್ವೆ, ಅಂಚೆ ಮತ್ತು ಇತರ ಹಲವಾರು ಕೇಂದ್ರೀಯ ಇಲಾಖೆಗಳ 33ಲಕ್ಷ ನೌಕರರ ಆರ್ಥಿಕ ಬೇಡಿಕೆಗಳಲ್ಲದೆ, ಖಾಸಗೀಕರಣ/ ಹೊರಗುತ್ತಿಗೆಗೆ ತೀವ್ರ ವಿರೋಧ, ರೈಲ್ವೆ ಮತ್ತು ರಕ್ಷಣಾ ಇಲಾಖೆಯಲ್ಲಿ ಎಫ್‌ಡಿಐ ಗೆ ವಿರೋಧ, ಖಾಲಿ ಹುದ್ದೆಗಳ ಭರ್ತಿ, ಪಿಎಫ್‌ಆರ್‌ಡಿಎ ಕಾಯ್ದೆ ಮತ್ತು ರಾಷ್ಟ್ರೀಯ ಪೆನ್ಶನ್ ಯೋಜನೆಯ ರದ್ದತಿ ಮತ್ತು ಕಾರ್ಮಿಕ ಕಾನೂನುಗಳ ಹೆಸರಿನಲ್ಲಿ ಕಾರ್ಮಿಕ–ವಿರೋಧಿ ತಿದ್ದುಪಡಿಗಳಿಗೆ ವಿರೋಧ ಇವರ 10 ಬೇಡಿಕೆಗಳಲ್ಲಿ ಸೇರಿದೆ.

ಭಾರತ ಸರಕಾರದ ಖರ್ಚಿನಲ್ಲಿ ಮಲೇಶ್ಯಾದ 'ಬಿಜೆಪಿ ಗೆಳೆಯರ' ಅಂತರ್ರಾಷ್ಟ್ರೀಯ ಯೋಗ ದಿನಾಚರಣೆ?



ಇದು 'ಓಎಫ್‌ಬಿಜೆಪಿ(ಬಿಜೆಪಿಯ ಸಾಗರೋತ್ತರ ಗೆಳೆಯರು)–ಮಲೇಶ್ಯ' ಆ ದೇಶದ ರಾಜಧಾನಿ ಕುವಲ ಲುಂಪುರ್‌ನಲ್ಲಿ ಜೂನ್ 19ರ 'ಅಂತರ್ರಾಷ್ಟ್ರೀಯ ಯೋಗ ದಿನಾಚರಣೆ'ಗೆ ಸ್ವಾಗತ ಕೋರುವ ಒಂದು ಕರಪತ್ರ. ಇದರಲ್ಲಿ ಈ ಕಾರ್ಯಕ್ರಮವನ್ನು ಬೆಂಬಲಿಸುವವರು ಮಲೇಶ್ಯಾದಲ್ಲಿ ಭಾರತದ ಹೈಕಮಿಶನ್, ಭಾರತ ಸರಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯ, ಆಯುಷ್ ಮಂತ್ರಾಲಯ ಮತ್ತು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ(ಐಸಿಸಿಆರ್) ಎಂದು ಸ್ಪಷ್ಟವಾಗಿ ಸಾರಲಾಗಿದೆ. ಇದು ಸರಕಾರದ ಕಾರ್ಯಕ್ರಮವೇ ಅಥವ ಬಿಜೆಪಿಯ ಗೆಳೆಯರ ಕಾರ್ಯಕ್ರಮವೇ? ಸರಕಾರೀ ಕಾರ್ಯಕ್ರಮವಾದರೆ ಒಂದು ರಾಜಕೀಯ ಪಕ್ಷದ ಹೆಸರೇಕೆ? ಒಂದು ರಾಜಕೀಯ ಪಕ್ಷದ್ದಾದರೆ, ಅದಕ್ಕೆ ಸರಕಾರದ ಬೆಂಬಲ ಹೇಗೆ ಸಾಧ್ಯ? ಇಂತಹ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ.

ರಾಜ್ಯಸಭಾ ಸದಸ್ಯರು ಮತ್ತು ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಸಲಹಾ ಸಮಿತಿಯ ಸದಸ್ಯರೂ ಆಗಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಈ ಬಗ್ಗೆ ಜೂನ್ 8ರಂದು ವಿದೇಶಾಂಗ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

"ವಿದೇಶಗಳಲ್ಲಿ ಭಾರತದ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಬಲಪಡಿಸುವ ಮತ್ತು ಸದ್ಭಾವನೆಯನ್ನು ಬೆಳೆಸುವ ಚಟುವಟಿಕೆಗಳನ್ನು ಬೆಂಬಲಿಸುವುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ನನಗೆ ತಿಳಿದಂತೆ, ಭಾರತ ಸರಕಾರ ಅಥವ ಅದರ ಹೈಕಮಿಶನ್‌ಗಳು ಅಥವ ಸರಕಾರದ ಬೇರೆ ಯಾವುದೇ ಸಂಸ್ಥೆಗಳು ವಿದೇಶಗಳಲ್ಲಿ ರಾಜಕೀಯ ಪಕ್ಷಗಳ ಘೋಷಿತ ಚಟುವಟಿಕೆಗಳನ್ನು ಬೆಂಬಲಿಸುವುದಿಲ್ಲ. ಈ ಹಿಂದೆ ದೇಶದ ಆಳುವ ಪಕ್ಷ ಹೇಗೆ ಈ ದೇಶಗಳಲ್ಲಿ ತಮ್ಮ ಪಕ್ಷಕ್ಕೆ ಸಂಯೋಜಿತರಾದವರ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಸೂಕ್ಷ್ಮ ವಿಧಾನಗಳನ್ನು ಬಳಸಿವೆ ಎಂಬ ಬಗ್ಗೆ ದೂರುಗಳು ಬಂದಿದ್ದವು. **ಆದರೆ ನಾವಿಲ್ಲಿ ನೋಡುತ್ತಿರುವುದು ಒಂದು ಸ್ವಯಂಪ್ರೇರಿತ ಅನಧಿಕೃತ ಕಾರ್ಯಕ್ರಮವನ್ನು ನಿಮ್ಮ ಮಂತ್ರಾಲಯ, ಮಲೇಶ್ಯಾದಲ್ಲಿ ನಿಮ್ಮ ಮಿಶನ್ ಮತ್ತು ಭಾರತ ಸರಕಾರದ ಇತರ ಸಂಘಟನೆಗಳು ಅಧಿಕೃತವಾಗಿ ಬೆಂಬಲಿಸುತ್ತಿವೆ ಎಂಬ ಭಂಡತನದ ಪ್ರಯತ್ನ ಮತ್ತು ಸಾರ್ವಜನಿಕ ಘೋಷಣೆಯನ್ನು"** ಎಂದಿರುವ ಈ ಪತ್ರದಲ್ಲಿ 'ಇದೊಂದು ಬಹಳ ಗಂಭೀರವಾದ ವಿಷಯ, ಈ ಬಗ್ಗೆ ಸರಿಯಾದ ತನಿಖೆ ನಡೆಸಬೇಕು ಎಂಬುದು ನನ್ನ ಭಾವನೆ' ಎಂದು ಯೆಚೂರಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದರು, ಬೇಕಾದರೆ ಈ ವಿಷಯವನ್ನು ಮುಂದಿನ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚಿಸಬಹುದು ಎಂದು ಅವರು ಸೂಚಿಸಿದ್ದರು.

ಇದಕ್ಕೆ ಉತ್ತರಿಸಿರುವ ವಿದೇಶಾಂಗ ಮಂತ್ರಿಗಳು, "'ಓಎಫ್‌ಬಿಜೆಪಿ–ಮಲೇಶ್ಯ' ಭಾರತದ ಹೈಕಮಿಶನ್ ಏರ್ಪಡಿಸಿರುವ ಈ ಸಮುದಾಯ–ಪ್ರೇರಿತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಹುಮ್ಮಸ್ಸಿನಲ್ಲಿ ಅದನ್ನು ಸರಕಾರದ ಹೈಕಮಿಶನ್ ಮತ್ತು ಸರಕಾರೀ ಇಲಾಖೆಗಳು ಬೆಂಬಲಿಸುವ ತನ್ನ ನೇತೃತ್ವದ ಕಾರ್ಯಕ್ರಮ ಎಂದು ಅನಿಷ್ಕೃಷ್ಟವಾಗಿ ಬಿಂಬಿಸಿದೆ. ಆ ಕರಪತ್ರವನ್ನು ಈಗ ಹಿಂತೆಗೆದುಕೊಳ್ಳಲಾಗಿದೆ" ಎಂದು ತಿಳಿಸಿದರು. 'ಓಎಫ್‌ಬಿಜೆಪಿ–ಮಲೇಶ್ಯ' ಕೂಡ ಆ ಕರಪತ್ರದಲ್ಲಿ ಬಿಜೆಪಿ ಚಿಹ್ನೆ ಇದ್ದರೂ ಅದು ತಾನು ಪ್ರಕಟಿಸಿದ್ದಲ್ಲ ಎಂದಿದೆ.

ಈ ಕರಪತ್ರವನ್ನು ವಿದೇಶಾಂಗ ಮಂತ್ರಾಲಯದ ಮಧ್ಯಪ್ರವೇಶದಿಂದ ಹಿಂತೆದುಕೊಂಡಿರುವ ಬಗ್ಗೆ ಸಮಾಧಾನ ವ್ಯಕ್ತಪಡಿಸುತ್ತ ಸೀತಾರಾಮ್ ಯೆಚೂರಿಯವರು, ಈ ರೀತಿ ಮಂತ್ರಾಲಯದ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುವವರನ್ನು ಶಿಕ್ಷಿಸಬೇಕು, ಮತ್ತು ಇಂತಹ ಸರಕಾರೀ ಮುತುವರ್ಜಿ/ಕಾರ್ಯಕ್ರಮಗಳನ್ನು ತಮ್ಮ ಪಕ್ಷಪಾತೀ ಪ್ರಚಾರಕ್ಕೆ ಬಳಸಬಾರದು ಎಂದು ಬಿಜೆಪಿ ಮತ್ತು ಅದಕ್ಕೆ ಸಂಯೋಜಿತಾಗಿರುವವರಿಗೆ ತಿಳಿಸಬೇಕು ಎಂದೂ ವಿದೇಶಾಂಗ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಸಿಐಟಿಯು ಕಾರ್ಯದರ್ಶಿ ಮಂಡಳಿ ಕರೆ ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರಕ್ಕೆ ವ್ಯಾಪಕವಾದ ತಯಾರಿ ನಡೆಸಿ

ಜೂನ್ 13 ಮತ್ತು 14ರಂದು ಸಭೆ ಸೇರಿದ ಸಿಐಟಿಯು ಕಾರ್ಯದರ್ಶಿ ಮಂಡಳಿ ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್)ಕ್ಕೆ ಭಾರೀ ವಿಜಯ ಸಿಗುವಂತೆ ಮಾಡಿದ ಅಲ್ಲಿಯ ದುಡಿಯುವ ಜನರಿಗೆ ಅಭಿನಂದನೆ ಸಲ್ಲಿಸಿದೆ.

ಅದೇ ವೇಳೆಗೆ ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್ ಹರಿಯಬಿಟ್ಟಿರುವ ಬರ್ಬರ ಹಿಂಸಾಚಾರದ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿದೆ. ಎಡಶಕ್ತಿಗಳು, ಕಾರ್ಮಿಕ ಸಂಘಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ದಾಳಿಗಳನ್ನು ನಡೆಸಲಾಗುತ್ತಿದೆ. ಸಿಐಟಿಯು ಕೂಡ ಅವರ ಬೆದರಿಕೆಗಳಿಗೆ, ಹಿಂಸಾಚಾರಗಳಿಗೆ ಗುರಿಯಾಗಿದೆ. ರಾಜ್ಯಆಡಳಿತದ ಸಕ್ರಿಯ ಪೋಷಣೆಯೊಂದಿಗೆ ಇದು ನಡೆಯುತ್ತಿದೆ ಎಂದು ಅದು ಹೇಳಿದೆ.

ಆದರೆ ಪಶ್ಚಿಮ ಬಂಗಾಲದ ಸಿಐಟಿಯು ಸಂಗಾತಿಗಳು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಮೇಲೆ ಈ ರೀತಿಯ ಅಮಾನುಷ ಹಲ್ಲೆಗಳನ್ನು ಕಂಡು ತೆಪ್ಪಗೆ ಕುಳಿತಿಲ್ಲ, ಬದಲಾಗಿ ಧೈರ್ಯದಿಂದ ಎದುರಿಸುತ್ತಿದ್ದಾರೆ, ಜನಗಳನ್ನು ಅಣಿನೆರೆಸುತ್ತಿದ್ದಾರೆ. ಇಂತಹ ಧೀರ ಪ್ರತಿರೋಧಕ್ಕೆ ಸಿಐಟಿಯು ಕಾರ್ಯದರ್ಶಿ ಮಂಡಳಿ ಸೌಹಾರ್ದ ವ್ಯಕ್ತಪಡಿಸಿತು. **ಈ ಬಗ್ಗೆ ದೇಶವ್ಯಾಪಿ ಪ್ರಚಾರ ನಡೆಸಿ ಜೂನ್ 28ರಂದು ಎಲ್ಲ ರಾಜ್ಯಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಬೃಹತ್ ಮತಪ್ರದರ್ಶನಗಳನ್ನು ನಡೆಸಬೇಕು ಎಂದು ಅದು ಕರೆ ನೀಡಿದೆ.**

ಸಪ್ಟಂಬರ್ 2, 2016ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಸಿದ್ಧತೆಗೆ ರಾಜ್ಯಗಳಲ್ಲಿ ಮತ್ತು ಕೈಗಾರಿಕೆಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಸಿಐಟಿಯು ಕಾರ್ಯದರ್ಶಿ ಮಂಡಳಿ ಪರಾಮರ್ಶಿಸಿತು.

ನರೇಂದ್ರ ಮೋದಿ ಸರಕಾರದ ಜನ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ಧೋರಣೆಗಳ ವಿರುದ್ಧ ಮತ್ತು ದೇಶೀ–ವಿದೇಶೀ ಕಾರ್ಪೊರೇಟ್‌ಗಳು ಮತ್ತು ದೊಡ್ಡ ಬಂಡವಾಳಶಾಹಿಗಳ ಆದೇಶಕ್ಕೊಳಗಾಗಿ ದುಡಿಯುವ ಜನಗಳ ಮೇಲೆ ಗುಲಾಮಿಕೆಯನ್ನು ಹೇರುವ ಧೋರಣೆಗಳ ವಿರುದ್ಧ ದೇಶದ ಸುಮಾರಾಗಿ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ನೌಕರರ ಒಕ್ಕೂಟಗಳು ಜಂಟಿಯಾಗಿ ಈ ಮುಷ್ಕರಕ್ಕೆ ಕರೆ ನೀಡಿವೆ.

ಮೋದಿ ಸರಕಾರದ ಎರಡು ವರ್ಷಗಳ ಆಳ್ವಿಕೆಯಲ್ಲಿ ರಾಷ್ಟ್ರೀಯ ಆರ್ಥಿಕ ಮತ್ತು ಜನಗಳ ಬದುಕು ಮತ್ತು ಜೀವನೋಪಾಯಗಳನ್ನೂ ಸರ್ವತೋಮುಖ ಅವನತಿ, ಆಪತ್ತು ಮತ್ತು ಆತಂಕ ಆವರಿಸಿರುವ ಹಿನ್ನೆಲೆಯಲ್ಲಿ ಈ ದೇಶವ್ಯಾಪಿ ಮುಷ್ಕರ ಕಾರ್ಯಾಚರಣೆಯ ತುರ್ತು ಹೆಚ್ಚಿದೆ ಎಂದು ಸಿಐಟಿಯು ಹೇಳಿದೆ.

ಈ ಸಾರ್ವತ್ರಿಕ ಮುಷ್ಕರದ ಐಕ್ಯ ಕರೆಯನ್ನು ಭಾರೀ ಪ್ರಮಾಣದಲ್ಲಿ ಯಶಸ್ವಿಗೊಳಿಸುವ ಮೂಲಕ ದುಡಿಯುವ ಜನತೆ ಮೋದಿ ಸರಕಾರ ತನ್ನ ಎರಡು ವರ್ಷಗಳ ಆಳ್ವಿಕೆ ಭಾರೀ ಯಶಸ್ಸು ಸಾಧಿಸಿದೆ ಎಂದು ನಡೆಸಿರುವ ಸುಳ್ಳುಗಳ ಪ್ರಚಾರಕ್ಕೆ ತಕ್ಕ ಉತ್ತರ ನೀಡಬೇಕು ಎಂದಿರುವ ಸಿಐಟಿಯು ಕಾರ್ಯದರ್ಶಿ ಮಂಡಳಿ ಸಿಐಟಿಯು ರಾಜ್ಯಸಮಿತಿಗಳು ಮತ್ತು ಅಖಿಲ ಭಾರತ ಒಕ್ಕೂಟಗಳು ಮತ್ತು ಸಂಘಟನೆಗಳು ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜೊತೆಗೂಡಿ ಈ ಮುಷ್ಕರ ಕಾರ್ಯಾಚರಣೆ ಎಲ್ಲ ಕಾರ್ಮಿಕ ವಿಭಾಗಗಳನ್ನು ಮತ್ತು ದುಡಿಯುವ ಜನಗಳನ್ನು ತಲುಪುವಂತೆ ಮಾಡಬೇಕು ಎಂದು ಕರೆ ನೀಡಿದೆ.

ಸಿಐಟಿಯುನ 15ನೇ ಅಖಿಲ ಭಾರತ ಸಮ್ಮೇಳನ ಈ ವರ್ಷದ ನವಂಬರ್ 26ರಿಂದ 30ರ ವರೆಗೆ ಒಡಿಶಾದಲ್ಲಿ ನಡೆಯಲಿದೆ, ಇದರಲ್ಲಿ ದೇಶದ ಎಲ್ಲ ವಿಭಾಗಗಳು ಮತ್ತು ಸೇವೆಗಳಿಂದ ಸುಮಾರು 2500 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಆಂಧ್ರಪ್ರದೇಶದಲ್ಲಿ ದುಡಿಯುವ ಮಹಿಳೆಯರ ಅಖಿಲ ಭಾರತ ಸಮಾವೇಶ ನಡೆಯಲಿದೆ. ರಾಜ್ಯಸಮ್ಮೇಳನಗಳು ಸೇರಿದಂತೆ ಇವಕ್ಕೆ ಸಿದ್ಧತೆಗಳ ಪರಾಮರ್ಶೆಯನ್ನು ಕೂಡ ಸಿಐಟಿಯು ಕಾರ್ಯದರ್ಶಿ ಮಂಡಳಿ ಮಾಡಿದೆ.

aAiAvEAzAgEEzAA

ಸಾಮ್ರಾಜ್ಯಶಾಹಿಯ ವಿರುದ್ಧ ಸಾವಿನ
ತನಕದ ಈ ಹೋರಾಟದಲ್ಲಿ ಗಡಿಗಳಿಲ್ಲ.
ಜಗತ್ತಿನ ಯಾವುದೋ ಮೂಲೆಯ
ವಿದ್ಯಮಾನಗಳ ಬಗ್ಗೆ ನಾವು ನಿರ್ಲಕ್ಷ
ಮಾಡುವಂತಿಲ್ಲ. ಯಾವುದೇ ದೇಶದಲ್ಲಿ
ಆಗಿರಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜಯ
ನಮ್ಮ ಜಯ. ಸಾಮ್ರಾಜ್ಯಶಾಹಿಯ ವಿರುದ್ಧ
ಯಾವುದೇ ದೇಶದ
ಸೋಲು ನಮ್ಮ ಸೋಲು.

– ಚೆ ಗವೆರಾ



ಕೇರಳ ಪ್ರತಿಪಕ್ಷ ನಾಯಕರಿಗೆ ಯೆಚೂರಿ ಪತ್ರ ತ್ರಿಪುರಾ ಇತಿಹಾಸ ಪಠ್ಯಕ್ರಮದ ಬಗ್ಗೆ ಎಡ-ವಿರೋಧಿಗಳ ಕುಚೇಷ್ಟೆ ಬಯಲು

ರಾಜಸ್ತಾನದ ಮಾಧ್ಯಮಿಕ ಶಿಕ್ಷಣದ ಇತಿಹಾಸ ಪಠ್ಯಗಳಲ್ಲಿ ನೆಹರೂ ಪ್ರಸ್ತಾಪವನ್ನು ಕೈಬಿಟ್ಟಂತೆ ತ್ರಿಪುರಾದಲ್ಲಿಯೂ ಗಾಂಧೀಜಿ ಮತ್ತು ರಾಷ್ಟ್ರೀಯ ಆಂದೋಲನದ ಇತಿಹಾಸವನ್ನು ಕೈಬಿಡಲಾಗಿದೆ ಎಂಬೊಂದು ಸುದ್ದಿ ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಅಲ್ಲಿನ ಮಾಧ್ಯಮಿಕ ಶಾಲಾ ಪಠ್ಯದಲ್ಲಿ ಕಾರ್ಲ್ ಮಾರ್ಕ್ಸ್, ಅಡಾಲ್ಫ್ ಹಿಟ್ಲರ್, ಫ್ರೆಂಚ್ ಕ್ರಾಂತಿ, ರಶ್ಯನ್ ಕ್ರಾಂತಿ, ಅಷ್ಟೇ ಏಕೆ, ಕ್ರಿಕೆಟ್‌ನ ಇತಿಹಾಸದ ಬಗ್ಗೆಯೂ ಇದೆ, ಆದರೆ ಭಾರತದ ಸ್ವಾತಂತ್ರ್ಯ ಆಂದೋಲನದ ಬಗ್ಗೆಯಾಗಲೀ, ಅದರಲ್ಲಿ ಮಹಾತ್ಮ ಗಾಂಧೀಜಿ ಪಾತ್ರದ ಬಗ್ಗೆಯಾಗಲೀ, ಪ್ರಸ್ತಾಪವೇ ಇಲ್ಲ ಎಂದು ತ್ರಿಪುರ ಹಿಸ್ಟರಿ ಸೊಸೈಟಿ ಸಂತೋಷ ಸಾಹಾ ಹೇಳಿರುವುದಾಗಿಯೂ ಆ ಸುದ್ದಿ ಹೇಳಿತ್ತು. ಸುಭಾಷ್ ಚಂದ್ರ ಬೋಸ್ ಮತ್ತು ಝಾಂಸಿ ರಾಣಿ ಲಕ್ಷ್ಮೀಬಾಯಿ ಬಗ್ಗೆಯೂ ಪ್ರಸ್ತಾಪವಿಲ್ಲ ಎಂದು ಇನ್ನೊಬ್ಬರು ತಮ್ಮ ಟಿಪ್ಪಣಿಯನ್ನೂ ಸೇರಿಸಿದ್ದರು.

ಈ ಬಗ್ಗೆ ಕೇರಳ ವಿಧಾನಸಭೆಯಲ್ಲಿ ಈಗ ಪ್ರತಿಪಕ್ಷವಾಗಿರುವ ಯುಡಿಎಫ್‌ನ ಕಾಂಗ್ರೆಸ್ ಮುಖಂಡ ರಮೇಶ ಚೆನ್ನಿತಾಲ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರಿಗೆ ಇ–ಮೇಲ್ ಮೂಲಕ ಪತ್ರ ಕಳಿಸಿದ್ದರು. ಅದಕ್ಕೆ ಸೀತಾರಾಮ್ ಯೆಚೂರಿಯವರು ಕಳಿಸಿರುವ ಉತ್ತರ ಈಗ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ಉತ್ತರವನ್ನು ನೋಡಿದ ಮೇಲೆ 'ದೊಡ್ಡ' ಪತ್ರಿಕೆಗಳೂ ಸೇರಿದಂತೆ ಎಡಪಕ್ಷಗಳ ವಿರೋಧಿಗಳು, ಅಪಪ್ರಚಾರ ನಡೆಸಲು ಎಂತಹ ಹಾಸ್ಯಾಸ್ಪದ ಮಟ್ಟಕ್ಕೆ ಇಳಿಯಬಲ್ಲರು ಎಂಬುದು ಮತ್ತೊಮ್ಮೆ ಸ್ಪಷ್ಟವಾಗುತ್ತದೆ.

ಸೀತಾರಾಮ್ ಯೆಚೂರಿಯವರು ಕೇರಳದ ಪ್ರತಿಪಕ್ಷದ ಮುಖಂಡರಿಗೆ ಕಳಿಸಿದ ಉತ್ತರದಲ್ಲಿ ತಾವು ತಮ್ಮ ಪಕ್ಷದ ತ್ರಿಪುರಾ ರಾಜ್ಯ ಸಮಿತಿ ಮತ್ತು ತ್ರಿಪುರಾ ಸರಕಾರದ ಶಿಕ್ಷಣ ಮಂತ್ರಿಗಳನ್ನು ಸಂಪರ್ಕಿಸಿ ಪಡೆದ ಮಾಹಿತಿಗಳ ಜೊತೆಗೆ ತಿಪುರ ಮಾಧ್ಯಮಿಕ ಶಿಕ್ಷಣ ಮಂಡಳಿಯ 2015–16ರಿಂದ ಜಾರಿಗೆ ತಂದಿರುವ ಇತಿಹಾಸವೂ ಸೇರಿದಂತೆ ಸಾಮಾಜಿಕ ವಿಜ್ಞಾನಗಳ ಹೊಸ ಪಠ್ಯಕ್ರಮದ ವಿವರಗಳನ್ನು ಲಗತ್ತಿಸಿದ್ದಾರೆ.

ಈ ಪಠ್ಯಕ್ರಮದ ಮೇಲೆ ಕಣ್ಣು ಹಾಯಿಸಿದರೆ, ಹತ್ತನೇ ತರಗತಿಯ ಪಠ್ಯದಲ್ಲಿ ರಾಷ್ಟ್ರೀಯ ಆಂದೋಲನ, ಸಾಮಾಜಿಕ ಸುಧಾರಣಾ ಆಂದೋಲನಗಳು, ರೈತರು ಮತ್ತು ಕಾರ್ಮಿಕರ ಹೋರಾಟಗಳು, ಮಹಾತ್ಮ ಗಾಂಧಿಯವರ ಪಾತ್ರ, ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪಾತ್ರ, ಅಸಹಕಾರ ಚಳುವಳಿ, ಸುಭಾಷ್‌ಚಂದ್ರ ಬೋಸ್, ಆಝಾದ್ ಹಿಂದ್ ಫೌಜ್(ಐಎನ್‌ಎ) ಇತ್ಯಾದಿಗಳೆಲ್ಲ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಇದಲ್ಲದೆ ಈಶಾನ್ಯ ಭಾರತದ ಬಗ್ಗೆ ಒಂದು ವಿಭಾಗವೂ ಇದೆ. ಅದರಲ್ಲಿ ಅಸ್ಸಾಂನ ಇತಿಹಾಸ, 1857ರ ಕ್ರಾಂತಿಯಿಂದ ಹಿಡಿದು ಈಶಾನ್ಯ ಭಾರತದ 'ಏಳು ಸೋದರಿಯರು' ಎಂದು ಹೇಳಲಾಗುವ ರಾಜ್ಯಗಳ ನಿರ್ಮಾಣದ ಇತಿಹಾಸವೂ ಇದೆ.

"ಒಂಭತ್ತನೇ ತರಗತಿಯ ಸಮಾಜ ವಿಜ್ಞಾನಗಳ

ಪುಟ 14 ನೋಡಿ

ಜನ–ವಿರೋಧಿ ಚಿಲ್ಲರೆ ವ್ಯಾಪಾರ ನೀತಿ

ಸಂಪಾದಕೀಯ

ಜೂನ್ 8ರಂದು ನಡೆದ ರಾಜ್ಯ ಮಂತ್ರಿಮಂಡಲದ ಸಭೆಯಲ್ಲಿ ಚಿಲ್ಲರೆ ವ್ಯಾಪಾರ ನೀತಿಯೊಂದನ್ನು ಅಂಗೀಕರಿಸಲಾಗಿದೆ. ಇದು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಹೂಡಿಕೆಯನ್ನು ಉತ್ತೇಜಿಸುವ ಮತ್ತು ಈ ಕ್ಷೇತ್ರದಲ್ಲಿ ಉದ್ಯೋಗಗಳನ್ನು ಹೆಚ್ಚಿಸುವ ನೀತಿ ಎಂದು ಸರಕಾರ ಹೇಳಿಕೊಂಡಿದೆ. ಈ ನೀತಿಯನ್ನು ಘೋಷಿಸುತ್ತಾ ಈ ನೀತಿಗೆ ಅನುಗುಣವಾಗಿ ಕೆಲವು ಕಾಯಿದೆಗಳು ಮತ್ತು ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗುವುದು ಎಂದು ಕಾನೂನು ಮಂತ್ರಿ ಟಿ.ಬಿ. ಜಯಚಂದ್ರ ಅವರು ಹೇಳಿದ್ದಾರೆ.

ಹೊಸ ಚಿಲ್ಲರೆ ವ್ಯಾಪಾರ ನೀತಿಯ ಪ್ರಕಾರ ಚಿಲ್ಲರೆ ವ್ಯಾಪಾರದ ಅಂಗಡಿಗಳಿಗೆ ಇದ್ದ ಸಮಯದ ಮತ್ತು ವಾರದ ರಜಾ ನಿಯಮಗಳನ್ನು ತೆಗೆದು ಹಾಕಲಾಗುವುದು. ವರ್ಷದ 365 ದಿನಗಳೂ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 11 ಗಂಟೆಯ ವರೆಗೆ ಅಂಗಡಿಗಳು ತೆಗೆದಿರಬಹುದು. ಮಹಿಳೆಯರ ರಾತ್ರಿ ಪಾಳಿಗೆ ಸಂಬಂಧಿಸಿದ ನಿರ್ಬಂಧವನ್ನು ತೆಗೆಯಲಾಗುವುದು. ಈಗ ಅಂಗಡಿಗಳು ಮತ್ತು ಇತರ ಸಂಸ್ಥೆಗಳ ಕಾನೂನಿನ (ಶಾಪ್ಸ್ ಅಂಡ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್) ಅನ್ವಯ ಇರುವ ಕಾರ್ಮಿಕ ಸಂಬಂಧಿ ಕೆಲಸದ ಗಂಟೆಗಳು, ಪಾಳಿ ಹಾಗೂ ಅರೆ–ಕಾಲಿಕ ಕೆಲಸಗಾರರನ್ನು ಬಳಸುವ ಬಗೆಗಿನ ನಿರ್ಬಂಧ ಮುಂತಾದ ಕ್ರಮಗಳನ್ನು ಸಡಿಲಿಸಲಾಗುವುದು. ಆಹಾರ ಮತ್ತು ದಿನಸಿ ಅಂಗಡಿಗಳ ಕ್ಷೇತ್ರದ ಕಾರ್ಮಿಕರ ಮುಷ್ಕರವನ್ನು ನಿಷೇಧಿಸಲು ಈ ಕ್ಷೇತ್ರವನ್ನು ಎಸ್ಮಾ (ಅಗತ್ಯ ಸೇವೆಗಳ ನಿರ್ವಹಣೆ ಕಾನೂನು) ಕಾಯಿದೆಯಡಿ ತರಲಾಗುವುದು. ಇದಕ್ಕೆ ಎಸ್ಮಾ ಕಾಯಿದೆಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗುವುದು ಎಂಬುದು ಸಚಿವರು ಈ ನೀತಿಯ ಮುಖ್ಯಾಂಶಗಳು ಎಂದಿದ್ದಾರೆ ಸಚಿವರು.

ಶಾಪ್ಸ್ ಅಂಡ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್ ಅನ್ವಯ ಇಂತಹ ಸಂಸ್ಥೆಗಳ ಮೇಲೆ ಇರುವ ಹಲವು ಬಾಧ್ಯತೆಗಳನ್ನೂ ಸಡಿಲಿಸಲಾಗುವುದು. ಇವುಗಳಲ್ಲಿ ಆಹಾರ ಪಾರ್ಥಗಳ ದಾಸ್ತಾನು ಮೇಲೆ ಇರುವ ಮಿತಿಗಳನ್ನು ತೆಗೆಯುವುದು ಸೇರಿದೆ. ಅಲ್ಲದೆ ಇರುವ ಇತರ ಬಾಧ್ಯತೆಗಳ ಜಾರಿಯ ಪರೀಕ್ಷಣೆಯನ್ನು 'ಸರಳಗೊಳಿಸಲಾಗುವುದು'. ಈಗ ಇರುವ 'ಇನಸ್ಪೆಕ್ಟರ್ ರಾಜ್'ನ್ನು ಕೊನೆಗೊಳಿಸಲಾಗುವುದು. ಈ ಸಂಸ್ಥೆಗಳು 'ಸೆಲ್ಫ್ ಇನಸ್ಪೆಕ್ಷನ್' ಸರ್ಟಿಫಿಕೆಟ್ ಕೊಟ್ಟರೆ ಸಾಕು. ಇಲೆಕ್ಟ್ರಾನಿಕ್ ಬಿಲ್ ಕೊಡುವುದನ್ನು ಕಡ್ಡಾಯ ಮಾಡಲಾಗುವುದು.

ಈಗ ಚಿಲ್ಲರೆ ವ್ಯಾಪಾರ ಸಂಸ್ಥೆ ಆರಂಭಿಸಲು ಹಲವು ಕಾನೂನುಗಳಡಿ ಹಲವು ವಿಭಾಗಗಳ ಅನುಮತಿ ಪಡೆಯಬೇಕಾಗಿದೆ. ಚಿಲ್ಲರೆ ವ್ಯಾಪಾರ ಕ್ಷೇತ್ರಕ್ಕೆ ಹೊಸ ಹೂಡಿಕೆ ಮಾಡುವವರಿಗೆ ಸುಲಭವಾಗುವಂತೆ 'ಏಕ ಗವಾಕ್ಷಿ ಕೇಂದ್ರ'ಗಳನ್ನು ತೆಗೆಯಲಾಗುವುದು ಎಂದು ಚಿಲ್ಲರೆ ವ್ಯಾಪಾರ ನೀತಿ ಹೇಳುತ್ತದೆ.

ಕಾನೂನು ಮಂತ್ರಿಗಳು ಈ ನೀತಿ ಕರ್ನಾಟಕ ಸರಕಾರದ ಹೊಸ ಕ್ರಮ ಎನ್ನುವಂತೆ ಬಣ್ಣಿಸಿದ್ದಾರೆ. ಈ ನೀತಿ ಭಾರತೀಯ ಚಿಲ್ಲರೆ ವ್ಯಾಪಾರಿಗಳ ಸಂಘ (ಆರ್.ಎ.ಐ. – ರಿಟೈಲರ್ಸ್ ಅಸೋಶಿಯೇಶನ್ ಆಫ್ ಇಂಡಿಯಾ) ಕರ್ನಾಟಕ ಸರಕಾರಕ್ಕೆ ಸೆಪ್ಟೆಂಬರ್ 2015ರಲ್ಲಿ ಕೈಗಾರಿಕಾ ಮಂತ್ರಿಗಳನ್ನು ಭೇಟಿ ಮಾಡಿ, ಅವರ ಜತೆ ಲಾಬಿ ಮಾಡಿ ಸಲ್ಲಿಸಿದ ಮನವಿಯ 'ಕ್ಸೆರಾಕ್ಸ್ ಕಾಪಿ'. ಈ ಮನವಿ ಆರ್.ಎ.ಐ. ಯ ವೆಬ್ ಸೈಟಿನಲ್ಲಿ (http://rai.net.in/images/Representations/Gov_of_karnataka.pdf) ಲಭ್ಯವಿದೆ. ವಿದೇಶೀ ಹೂಡಿಕೆದಾರರು ಪ್ರಬಲವಾಗಿರುವ ಈ ಸಂಘ ದೇಶದಾದ್ಯಂತ ಇಂತಹ ಚಿಲ್ಲರೆ ವ್ಯಾಪಾರ ನೀತಿಯನ್ನು ಅಂಗೀಕರಿಸುವಂತೆ ರಾಜ್ಯ ಸರಕಾರಗಳ ಜತೆ ಲಾಬಿ ಮಾಡುತ್ತಿದೆ.

ಈ ನೀತಿ ಅತ್ಯಂತ ವಿವಾದಾತ್ಮಕವಾಗಿರುವ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಮತ್ತು ದೇಶೀ ಕಾರ್ಪೊರೇಟುಗಳ ಬಂಡವಾಳ ಹೂಡಿಕೆಯ ನೀತಿಯನ್ನು ಜಾರಿಗೆ ತರುವ ಪ್ರಮುಖ ಉದ್ದೇಶ ಹೊಂದಿರುವಂತಹದ್ದು. ಭಾರತದಲ್ಲಿ 4 ಕೋಟಿಗೂ ಹೆಚ್ಚು ಸಣ್ಣ ಚಿಲ್ಲರೆ ವ್ಯಾಪಾರಿಗಳಿದ್ದು ಈ ಕ್ಷೇತ್ರಕ್ಕೆ ಕಾರ್ಪೊರೇಟುಗಳ ಹೂಡಿಕೆ ಬಂದರೆ ಇವರು ತಮ್ಮ ಜೀವನೋಪಾಯ ಕಳೆದುಕೊಳ್ಳುತ್ತಾರೆ. ಅದೇ ಪ್ರಮಾಣದಲ್ಲಿ ಹೊಸ ಹೂಡಿಕೆಯಿಂದ ಉದ್ಯೋಗಗಳು ಸೃಷ್ಟಿಯಾಗುವುದಿಲ್ಲ ಎಂಬುದು ಸರ್ವವಿದಿತ. ಭಾರತದ ಸುಮಾರು ಕಾಲು ಭಾಗ ಸಣ್ಣ ಚಿಲ್ಲರೆ ವ್ಯಾಪಾರದ ಮೇಲೆ ಅವಲಂಬಿಸಿವೆ. ಈಗಾಗಲೇ ಭಾರತದ ಮತ್ತು ವಿದೇಶಿ ದೊಡ್ಡ ಕಾರ್ಪೊರೇಟುಗಳು ಚಿಲ್ಲರೆ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಿವೆ. ಪುಸ್ತಕ, ಇಲೆಕ್ಟ್ರಾನಿಕ್ಸ್ ಸಲಕರಣೆಗಳ ಮಾರಾಟದ ಕೆಲವು ಕ್ಷೇತ್ರಗಳಲ್ಲಿ ದೊಡ್ಡ ಕಾರ್ಪೊರೇಟುಗಳ ಪ್ರವೇಶದಿಂದ ಈಗಾಗಲೇ ಸಾಕಷ್ಟು ಪ್ರಬಲವಾಗಿರುವ ಸಣ್ಣ ಮಧ್ಯಮ ಚಿಲ್ಲರೆ ಅಂಗಡಿಗಳು ಮುಚ್ಚುತ್ತಿವೆ. ಆದ್ದರಿಂದ ಈ ನೀತಿ ಉದ್ಯೋಗ ಸೃಷ್ಟಿಸುತ್ತದೆ ಎಂಬುದು ಹಳೆಯ ಸುಳ್ಳು. ಮಾತ್ರವಲ್ಲ ದೇಶದ ಬಹುಭಾಗ ಬಡ ಜನತೆ ಈ ಸಣ್ಣ ವ್ಯಾಪಾರಿಗಳ ಸೇವೆ ಮೇಲೆ ಅವಲಂಬಿತವಾಗಿದ್ದು ತೊಂದರೆಗೊಳಗಾಗುತ್ತಾರೆ. ಇವರಿಗೆ ಇದೇ ಸೇವೆಯನ್ನು ಕಾರ್ಪೊರೆಟ್ ಚಿಲ್ಲರೆ ವ್ಯಾಪಾರ ಒದಗಿಸುವ ಸಾಧ್ಯತೆ ಬಹಳ ಕಡಿಮೆ. ಆದ್ದರಿಂದ ಈ ನೀತಿ ಜನ–ವಿರೋಧಿ ಎಂಬುದು ಸ್ಪಷ್ಟ.

ಇದೊಂದು ಕಾರ್ಮಿಕ–ವಿರೋಧಿ ನೀತಿ ಎಂಬುದು ಅಷ್ಟೇ ಸ್ಪಷ್ಟ. ಈಗಲೇ ಈ ದೊಡ್ಡ ಅಸಂಘಟಿತ ವಲಯದಲ್ಲಿ ಕಾರ್ಮಿಕರಿಗೆ ರಕ್ಷಣೆ ಕೊಡುವ ಕಾನೂನಿನ ಜಾರಿ ಬಹಳ ಅಸಮರ್ಪಕವಾಗಿದೆ. ಕೆಲಸದ ಅವಧಿ, ವಾರದ ರಜಾದಿನ, ಪಾಳಿ ಕೆಲಸ, ಮಹಿಳೆಯರಿಗೆ ರಾತ್ರಿ ಪಾಳಿ ಮುಂತಾದ ಕ್ರಮಗಳನ್ನು ಇಲ್ಲವಾಗಿಸುವ ಹುನ್ನಾರ ಈ ನೀತಿಯಲ್ಲಿ ಸ್ಪಷ್ಟವಾಗಿದೆ. ಮಹಿಳೆಯರಿಗೆ ಹಗಲಲ್ಲೇ ಮತ್ತು ಯಾವುದೇ ಕೆಲಸದ ಸ್ಥಳಗಳಲ್ಲಿ ರಕ್ಷಣೆ ಕೊಡಲು ಸಂಪೂರ್ಣ ವಿಫಲವಾಗಿರುವ ಸರಕಾರ ಹಾಗೂ ಖಾಸಗಿ ಮತ್ತು ಕಾರ್ಪೊರೆಟ್ ಸಂಸ್ಥೆಗಳು ಮಹಿಳೆಯರಿಗೆ ತಡ ರಾತ್ರಿ ಮತ್ತು ರಾತ್ರಿ ಪಾಳಿಯಲ್ಲಿ ಸಾರಿಗೆ ಮತ್ತು ಸುರಕ್ಷೆಯ ವ್ಯವಸ್ಥೆ ಮಾಡುತ್ತಾರೆ ಎಂದು ನಿರೀಕ್ಷಿಸುವುದೂ ಮೂರ್ಖತನವಾದೀತು. ಅದರಲ್ಲೂ ಕಾನೂನಿನ ಬಾಧ್ಯತೆಗಳ ಜಾರಿಗೆ 'ಸೆಲ್ಫ್ ಇನಸ್ಪೆಕ್ಷನ್' ವ್ಯವಸ್ಥೆ ಇರುವಾಗ. ಆಹಾರ ಮತ್ತು ದಿನಸಿ ಅಂಗಡಿಗಳ ಕಾರ್ಮಿಕರ ಮುಷ್ಕರದ ಹಕ್ಕನ್ನು ಎಸ್ಮಾ ವನ್ನು ಅವರಿಗೆ ವಿಸ್ತರಿಸುವ ಮೂಲಕ ಮೊಟಕುಗೊಳಿಸಿರುವುದು ಅತ್ಯಂತ ಅಪಾಯಕಾರಿ ಕ್ರಮ. ಇದು ಚಿಲ್ಲರೆ ವ್ಯಾಪಾರ ಸಂಘಟಿತ ವಲಯವಾದಾಗ ಕಾರ್ಮಿಕರು ಸಂಘಟಿತರಾಗಿ ತಮ್ಮ ಪಾಲಿನ ವೇತನ ಸವಲತ್ತುಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕುತ್ತದೆ.

ಈ ನೀತಿ ಬಳಕೆದಾರರಿಗೆ ಅನುಕೂಲ ಮಾಡಿಕೊಡುತ್ತದೆ ಎನ್ನುವುದೂ ಬೊಗಳೆ. ಆಹಾರ ಮತ್ತು ಇತರ ಅಗತ್ಯ ವಸ್ತುಗಳ ದಾಸ್ತಾನುಗಳ ಮೇಲೆ ಮಿತಿ ಕಾಳಸಂತೆ ಮತ್ತು ಕೊರತೆಯ ಸಮಯದಲ್ಲಿ ವಿಪರೀತ ಬೆಲೆ ಏರಿಕೆ ತಡೆಯಲು ಇರುವ ಕ್ರಮ. ವ್ಯಾಪಾರಿಗಳ ಲಾಭಕೋರತನದಿಂದ ಬಳಕೆದಾರರನ್ನು ರಕ್ಷಿಸಲು ಸರಕಾರಕ್ಕೆ ಇರುವ ಒಂದೇ ಮಾರ್ಗ. ಇದನ್ನು ತೆಗೆದು ಹಾಕಿರುವುದು ಗಂಭೀರ ಬಳಕೆದಾರ–ವಿರೋಧಿ ಕ್ರಮ. ಇಂತಹ ಮಿತಿ ಕಾನೂನು ಇರುವಾಗಲೇ ಅದಾನಿ ಕಂಪನಿಯೊಂದು ಬೇಳೆಗಳ ಭಾರೀ ದಾಸ್ತಾನು ಮಾಡಿ ಬೆಲೆಯನ್ನು ಎರಡು ಪಟ್ಟು ಮಾಡಿ ಲಾಭ ಸಂಪಾದಿಸಿತ್ತು ಎಂಬ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು. ಇಲೆಕ್ಟ್ರಾನಿಕ್ ಬಿಲ್ ಕೊಡುವುದು ಯಾವ ರೀತಿಯಲ್ಲಿ ಬಳಕೆದಾರರನ್ನು ರಕ್ಷಿಸುವುದು ಎಂಬುದು ನೀತಿಯಿಂದ ಸ್ಪಷ್ಟವಿಲ್ಲ. ಇದು ಸಣ್ಣ ಅಂಗಡಿಗಳಿಗೆ ಜಾರಿ ಮಾಡಲು ಕಷ್ಟವಾಗಿ ಮಧ್ಯಮ ದೊಡ್ಡ ಅಂಗಡಿಗಳೊಂದಿಗೆ ಸ್ಪರ್ಧಿಸುವ ಕ್ಷಮತೆಯನ್ನು ಇನ್ನಷ್ಟು ಕಡಿಮೆ ಮಾಡಬಹುದು ಅಷ್ಟೇ. ದೊಡ್ಡ ಕಾರ್ಪೊರೆಟ್ ಬಲದ ಎದುರು ಬಳಕೆದಾರರ ರಕ್ಷಣೆ ಇನ್ನಷ್ಟು ಕಷ್ಟಸಾಧ್ಯವಾಗಲಿದೆ. ಇವೆಲ್ಲ ಅಂಶಗಳನ್ನು ಗಮನಿಸಿದರೆ ಈ ನೀತಿ ಯಾವುದೇ ರೀತಿಯಲ್ಲಿ ಬಳಕೆದಾರರಿಗೆ ಅನುಕೂಲ ಮಾಡಿಕೊಡುವುದಿಲ್ಲ. ಬದಲಾಗಿ ಸ್ಪಷ್ಟವಾಗಿ ಬಳಕೆದಾರ–ವಿರೋಧಿ ಎಂಬುದು ಸ್ಪಷ್ಟ.

ಆದ್ದರಿಂದ ಮಂತ್ರಿ ಮಂಡಲ ಅನುಮೋದಿಸಿರುವ ಚಿಲ್ಲರೆ ವ್ಯಾಪಾರ ನೀತಿ ಬಳಕೆದಾರ–ವಿರೋಧಿ, ಉದ್ಯೋಗ ನಾಶಕ, ಕಾರ್ಮಿಕ–ವಿರೋಧಿ, ಜನ–ವಿರೋಧಿ ದೇಶ–ವಿರೋದಿ. ಈ ನೀತಿಯನ್ನು ವ್ಯಾಪಕವಾಗಿ ಖಂಡಿಸಿ ಜನತೆಯಲ್ಲಿ ಕಾರ್ಮಿಕರಲ್ಲಿ ಎಚ್ಚರ ಮೂಡಿಸಿ ಜಾರಿಮಾಡದಂತೆ ಪ್ರತಿರೋಧ ಒಡ್ಡಬೇಕಾಗಿದೆ. ಈ ನೀತಿಯನ್ನು ಜಾರಿಗೆ ತರಲು ಶಾಪ್ಸ್ ಅಂಡ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್, ಎಸ್ಮಾ ಮುಂತಾದ ಕಾನೂನುಗಳಲ್ಲೂ ಇತರ ನಿಯಮಗಳಲ್ಲೂ ತಿದ್ದುಪಡಿ ತರುವುದನ್ನು ಬಲವಾಗಿ ವಿರೋಧಿಸಬೇಕಾಗಿದೆ.

ನಮ್ಮ ಚುರು-ಟ್ವೀಟ್

@khushsundar Jun 16
ಫಿಲಮನ್ನು ಬುಡಮೇಲು ಮಾಡಲು ಈ ಹುಚ್ಚರು ನಡೆಸಿದ ಒಂದು ಉದ್ದೇಶಪೂರ್ವಕ ಕೃತ್ಯ. ಸೆನ್ಸಾರ್ ಕಾಪಿ ಲೀಕ್ ಆಗಿದೆ. ಇದರ ಹಿಂದೆ ಯಾರಿದ್ದಾರೆ ಎಂಬುದು ಸ್ಪಷ್ಟ #UdtaPunjabLeaked

– *ಖುಶ್ಬು ಸುಂದರ್*
(ತಮಿಳು ನಟಿ, ಕಾಂಗ್ರೆಸ್ ವಕ್ತಾರೆ)

ನಾಳಿನ ಕಾರ್ಯಕ್ರಮಗಳು

ಜೂನ್ 21	: ಬೀದಿ ಬದಿ ಮಾರಾಟಗಾರರ ರಾಜ್ಯ ಮಟ್ಟದ ಪ್ರಥಮ ಸಮಾವೇಶ, ಸೂರಿ ಭವನ, ಬೆಂಗಳೂರು.
ಜೂನ್ 30	: ಕಾಂ.ಎಸ್.ಪ್ರಸನ್ನಕುಮಾರ್ ಜನ್ಮದಿನಾಚರಣೆ : "ನಿರುದ್ಯೋಗ ಸಮಸ್ಯೆ" ಕುರಿತು ಕಿರುಹೊತ್ತಿಗೆ ಬಿಡುಗಡೆ ಡಾ.ಚಂದ್ರ ಪೂಜಾರಿರವರಿಂದ. ಸೂರಿ ಭವನ ಬೆಂಗಳೂರು.
ಜುಲೈ 1–3	: ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೌನ್ಸಿಲ್ ಸಭೆ, ಶಿಕ್ಷಕರ ಸದನ, ಮೈಸೂರು ಬ್ಯಾಂಕ್ ಹತ್ತಿರ, ಬೆಂಗಳೂರು.
ಜುಲೈ 11	: ಮಿಷನ್ ಮೋಡ್ ವಿರೋಧಿಸಿ ದೇಶವ್ಯಾಪಿ ಅಂಗನವಾಡಿ ಕೇಂದ್ರಗಳ ಬಂದ್
ಆಗಸ್ಟ್ 9	: ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜೂನ್ 19	: ಧಾರವಾಡ ಜಿಲ್ಲೆ
ಜೂನ್ 24–25	: ಕೊಪ್ಪಳ
ಜೂನ್ 26–27	: ಬಳ್ಳಾರಿ ಜಿಲ್ಲೆ
ಜುಲೈ 8–9	: ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17	: ಮೈಸೂರು ಜಿಲ್ಲೆ
ಜುಲೈ 23–24	: ದಾವಣಗೆರೆ ಜಿಲ್ಲೆ
ಜುಲೈ 24–25	: ಬೆಂಗಳೂರು ದಕ್ಷಿಣ ಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ
ಜುಲೈ 30–31	: ಉತ್ತರ ಕನ್ನಡ
ಜುಲೈ 30–31	: ಚಿತ್ರದುರ್ಗ
ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 31–ಆಗಸ್ಟ್ 01	: ಕೋಲಾರ ಜಿಲ್ಲೆ
ಆಗಸ್ಟ್ 06–07	: ಬೆಳಗಾಂ
ಆಗಸ್ಟ್ 6–7	: ತುಮಕೂರು ಜಿಲ್ಲೆ
ಆಗಸ್ಟ್ 13–14	: ಹಾಸನ ಜಿಲ್ಲೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಜೆಡಿ–ಎಸ್ : ಈ ಅಧಃಪತನಗಳಿಗೆ ಹೊಣೆ ಯಾರು?

ರಾಜಕಾರಣ ಕೇವಲ ಎರಡು ದೈತ್ಯ ಬಂಡವಾಳಶಾಹಿ ಪಕ್ಷಗಳ ನಡುವೆಯೇ ಕ್ರೋಢೀಕರಣಗೊಳ್ಳುವುದು ಅದರಲ್ಲೂ ಬಿಜೆಪಿ 'ಕಾಂಗ್ರೆಸ್ ಮುಕ್ತ ಭಾರತ' ಮಾಡುವ ಘೋಷಣೆ ಜಾರಿಯಲ್ಲಿ ಮಗ್ನವಾಗಿರುವಾಗ ಕಾಂಗ್ರೆಸ್ ವಿರೋಧಿ ಮತಗಳು ಬಿಜೆಪಿಯತ್ತಲೇ ಕ್ರೋಢೀಕರಣಗೊಳ್ಳುವುದು ಅಪಾಯಕಾರಿ. ಆದರೆ ಜೆಡಿ–ಎಸ್ ಮುಖಂಡತ್ವಕ್ಕೆ ಇದರ ಪರಿವೇ ಇಲ್ಲ, ಅದು ಬೇಕೂ ಆಗಿಲ್ಲ. ಕಡಿಮೆ ಹಣ ಹೂಡಿ ಹೆಚ್ಚು ಲಾಭ ಗಳಿಸುವ ಯೋಜನೆಗಳು ಜನಪ್ರಿಯವಲ್ಲವೇ? ಉದಾರೀಕರಣವನ್ನು ಅಪ್ಪಿಕೊಂಡಿರುವ ಪ್ರಾದೇಶಿಕ ರಾಜಕೀಯ ಶಕ್ತಿಗಳ ಅಧಃಪತನದ ರಾಜಕಾರಣಕ್ಕೆ ಇದು ಉದಾಹರಣೆ. ಜನ ಬೆಂಬಲ ನೆಚ್ಚಿದ ರಾಜಕಾರಣಕ್ಕೂ, ಉದ್ಯಮಿಗಳ ಹಣ ನಂಬಿದ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸ!

ಎಸ್.ವೈ. ಗುರುಶಾಂತ

ಕರ್ನಾಟಕ ವಿಧಾನಸಭೆಯಿಂದ ರಾಜ್ಯ ಸಭೆಗೆ ನಾಲ್ಕು ಸದಸ್ಯರ ಆಯ್ಕೆಯ ಚುನಾವಣೆ ರಾಜ್ಯದ ರಾಜಕೀಯದಲ್ಲಿ ಹಲವಾರು ಗಂಭೀರ ಬೆಳವಣಿಗೆಗಳಿಗೆ ಕಾರಣವಾಗಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷ ಮೇಲುಗೈ ಸಾಧಿಸಿದ ಸಂತೋಷದಲ್ಲಿದ್ದರೆ, ಜೆಡಿ–ಎಸ್ ಪಕ್ಷ ಶಕ್ತಿಹೀನವಾಗಿ ನಷ್ಟದ ನರಳಿಕೆಯಲ್ಲಿದೆ. ಬಿಜೆಪಿ ಒಂದು ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿ ಹಾಲಿ ಸಂದರ್ಭದ ಲಾಭಕ್ಕೆ ಹೊಂಚು ಹಾಕಿದೆ. ಇವೆಲ್ಲವುಗಳ ನಡುವೆ ರಾಜ್ಯದ ಸಾಮಾನ್ಯ ಮತದಾರರು ಹತಾಶೆಯಿಂದ 'ದಾರಿ ಯಾವುದಯ್ಯಾ' ಎಂದು ಬಿಸಿಯುಸಿರು ಬಿಟ್ಟುಕೊಂಡು ಕುಳಿತಿದ್ದಾರೆ.

ಹಣದ ಮೇಲುಗೈ

ತನ್ನ ಸಂಖ್ಯಾ ಬಲದಲ್ಲಿ ಎರಡು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲುವ ಅವಕಾಶವಿದ್ದ ಕಾಂಗ್ರೆಸ್ ಉಳಿದ ಸದಸ್ಯರ ಬಲಕ್ಕೆ ಇತರೆ ಪಕ್ಷಗಳಿಂದ ಶಾಸಕರನ್ನು ಸೆಳೆದು ಮೂರನೆಯ ಅಭ್ಯರ್ಥಿಯನ್ನು ಗೆಲ್ಲುವಂತೆ ನೋಡಿಕೊಂಡಿತು. ಹಾಗೆ ಬಿಜೆಪಿ ಸಹ ಪಕ್ಷೇತರರ ಬೆಂಬಲವನ್ನು ಪಡೆದು ಒಂದು ಸ್ಥಾನವನ್ನು ಗಳಿಸಿತು. ಆದರೆ ಜೆಡಿ–ಎಸ್ ತನ್ನ ಬಲದೊಂದಿಗೆ ಇತರೆ ಪಕ್ಷೇತರರನ್ನು ಸೆಳೆಯುವ ತಂತ್ರ ಮಾಡಿತಾದರೂ ಅದರಲ್ಲಿ ಯಶ ಕಾಣಲಿಲ್ಲ. ಅಷ್ಟು ಮಾತ್ರವಲ್ಲ, ತನ್ನದೇ ಪಕ್ಷದ ಅತ್ಯಂತ ಪ್ರಮುಖ 8 ಶಾಸಕರನ್ನು ಕಳೆದುಕೊಳ್ಳ ಬೇಕಾಯಿತು! ಇದರಲ್ಲಿ ಕಾಂಗ್ರೆಸ್ ಪಕ್ಷ ಯಶಸ್ವಿಯಾಯಿತು.

ಈ ಸೆಳೆಯುವ ಮತ್ತು ಗಳಿಸುವ ಪ್ರಕ್ರಿಯೆಯಲ್ಲಿ ಪಾತ್ರ ವಹಿಸಿದ ಪ್ರಧಾನ ಶಕ್ತಿಯೆಂದರೆ ಹಣ, ಹಣ, ಮತ್ತು ಅಧಿಕಾರದ ಆಮಿಷಗಳು! ಇದು ಒಟ್ಟು ರಾಜಕೀಯ ವಾತಾವರಣವನ್ನೇ ಕಲುಷಿತಗೊಳಿಸಿದ ಹೇಯಕರ ಘಟನೆ. ಯಾವುದೇ ನಾಚಿಕೆಯೂ ಇಲ್ಲದ ಬಹಿರಂಗ ಆಟದಲ್ಲಿ ಈ ಎಲ್ಲರೂ ಮಗ್ನರು. ಹೀಗಾಗಿಯೇ ಯಾವ ಪಕ್ಷವೂ ರಾಜ್ಯ ಸಭೆಯ ಚುನಾವಣೆಯ ಮಹತ್ವದ ಬಗ್ಗೆ ಚರ್ಚೆಯನ್ನೇ ಮಾಡಲಿಲ್ಲ. ದೇಶದ ಹಲವಾರು ರಾಜ್ಯಗಳಲ್ಲಿ ನಡೆದ ಈ ಚುನಾವಣೆ ದೇಶದ ಪಾರ್ಲಿಮೆಂಟಿನಲ್ಲಿ ಅದರಲ್ಲೂ ಮೇಲ್ಮನೆ ರಾಜ್ಯ ಸಭೆಯಲ್ಲಿ ಗಹನವಾದ ಪಾತ್ರ ವಹಿಸುವುದಿತ್ತು. ಬಹುಮತವಿಲ್ಲದ ಬಿಜೆಪಿ ಮನಸೋ ಇಚ್ಛೆ ಆಟ ಆಡಲು, ಭೂ ಸುಧಾರಣೆ ತಿದ್ದುಪಡಿಯಂತಹ ಕರಾಳ ಮಸೂದೆಗಳನ್ನು ಪಾಸ್ ಮಾಡಿಸಿಕೊಳ್ಳಲು ಬಹುಮತದ ಅಗತ್ಯವಿತ್ತು. ಅದಕ್ಕಾಗಿ ಈ ಚುನಾವಣೆ ನಿರ್ಣಾಯಕವಾಗಿತ್ತು. ಬಿಜೆಪಿಯ ಈ ತಂತ್ರವನ್ನು ಸೋಲಿಸುವ ರಾಜಕೀಯ ಅಜೆಂಡಾವನ್ನು ಪೂರ್ಣ ನಿರ್ಲಕ್ಷಿಸಲಾಯಿತು.



ಮತ್ತಷ್ಟೂ ದುರ್ಬಲ

ಕೊರತೆಯಿದ್ದ ಶಾಸಕರ ಬೆಂಬಲ ಗಳಿಸಲು ಕೋಟ್ಯಾಂತರ ರೂಪಾಯಿಗಳ ಆಮಿಷ ಒಡ್ಡುವ ಕುರಿತಂತೆ, ತಮ್ಮ ರೇಟು ಎಷ್ಟು ಎಂದೆಲ್ಲಾ ಹೇಳಿದ ಶಾಸಕರಾದ ಮಲ್ಲಿಕಾರ್ಜುನ ಕೂಬಾ, 'ಸಮಾಜವಾದೀ' ಚಿಂತಕರಾದ ಬಿ.ಆರ್.ಪಾಟೀಲ್ ಮುಂತಾದವರ ಜೊತೆಗಿನ ವ್ಯವಹಾರಗಳನ್ನು ಎರಡು ಆಂಗ್ಲ ಚಾನೆಲ್‌ಗಳು ಕುಟುಕು ಕಾರ್ಯಾಚರಣೆಯಲ್ಲಿ ಬಯಲಿಗೆಳೆದವು. ಬಳಿಕ ಇಂತಹ ಅಕ್ರಮಗಳ ಬಗ್ಗೆ ಸಿಬಿಐ ತನಿಖೆಗೆ ಆಯೋಗ ಒಪ್ಪಿಸಿ ಚುನಾವಣೆಗಳನ್ನೇ ಮುಂದೂಡಬಹುದೆಂಬ ಊಹೆಗೆ ತೆರೆ ಎಳೆಯಿತು.

ಈಗ ಎಫ್.ಐ.ಆರ್. ಸಲ್ಲಿಕೆಯ ಪ್ರಕ್ರಿಯೆ ನಡೆದಿದೆ. ಆದರೆ ಜೆಡಿ–ಎಸ್ ಪಕ್ಷದೊಳಗಿನ ವಿದ್ಯಾಮಾನಗಳು ಅಷ್ಟು ಸರಳವಿಲ್ಲ. 8 ಶಾಸಕರು ವಿಪ್ ಧಿಕ್ಕರಿಸಿ ಅಡ್ಡ ಮತದಾನ ಮಾಡಿದರು. ಜೆಡಿ–ಎಸ್ ಪಕ್ಷದಲ್ಲಿ ಕಿತ್ತಾಟ ಬೀದಿ ಕಾಳಗವಾಗಿ ಪಕ್ಷವೇ ವಿಭಜನೆಯಾಗಬಹುದು ಎನ್ನುವ ಸ್ಥಿತಿ ಈಗ ನಿರ್ಮಾಣವಾಗಿದೆ.

ಆ ಎಂಟು ಶಾಸಕರನ್ನು ಪಕ್ಷದ ರಾಷ್ಟ್ರೀಯ ಅದ್ಯಕ್ಷರು ಅಮಾನತು ಮಾಡಿದ್ದಾರೆ. (ಒಂದು ವೇಳೆ ಉಚ್ಛಾಟಿಸಿದ್ದರೆ ಅವರೆಲ್ಲಾ ಸ್ವತಂತ್ರ ಹಕ್ಕಿಗಳು) ಅಂದರೆ ಅವರಿನ್ನೂ ಪಕ್ಷದಲ್ಲಿದ್ದಾರೆ, ವಿಚಾರಣಾ ಸಮಿತಿ ನೇಮಕವಾಗಿದೆ. ವರದಿ ಬಳಿಕ ಕ್ರಮ ಕೈಗೊಳ್ಳಬಹುದು, ಇಲ್ಲ ರಾಜಿಯಾದರೆ ಅಮಾನತು ಹಿಂಪಡೆದು ಕ್ಷಮಿಸಲೂ ಬಹುದು! ಆದರೆ ಸದ್ಯ ಅಂತಹ ವಾತಾವರಣ ಕಾಣುತ್ತಿಲ್ಲ. ಏಕೆಂದರೆ ಈ ಶಾಸಕರು ಅರ್ಥಾತ್ ತನ್ನ ಪ್ರಮುಖ ನಾಯಕರ ಮೇಲೆ ಮಾಜಿ ಪ್ರಧಾನಿಗಳೇ ಯುದ್ಧ ಸಾರಿದ್ದಾರೆ. ಅವರಿಗೆ ಪರ್ಯಾಯ ನಾಯಕರನ್ನು ಹುಟ್ಟು ಹಾಕುವುದಾಗಿ, ಖುದ್ದಾಗಿ ಪ್ರವಾಸ ನಡೆಸಿ ಎದುರಿಸುವುದಾಗಿ ಸಾರಿರುವುದು ಅಳಿವು ಉಳಿವಿನ ಹೋರಾಟದಂತೆ ಅವರು ಬಗೆದಿರುವುದು ಸ್ಪಷ್ಟ. ದೇವೆಗೌಡರ ಕಾರ್ಯ ವಿಧಾನ ಗೊತ್ತಿರುವವರಿಗೆ ಹೆಚ್ಚಿಗೆ ಹೇಳಬೇಕಿಲ್ಲ. ಈ ಯುದ್ಧದಲ್ಲಿ ಅವರೊಂದಿಗೆ ಅವರ ಪುತ್ರ ಹೆಚ್.ಡಿ.ರೇವಣ್ಣ ನವರು ಮಾತ್ರ ಸಾಥ್ ಕೊಡುತ್ತಿದ್ದರೆ, ಮಾಜಿ ಮುಖ್ಯಮಂತ್ರಿ, ಪಕ್ಷಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಉಸಾಬರಿಯೇ ಬೇಡ ಎಂದು ವಿದೇಶಕ್ಕೆ ಹೋಗಿ ಬಿಟ್ಟಿದ್ದಾರೆ! ಸೂಕ್ತ ಸಮಯದಲ್ಲಿ ರಂಗ ಪ್ರವೇಶಿಸಲೂ ಬಹುದು!

ಈಗ ಅಮಾನತುಗೊಂಡ ಚೆಲುವರಾಯಸ್ವಾಮಿ, ಜಮೀರ್ ಅಹ್ಮದ್, ಬಾಲಕೃಷ್ಣ, ಗೋಪಾಲಯ್ಯ ಮುಂತಾದವರು ಒಂದು ಕಾಲದಲ್ಲಿ ಗೌಡರಿಗೆ ಹತ್ತಿರದವರೇ. ಅವರೆಲ್ಲಾ ತಾವಿನ್ನೂ ಪಕ್ಷದಲ್ಲಿ ತಾಂತ್ರಿಕವಾಗಿ ಇದ್ದೇವೆಂದು ಹೇಳಿದರೂ ತಮ್ಮ ನೆಲೆ, ಬಲ ಕ್ರೋಢೀಕರಿಸಲು ಏಟಿಗೆ ಎದುರೇಟು ಎಂದು ತೀರ್ಮಾನಿಸಿಕೊಂಡು ಕದನಕ್ಕೂ ಇಳಿದಿದ್ದಾರೆ. ತಾವೇನೂ ಹೊಸದನ್ನು ಮಾಡಿಲ್ಲ ನಮ್ಮ ನಾಯಕರು ಮಾಡುವುದನ್ನೇ ಮಾಡಿರುವುದಾಗಿ, ತಮ್ಮೆಲ್ಲರೊಂದಿಗೆ ಬೇರೊಬ್ಬ ಅಭ್ಯರ್ಥಿಯನ್ನು ಘೋಷಿಸಿದ್ದು ಏಕಪಕ್ಷೀಯ ನಿರ್ಧಾರ. ಇದನ್ನು ನಾವು ಸಹಿಸುವುದಿಲ್ಲ ಎಂದಿದ್ದಾರೆ. ಗೌಡರು ಜನರನ್ನು ತಮ್ಮ ವಿರುದ್ಧವೇ ಎತ್ತಿ ಕಟ್ಟುವರೆಂದು ತಾವೂ ಜನರನ್ನು ಸೇರಿಸಿ ಶಕ್ತಿ ಪ್ರದರ್ಶನಕ್ಕೆ ಇಳಿಯಲು ನಿರ್ಧರಿಸಿರುವುದು ಪಕ್ಷದಿಂದಲೇ ಪ್ರತ್ಯೇಕವಾಗುತ್ತಿರುವುದರ ಸ್ಪಷ್ಟ ನಿದರ್ಶನ. ಈ ಸಂಘರ್ಷ ತೀವ್ರಗೊಂಡಂತೆ ಇನ್ನಷ್ಟು ಶಾಸಕರು (ಅಂದಾಜು20) ಜೆಡಿ– ಎಸ್‌ನಿಂದಲೇ ಹೊರ ಬರುವ ಸಂಭವವೂ ಇಲ್ಲದಿಲ್ಲ.

ಅಪಾಯಕಾರಿ

ಇದು ರಾಜ್ಯದಲ್ಲಿ ಅತ್ಯಂತ ಗಂಭೀರ ರಾಜಕೀಯ ಬೆಳವಣಿಗೆ. ಕರ್ನಾಟಕದ ಜನತೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗಿ ಜನತಾ ಪಕ್ಷ, ನಂತರದಲ್ಲಿ ಜಾತ್ಯಾತೀತ ಜನತಾದಳವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಆದರೆ ಜೆಡಿ–ಎಸ್ ನಾಯಕತ್ವ ಇಂತಹ ವಿಶ್ವಾಸಕ್ಕೆ ಹಂತ, ಹಂತವಾಗಿ ದ್ರೋಹ ಬಗೆಯುತ್ತಾ ಬಂದಿದೆ. ಅಧಿಕಾರಕ್ಕಾಗಿ ಅದು ಕೋಮುವಾದಿ ಬಿಜೆಪಿಯೊಂದಿಗೆ ಕೂಡಾವಳಿ ಮಾಡಿ ಸರಕಾರ ರಚಿಸಿದ್ದು ಒಂದು ಘೋರ ಅಪರಾಧ. ಈ ಅವಕಾಶವನ್ನೇ ಬಳಸಿ ಆರೆಸ್ಸೆಸ್–ಬಿಜೆಪಿ ಪರಿವಾರಗಳು ಬೆಳೆದವು, ಅಧಿಕಾರನ್ನೂ ಹಿಡಿದವು. ಹಿಂದೆ ಜೆ ಹೆಚ್ ಪಟೇಲ್ ರ ನೇತೃತ್ವದಲ್ಲಿ ಜೆಡಿಯು ಬಿಜೆಪಿಯೊಂದಿಗೆ ಕೈ ಜೋಡಿಸಿ ನಿರ್ನಾಮವಾದಂತೆ, ಜೆಡಿ–ಎಸ್ ನ ಅವಕಾಶವಾದಿ ರಾಜಕಾರಣದಿಂದ ರಾಜ್ಯದ ಅನೇಕ ಕಡೆ ವಿಶೇಷವಾಗಿ ಒಕ್ಕಲಿಗರೇ ಪ್ರಧಾನವಾಗಿರುವ ದಕ್ಷಿಣ ಕರ್ನಾಟಕದಲ್ಲಿ ಆರೆಸ್ಸೆಸ್–ಬಿಜೆಪಿಗೆ ನೆಲೆ ರೂಪಿಸಿಕೊಳ್ಳಲು ಒಂದು ಸನ್ನಿವೇಶ ಸೃಷ್ಟಿಸಿಕೊಳ್ಳಲು ಸಹಾಯ ಮಾಡಿದೆ. ಉತ್ತರ ಕರ್ನಾಟಕ, ಹೈ–ಕ ದಲ್ಲೂ ಕಾಂಗ್ರೆಸ್‌ನ ವಿರುದ್ಧ ಬಿಜೆಪಿಗೆ ರಂಗ ಬಿಟ್ಟುಕೊಟ್ಟಿದೆ. ಹಾಗೇ ರಾಜ್ಯದಲ್ಲಿ ಬೆಳೆಯುವ ಅವಕಾಶಗಳನ್ನು ಜೆಡಿ–ಎಸ್ ನಿರಾಕರಿಸುತ್ತಾ 'ಚೌಕಾಶಿ ರಾಜಕಾರಣ'ದಲ್ಲೇ

ಮುಳುಗಿ ಇದೀಗ ಈ ಸ್ಥಿತಿಗೆ ತಲುಪಿದೆ. ಕಾಂಗ್ರೆಸ್ ವಿರೋಧದಲ್ಲಿದ್ದ ಘಟಾನುಘಟಿ ನಾಯಕರನ್ನೆಲ್ಲಾ ಖಾಲಿ ಮಾಡಿ ಕೊನೆಗೆ ಅಪ್ಪ ಮಕ್ಕಳ ಪಕ್ಷವೆಂಬ ಮಟ್ಟಿಗೆ ಬಂದಿರುವುದರಲ್ಲಿ ನಾಯಕರ ಪಾತ್ರವೇ ಮುಖ್ಯ. ರಾಜ್ಯ ಸಭೆ ಚುನಾವಣೆಯಲ್ಲಿ ಇತರೆ ಪಕ್ಷಗಳಂತೆ ಆಕಾಂಕ್ಷೆ ಹೊಂದಿರುವ ಕೈಗಾರಿಕೋದ್ಯಮಿಗಳನ್ನು ಅಭ್ಯರ್ಥಿಗಳನ್ನಾಗಿಸುವಲ್ಲಿ ಜೆಡಿ–ಎಸ್ ಹಿಂದೆ ಬಿದ್ದಿಲ್ಲ. ಬದಲಾಗಿ ತಮಿಳುನಾಡಿನ ರಾಮಸ್ವಾಮಿ, ವಿಜಯ ಮಲ್ಯ ರಂಥವರನ್ನು ಗೆಲ್ಲಿಸಿದ್ದು ಏನು ಸಂದೇಶ ನೀಡುತ್ತದೆ? ಇಂತಹುದರಲ್ಲಿ ಹಣ ಆಮಿಷಗಳು ಹುಲುಸಾಗಿ ಇಂದು ಬೆಳೆದಿವೆ. ಇದನ್ನೇ 'ಗೌಡರು ಮಾಡಿದರೆ ಸರಿ, ನಾವು ಮಾಡಿದರೆ ತಪ್ಪೇ?' ಎಂದು ಅಮಾನತುಗೊಂಡವರು ಪ್ರಶ್ನಿಸುವುದು ಅತಿಶಯವೇನಲ್ಲ!

ಈ ಎಲ್ಲಾ ಬೆಳವಣಿಗೆಗಳು ಆತಂಕಕಾರಿ. ಕರ್ನಾಟಕದ ರಾಜಕಾರಣ ಕೇವಲ ಎರಡು ದೈತ್ಯ ಬಂಡವಾಳಶಾಹಿ ಪಕ್ಷಗಳ ನಡುವೆಯೇ ಕ್ರೋಢೀಕರಣಗೊಳ್ಳುವುದು ಅದರಲ್ಲೂ ಬಿಜೆಪಿ 'ಕಾಂಗ್ರೆಸ್ ಮುಕ್ತ ಭಾರತ' ಮಾಡುವ ಘೋಷಣೆ ಜಾರಿಯಲ್ಲಿ ಮಗ್ನವಾಗಿರುವಾಗ ಕಾಂಗ್ರೆಸ್ ವಿರೋಧಿ ಮತಗಳು ಬಿಜೆಪಿಯತ್ತಲೇ ಕ್ರೋಢೀಕರಣಗೊಳ್ಳುವುದು ಅಪಾಯಕಾರಿ. ಆದರೆ ಜೆಡಿ–ಎಸ್ ಮುಖಂಡತ್ವಕ್ಕೆ ಇದರ ಪರಿವೇ ಇಲ್ಲ, ಅದು ಬೇಕೂ ಆಗಿಲ್ಲ. ಅಷ್ಟು ಮಾತ್ರವಲ್ಲ, ಮುಂದೆ ಅಗತ್ಯ ಬಂದರೆ ಬಿಜೆಪಿಯ ಜೊತೆ ಮತ್ತೇ ಕೂಡಾವಳಿ ನಡೆಸಬಹುದು ಎಂಬ ಚಿಂತನೆಯಲ್ಲೇ ಇದೆ. ಕಡಿಮೆ ಹಣ ಹೂಡಿ ಹೆಚ್ಚು ಲಾಭ ಗಳಿಸುವ ಯೋಜನೆಗಳು ಜನಪ್ರಿಯವಲ್ಲವೇ? ಉದಾರೀಕರಣವನ್ನು ಅಪ್ಪಿಕೊಂಡಿರುವ ಪ್ರಾದೇಶಿಕ ರಾಜಕೀಯ ಶಕ್ತಿಗಳ ಅಧಃಪತನದ ರಾಜಕಾರಣಕ್ಕೆ ಇದು ಉದಾಹರಣೆ. ಜನ ಬೆಂಬಲ ನೆಚ್ಚಿದ ರಾಜಕಾರಣಕ್ಕೂ, ಉದ್ಯಮಿಗಳ ಹಣ ನಂಬಿದ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸ!

ಹೀಗಿರುವಾಗಲೂ ಜೆಡಿ–ಎಸ್ ತನ್ನ ಘೋರ ಪ್ರಮಾದಗಳನ್ನು ತಿದ್ದಿಕೊಳ್ಳಬೇಕು. 'ನಾನು ಬೂದಿಯಿಂದಲೇ ಮೇಲೆದ್ದವನು ಬೆಂಬಲಿಸಿ' ಎಂದರೆ ಓಡೋಡಿ ಬರುವ ಕಾಲವೂ ಇದಲ್ಲ ಎಂಬುದನ್ನು ಜೆಡಿ–ಎಸ್ ಮುಖಂಡತ್ವ ಅರಿತರೆ ಅವರಿಗೂ, ನಾಡಿಗೂ ಕ್ಷೇಮ.

ಇನ್ನೇನು, ಇನ್ಮುಂದೆ ವಿಮಾನ್ದಲ್ಲಿ ಬೆಳಗ್ಗೆ ಬೆಂಗಳೂರಿಗೋಗಿ ತಿಂಡಿನ ಸಿದ್ದರಾಮಯ್ಯನ ಜೊತೆ ರೊಟ್ಟಿ ತಿಂದ್ಕೊಂಡು, ಮದ್ಯಾಹ್ನ ಡೆಲ್ಲಿಗೋಗಿ ಮೋದಿ ಜೊತೆ ಮುದ್ದೆ ಊಟ ಮುಗಿಸಿ, ಅಲ್ಲಿಂದ ವಿಮಾನ್ದಲ್ಲೇ ಸಣ್ಣ ನಿದ್ದೆ ತೆಗೆದು ರಾತ್ರಿ ಊಟಕ್ಕೆ ಚನ್ನೈನಲ್ಲಿ 'ಅಮ್ಮ'ನ ಮನೆಗೋಗಿ ಚಪಾತಿ ತಿಂದು ವಿಮಾನ್ದಲ್ಲೇ ವಾಪಸ್ಸು ಮನೆಗೆ ಬಂದು ಆರಾಮವಾಗಿ ಮಲಕ್ಕೊಬಹುದು.

– ಧರ್ಮೇಶ್, ಹಾಸನ

PÉÃ½ZÀÁÝ

ಇದು ಜಾತಿ ಕದನವೇ? ಭೂಮಿ ಹಕ್ಕಿನ ಹೋರಾಟವೇ? ಮಹಾರಾಷ್ಟ್ರದ ಭೂಮಿ ಹಕ್ಕಿನ ಹೋರಾಟ ದೇಶದಲ್ಲಿ ದಲಿತರ ಇಂದಿನ ಸ್ಥಿತಿಗತಿಯ ಚಿತ್ರಣದಂತಿದೆ

ಭೂಮಿ ಇದ್ದವರು ತಮ್ಮದನ್ನು ಉಳಿಸಿಕೊಳ್ಳಲು ಮತ್ತು ಭೂಮಿ ಇಲ್ಲದವರು ಭೂಮಿ ಪಡೆಯಲು ನಡೆಸುವ ಹೋರಾಟ ಪುರಾಣ, ಇತಿಹಾಸಗಳ ಕಾಲದಿಂದಲೂ ನಡೆದಿದ್ದು ಇನ್ನೂ ಮುಂದುವರೆದಿದೆ.

ನಮ್ಮ ಸಮಾಜದಲ್ಲಿ ಮಹಿಳೆಯರು ಮತ್ತು ದಲಿತರು ಯಾವಾಗಲೂ ಭೂ ವಂಚಿತರು. ಎಲ್ಲೋ ಅಲ್ಲೊಂದಿಲ್ಲೊಂದಿಷ್ಟು ಉದಾಹರಣೆಗಳನ್ನು ಬಿಟ್ಟರೆ ಭೂಮಿ ಪಡೆಯುವ ದಲಿತರ ಕನಸು ಇಂದಿಗೂ ಕನಸೇ ಆಗಿದೆ.

ಮಹಾರಾಷ್ಟ್ರದಲ್ಲಿ ದಲಿತರು ತಾವು ಉಳುತ್ತಿರುವ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಸರ್ಕಾರದೊಂದಿಗೆ ಸಂಘರ್ಷಕ್ಕಿಳಿದಿರುವ ಹತ್ತಾರು ಉದಾಹರಣೆಗಳ ನಾಲ್ಕು ನಮೂನೆಗಳನ್ನು ನಾವು ಇಂದಿಗೂ ಕಾಣುತ್ತೇವೆ.

ವಿದರ್ಭದಲ್ಲಿ ಅರಣ್ಯ ಇಲಾಖೆಯೊಂದಿಗಿನ ಸಂಘರ್ಷ, ಸೊಲ್ಲಾಪುರ ಜಿಲ್ಲೆಯಲ್ಲಿ ದಲಿತರಿಗೆ ಬ್ರಿಟಿಷರೇ ಕೊಡಮಾಡಿದ್ದ, ಆದರೆ ಭಾರತ ಸರ್ಕಾರ ಕೊಡಲೊಪ್ಪದ ಮಹಾರ್–ರಾಮೋಶಿ ಭೂಮಿ ಹೋರಾಟ, ಮರಾಠವಾಡದಲ್ಲಿ ಗೈರಾಣ ಭೂಮಿಯಲ್ಲಿ ಉಳುತ್ತಿರುವ ದಲಿತ ರೈತರ ಹೋರಾಟ, ಕೊಂಕಣ ಭಾಗದ ಭೂ ಹೋರಾಟ.

ಶಾರದಾ ಗೋಪಾಲ (ಪ್ರಜಾವಾಣಿ)

ರೇಗಾದಲ್ಲಿ ಕಲಬುರಗಿ ಪ್ರಥಮ

ದೇಶದಲ್ಲಿ ಒಂದು ಕಡೆ ಬರಗಾಲ ಮತ್ತೊಡೆಡೆ ಕೂಲಿಗಾಗಿ ಕಾಯುವ ಜನತೆ ಇರುವ ಪ್ರಸ್ತುತ ಸಂದರ್ಭದಲ್ಲಿ ಎಲ್ಲರಿಗೂ ದುಡಿಯುವ ಕೈಗೆ ಕೆಲಸ ನೀಡುವ ಯೋಜನೆ ಮುಖ್ಯವಾಗಿ 'ಗ್ರಾಮೀಣ ಉದ್ಯೋಗ ಖಾತ್ರಿ' ಯೋಜನೆ. 2016–2017ರ 'ರೇಗಾ' ಯೋಜನೆ ಅಡಿಯಲ್ಲಿ ಅತೀ ಹೆಚ್ಚು ಮಾನವ ದಿನ ಸೃಜನೆಯ ಸಾಧನೆಯ ಪಟ್ಟಿಯಲ್ಲಿ ಕಲಬುರಗಿ ಮೊದಲನೇ ಸ್ಥಾನ.

ಏಪ್ರಿಲ್ –ಮೇ ತಿಂಗಳಲ್ಲಿ ಒಟ್ಟು 3 ಲಕ್ಷ ಮಾನವ ದಿನಗಳನ್ನು ಕೆಲಸ ಮಾಡುವ ಗುರಿಯನ್ನು ಸರಕಾರ ಹಾಕಿಕೊಂಡಿತ್ತು. ಆದರೆ ಕಲಬುರಗಿ ಜಿಲ್ಲಾ ಪಂಚಾಯತ್ 9.51 ಲಕ್ಷ ಮಾನವ ದಿನ ಸೃಜನೆ ಮಾಡಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಮೀರಿ ಮೊದಲ ಸ್ಥಾನ ಪಡೆದಿದೆ.

ಈ ಬಾರಿ 31,031 ಕುಟುಂಬಗಳ 2.15 ಲಕ್ಷ ಜನರಿಗೆ ಬರಗಾಲದಲ್ಲಿ ಕೆಲಸ ನೀಡಲಾಗಿದೆ. 22.25 ಕೋಟಿ ರೂ. ಕೂಲಿ ಹಣ ನೀಡಲಾಗಿದೆ. ಜಿಲ್ಲೆ ಒಟ್ಟು 272 ಕಾಮಗಾರಿ ಕೆಲಸ ಮಾಡಿದ್ದು, 8068 ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಈ ಹಿಂದೆ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೇವಲ ಬಾವಿ ಹೂಳೆತ್ತುವ, ಕೆರೆ ಹೂಳೆತ್ತಿರುವ ಬಗ್ಗೆ ಸುಳ್ಳು ಲೆಕ್ಕ ತೋರಿಸಿ ಸರಕಾರಿ ಹಣ ಲೂಟಿ ಮಾಡಲಾಗುತ್ತಿತ್ತು. ಈ ಬಾರಿ ಕೆರೆ ಹೂಳೆತ್ತುವುದು, ಕೆರೆ ನಿರ್ಮಿಸುವುದು, ಗೋ ಕಟ್ಟೆ ಬದು ನಿರ್ಮಾಣ, ಸಸಿ ನೆಡಲು ಪಿಟ್ ನಿರ್ಮಾಣ, ಇಟ್ಟಿಗೆ ತಯಾರಿಕೆ, ಶೌಚಾಲಯ, ಮನೆ ನಿರ್ಮಾಣ, ಹುಲ್ಲು ಉತ್ಪಾದನೆ, ಕುರಿದೊಡ್ಡಿ ನಿರ್ಮಾಣ, ಸೇರಿದಂತೆ ಹತ್ತಾರು ಬಗೆಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಜನರಿಗೆ ಉದ್ಯೋಗ ಕೊಡಲಾಗಿದೆ.

ಜಿಲ್ಲಾ ಪಂಚಾಯತಿಯಿಂದ ಅಭಿನಂದನೆ

2015ನೇ ವರ್ಷ ಹಿಂಗಾರು ಮತ್ತು ಮುಂಗಾರು ಸಮಯದಲ್ಲಿ ಮಳೆಯ ಅಭಾವದಿಂದ ಬರಗಾಲವನ್ನು ರೈತರು ಹಾಗೂ ರೈತ ಕೂಲಿಕಾರ್ಮಿಕರಿಗೆ ಉದ್ಯೋಗ ಖಾತರಿ ಯೋಜನೆ ನೆರವು ನೀಡಲು ಜನವಾದಿ ಮಹಿಳಾ ಸಂಘಟನೆ ಉಪಾಧ್ಯಕ್ಷರಾದ ಕೆ.ನೀಲಾ ರವರು ತಮ್ಮ ತಂಡದೊಂದಿದೆ ಹಳ್ಳಿಗಳಲ್ಲಿ ಪ್ರವಾಸ ಮಾಡಿ ಜನರಲ್ಲಿ ಈ ಯೋಜನೆ ಕುರಿತು ಅರಿವು ಹಾಗೂ ವಿಶ್ವ ಮೂಡಿಸಲು ಸರಕಾರದ ಮುಂದೆ ಪ್ರಸ್ತಾವನೆ ಮಾಡಿದರು. ಜಿಲ್ಲಾ ಪಂಚಾಯತ್ ಸಂಪೂರ್ಣ ಸಹಕಾರ ನೀಡಲು ನಿರ್ಧರಿಸಿ ಸಂಘಟನೆಯವರೊಂದಿಗೆ ಹಳ್ಳಿಗಳಿಗೆ ಸಂಚರಿಸಿ ಜನರಿಗೆ ಜಾಬ್–ಕಾರ್ಡ್ ನೀಡಲು ಮತ್ತು ಇತರೆ ವಿಷಯಗಳ ಕುರಿತು ಅರಿವ ಮೂಡಿಸಲು ಸರಕಾರಿ ವಾಹನದ ವ್ಯವಸ್ಥೆ ಮಾಡಲಾಗಿ ಫಾರ್ಮ್–1 ಮತ್ತು ಫಾರ್ಮ್–2 ನೀಡಲಾಗಿತ್ತು.

ಶ್ರೀಮತಿ ಕೆ.ನೀಲಾ, ಸರಕಾರಿ ಶಾಲಾ ಶಿಕ್ಷಕರಾದ ಶ್ರೀ ನಿಂಗಣ್ಣ, ಸ್ವ–ಸಹಾಯ ಗುಂಪು ಮುಖಂಡರಾದ ಶ್ರೀಮತಿ ನಂದಾದೇವಿ ಮತ್ತು ತರೆ ಸಂಘಟನೆಯವರು ಭೇಟಿ ನೀಡಿರುವ ಹಳ್ಳಿಗಳಲ್ಲಿನ ವಸ್ತುಸ್ಥಿತಿ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದರು. ಈ ತಂಡ ಭೇಟಿ ನೀಡಿದ ಎಲ್ಲಾ ಹಳ್ಳಿಗಳಲ್ಲಿ 5–6 ದಿನಗಳಲ್ಲಿಯೇ ಸುಮಾರು ಸಾವಿರಾರು ಜನರಿಗೆ ಉದ್ಯೋಗ ಖಾತರಿ ಕೆಲಸವನ್ನು ನೀಡಲಾಗಿದೆ.

ಅತೀ ಹೆಚ್ಚು ಬರ ಪೀಡಿತ ಪ್ರದೇಶವಾದ ಆಳಂದ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿಯ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿ, ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸುಮಾರು 1.93 ಲಕ್ಷಕ್ಕಿಂತ ಹೆಚ್ಚು ಮಾನವ ದಿನಗಳನ್ನು ಮಾಡಲಾಗಿದೆ. ಸರಕಾರ ನಿಗಧಿ ಮಾಡಿರುವ ತಿಂಗಳುವಾರು ಗುರಿಗಿಂತ ಸುಮಾರು 150% ಹೆಚ್ಚಿನ ಸಾಧನೆಯನ್ನು ಮಾಡಲಾಗಿದೆ.

ಈ ತಂಡ ಮಾಡಿರುವ ಸಾಧನೆಯನ್ನು ಗುರುತಿಸಿ ಸರಕಾರದ ಪರವಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಭಿನಂದನೆಗಳನ್ನು ಸಂಘಟನೆಗೆ ಸಲ್ಲಿಸಿದ್ವಾರೆ.

12 ಎಕರೆ ಜಮೀನು ದಾನ :

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಂದರವಾಡ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ ಕೆಲಸ ಬಯಸಿ ಅರ್ಜಿ ಸಲ್ಲಿಸಿದ ಕೂಲಿ ಕಾರ್ಮಿಕರಿಗಾಗಿ ಕೆರೆ ಹೂಳೆತ್ತುವ ಕಾಮಗಾರಿಯನ್ನು ಆರಂಭಿಸಲಾಯಿತು. ಈ ಕಾಮಗಾರಿಯನ್ನು ಗ್ರಾಮದ ಸ್ವಾಮೀಜಿಗಳಾದ ಶಾಂತವೀರ ಶಿವಾಚಾರ್ಯರು ಚಾಲನೆ ನೀಡಿದರು. ಈ ಕೆರೆ ನಿರ್ಮಾಣಕ್ಕಾಗಿ ಸ್ವಾಮೀಜೀಗಳೇ ತಮ್ಮ ಹೆಸರಿನಲ್ಲಿರುವ ಹನ್ನೆರಡು ಎಕರೆ ಹೊಲವನ್ನು ಕೆರೆಯ ನಿರ್ಮಾಣಕ್ಕೆ ನೀಡಿದರು. ಸರ್ಕಾರ ಈ ಜನನ್ನು ದಾನದ ರೂಪದಲ್ಲಿ ಪಡೆದು ಅಲ್ಲಿ ಕೆರೆ ನಿರ್ಮಿಸಲು ಮುಂದಾಗಿದೆ. ದಾನಪತ್ರವನ್ನು ತಾಲ್ಲೂಕಿನ ದಂಡಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಕಾರ್ಯಕ್ರಮದಲ್ಲಿ ಕೆ.ನೀಲಾ, ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಅಧ್ಯಕ್ಷೆ ಡಾ.ಮೀನಾಕ್ಷಿ ಬಾಳಿ, ತಾಲ್ಲೂಕು ಕಾರ್ಯನಿವಾಹಣಾಧಿಕಾರಿ ನಾಮದೇವ ರಾಠೋಡ, ಚನ್ನಮ್ಮ ಮಹಿಳಾ ಸ್ವಸಹಾಯ ಸಂಘದ ಮುಖಂಡರಾದ ನಂದಾದೇವಿ ಮಂಗೊಂಡಿ, ಗ್ರಾಮ ಪಂಚಾಯತ್ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರು, ಡಾ.ಪ್ರಭು ಖಾನಾಪುರೆ, ಪಂಚಾಯತ್ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಈ ಎಲ್ಲಾ ಕೆಲಸಗಳಲ್ಲಿ ಸರಕಾರ ಹಾಗೂ ರೇಗಾ ಅಡಿಯ ಕಾರ್ಮಿಕರು ಭಾಗವಹಿಸಿದ್ದರು. ಮುಖ್ಯವಾಗಿ ಜನವಾದಿ ಮಹಿಳಾ ಸಂಘಟನೆ(ಜೆಎಂಎಸ್) ಯ ನೂರಾರು ಕಾರ್ಯಕರ್ತರು ಇದರಲ್ಲಿ ತೊಡಗಿಸಿಕೊಂಡರು. ಮುಖಂಡರಾದ ನೀಲಾ ಕೆ., ಮೀನಾಕ್ಷಿ ಬಾಳಿ ಸೇರಿದಂತೆ ಜಿಲ್ಲೆಯ ಇತರ ಮುಖಂಡರು ಸೇರಿದಂತೆ ಹಲವರು ಭಾಗವಹಿಸಿದ್ದರು. •



ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು

ರೈತ ಸಂಘ ವಿಚಾರ ಸಂಕಿರಣ

ಕೇಂದ್ರ ಸರ್ಕಾರ ಘೋಷಿಸಿದ ಕೃಷಿಯಲ್ಲಿ ಶೇಕಡ 100% ರಷ್ಟು ವಿದೇಶಿ ಬಂಡವಾಳ ಹಾಗೂ ಆನ್ ಲೈನ್ ಮಾರುಕಟ್ಟೆ ಕೃಷಿಕರ ಆತ್ಮಹತ್ಯೆ ತಡೆಯಬಹುದೆ ಎಂಬ ವಿಚಾರವಾಗಿ ರಾಜ್ಯ ಮಟ್ಟದ ವಿಚಾರ ಸಂಕಿರಣ ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ವತಿಯಿಂದ ಕಲಬುರಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಕೆ.ಪಿ.ಆರ್.ಎಸ್. ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಮುಖಂಡರಾದ ಮಾರುತಿ ಮಾನ್ಪಡೆ ರವರು ಮಾತನಾಡಿದರು.

ವರದಿ : ಶರಣಬಸಪ್ಪ ಮಮಶೆಟ್ಟಿ

ಬಿದರನಹಳ್ಳಿ ದಲಿತರ ನಿವೇಶನ ಜಾಗ ದೋಚುವ ಸಂಚು ವಿಫಲಗಳಿಸಿದ ಡಿ.ಎಚ್.ಎಸ್.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬಿದರಹಳ್ಳಿ ಗ್ರಾಮದಲ್ಲಿ ದಲಿತರ ಕೇರಿಗೆ ಹೊಂದಿಕೊಂಡಂತಿರುವ ಸರ್ವೇ ನಂ. 1ರಲ್ಲಿ ಗ್ರಾಮ ಠಾಣಾ ಜಾಗದಲ್ಲಿ ದಲಿತರಿಗೆ ನಿವೇಶನ ಹಂಚಿಕೆಯಾಗಿದ್ದು, ಉಳಿದ ಜಾಗವನ್ನು ಸಿದ್ದಪ್ಪಾಜೀ ದೇವಸ್ಥಾನಕ್ಕೆಂದು ಮೀಸಲಾಗಿತ್ತು. ಈ ಜಾಗವನ್ನು ಮಂಜೂರು ಮಾಡಿಕೊಡುವಂತೆ 1991ರಿಂದಲೂ ಒತ್ತಾಯಿಸುತ್ತಾ ಬರಲಾಗಿದೆ. ಆದರೆ ಆದರೆ 2008ರಲ್ಲಿ ಜಾಗವನ್ನು ಹಾಲು ಉತ್ಪಾದಕರ ಸಂಘಕ್ಕೆ ಅಕ್ರಮವಾಗಿ ಖಾತಾ ಮಾಡಿಕೊಡಲಾಗಿದೆ.

ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಸಂಧಾನ ಸಭೆ ನಡೆದು ಜಾಗವನ್ನು ಹಂಚಲು ತೀರ್ಮಾನಿಸಲಾಯಿತು. ಆದರೆ ಇದಕ್ಕೆ ಎರಡು ಸಮುದಾಯದವರು ಒಪ್ಪಿಗೆ ನೀಡಲಿಲ್ಲ. ಆದ್ದರಿಂದ ಕೂಡಲೇ ಜಿಲ್ಲಾಡಳಿತ ಮಧ್ಯ ಪ್ರವೇಶಿಸಬೇಕೆಂದು ದಲಿತ ಹಕ್ಕುಗಳ ಸಮಿತಿ ಮತ್ತು ಡಾ.ಬಾಬು ಜಗಜೀವನ್ ರಾಂ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆ ವತಿಯಿಂದ ಮೇ 25ರಿಂದ ಜಿಲ್ಲಾಧಿಕಾರಿ ಕಛೇರಿ ಬಳಿ ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲಾಯಿತು.

ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುತ್ತಾ, ತಮಟೆ ಬಾರಿಸುತ್ತಾ, ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿಗೆ ಆಗಮಿಸಿ ದಿನವಿಡೀ ಧರಣಿ ನಡೆಸಿದರು.

ಅಕ್ರಮವಾಗಿ ನಿರ್ಮಿಸಿರುವ ವಿ.ಎಸ್.ಎಸ್.ಎನ್. ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಖಾತೆ ಮಾಡಿರುವುದನ್ನು ರದ್ದುಗೊಳಿಸಬೇಕು ಮತ್ತು ಹಾಲಿ ನಿರ್ಮಾಣಗೊಂಡಿರುವ ಮನೆಗಳಿಗೆ ನಮೂನೆ 9. 11ನ್ನು ನೀಡಬೇಕು. ಗ್ರಾಮದಲ್ಲಿರುವ ಸರ್ವೇ ನಂ. 2 ರಿಂದ 24ರವರೆಗೆ ಸರ್ವೇ ಮಾಡಿಸಿ ಗ್ರಾಮಾ ಠಾಣಾ ಜಾಗವನ್ನು ಗುರುತಿಸಬೇಕು. ನಿವೇಶನ ರಹಿತ ದಲಿತರಿಗೆ ನಿವೇಶನವನ್ನು



ಮಂಜೂರು ಮಾಡಬೇಕು. ಊರಿನಲ್ಲಿರುವ ಹೋಟೆಲ್, ಸಾರ್ವಜನಿಕ ಸ್ಥಳಗಳಿಗೆ ಮುಕ್ತ ಅವಕಾಶ ನೀಡಬೇಕು. ಗ್ರಾಮ ಪಂಚಾಯತಿಗೆ ಬರುವ ಅನುದಾನದಲ್ಲಿ ಶೇ.24ರಷ್ಟನ್ನು ಊರಿನ ದಲಿತರ ಅಭ್ಯುದಯಕ್ಕೆ ಸಮರ್ಪಕವಾಗಿ ಬಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ದಲಿತರಿಗೆ ಕೊಡಬೇಕೆಂದು ಆದೇಶಿಸಿದ್ದರಿಂದ ಇದೊಂದು ಯಶಸ್ವಿ ಹೋರಾಟವಾಗಿ ಕೊನೆಗಂಡಿದೆ.

ಪ್ರತಿಭಟನೆಯಲ್ಲಿ ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕರಾದ ಆರ್.ಕೃಷ್ಣ, ಸಹಸಂಚಾಲಕ ಎನ್.ರಾಜೇಂದ್ರಸಿಂಗ್ ಬಾಬು, ಮುಖಂಡರಾದ ಅಂಬುಜಿ, ಡಿ.ರಮೇಶ್, ಭರತ್‌ರಾಜ್, ಕುಮಾರ್, ನಿಂಗರಾಜು, ಶಿವಶಂಕರ ಸ್ವಾಮಿ, ಮಹದೇವ, ಶಂಕರ್, ಮುಂತಾದವರು ಭಾಗವಹಿಸಿದ್ದರು.

ಈ ವಾರ ಚರಿತ್ರೆಯಲ್ಲಿ

15 ಜೂನ್ 1916

ಮೇಜರ್ ಜಯಪಾಲ್ ಸಿಂಗ್ ಜನ್ಮದಿನ



ಕಾ. ಜಯಪಾಲ್ ಸಿಂಗ್ ರದ್ದು ಬಹುಮುಖ ವ್ಯಕ್ತಿತ್ವ. ಸ್ವಾತಂತ್ರ್ಯ ಪೂರ್ವ ಬ್ರಿಟಿಶ್ ಸೈನ್ಯದಲ್ಲಿ ಮೇಜರ್ ಆಗಿದ್ದ ಅವರು ಕ್ವಿಟ್ ಇಂಡಿಯಾದ ವಿರುದ್ಧ ಸೈನ್ಯದ ಒಳಗೆ ಸೈನಿಕರನ್ನೂ ಅಧಿಕಾರಿಗಳನ್ನೂ ಸಂಘಟಿಸಿದ ದೇಶಪ್ರೇಮಿ. 1946ರಲ್ಲಿ ರಾಷ್ಟ್ರೀಯ ನಾಯಕರ ಹತ್ಯೆಗೆ ಬ್ರಿಟಿಶ್ ಸಂಚನ್ನು ಬಯಲು ಮಾಡಿ ಸೈನ್ಯ ತೊರೆದು ಕ್ರಾಂತಿಕಾರಿ ಚಳುವಳಿಯನ್ನು ಸೇರಿದರು. ಸ್ವಾತಂತ್ರ್ಯಾ ನಂತರ ಅವರು ಸರಕಾರಕ್ಕೆ ಶರಣಾದಾಗ ಅವರನ್ನು ದೇಶಭಕ್ತನೆಂದು ಸನ್ಮಾನಿಸುವ ಬದಲು ಅವರನ್ನು ಜೈಲಿಗೆ ಹಾಕಲಾಯಿತು! ಅವರು ಜೈಲಿನನಿಂದ ತಪ್ಪಿಸಿಕೊಂಡು ಬಂದು ತಮ್ಮ ಕ್ರಾಂತಿಕಾರಿ ಚಟುವಟಿಕೆ ಮುಂದುವರೆಸಿದರು. ಭೂಗತರಾಗಿದ್ದುಕೊಂಡೇ ಅವರು ಸಶಸ್ತ್ರ ಕ್ರಾಂತಿಕಾರಿ ಚಳುವಳಿ ನಡೆಯುತ್ತಿದ್ದಲ್ಲಿ ಮಿಲಿಟರಿ ತರಬೇತಿದಾರರಾಗಿ ಕೆಲಸ ಮಾಡಿದರು. ತೆಲಂಗಾಣ ಸಶಸ್ತ್ರ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದರು. 1964ರಲ್ಲಿ ಸಿಪಿಐ(ಎಂ) ಸೇರಿದ ಅವರು 1973ರಲ್ಲಿ ಹರ್ಯಾಣ, ದೆಹಲಿ, ಪಶ್ಚಿಮ ಉತ್ತರ ಪ್ರದೇಶದ ಸಿಪಿಐ(ಎಂ) ಪ್ರಾದೇಶಿಕ ಸಮಿತಿ ಕಾರ್ಯದರ್ಶಿಯಾಗಿ ಪಕ್ಷ ಕಟ್ಟಿದರು. ಅವರನ್ನು ತುರ್ತು ಪರಿಸ್ಥಿತಿಯಲ್ಲೂ ಬಂಧಿಸಲಾಯಿತು. 1978ರಿಂದ 1982ರಲ್ಲಿ ಅವರ ನಿಧನದ ವರೆಗೆ ಅವರು ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯರಾಗಿದ್ದರು.

ಜೆಸಿಟಿಯು ರಾಜ್ಯ ಸಮಾವೇಶದ ಕರೆ

ಸೆಪ್ಟೆಂಬರ್ 2 ಮುಷ್ಕರ ಯಶಸ್ವಿಗೊಳಿಸಿ

ಸಮಾವೇಶದ ನಿರ್ಣಯ

ದೇಶದಲ್ಲಿನ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಮತ್ತು ವಿವಿಧ ಕೈಗಾರಿಕೆಗಳಲ್ಲಿ ಹಾಗೂ ಸೇವೆಗಳಲ್ಲಿನ ನೌಕರರ ಸ್ವತಂತ್ರ ರಾಷ್ಟ್ರೀಯ ಒಕ್ಕೂಟಗಳು ಒಟ್ಟಾಗಿ ಮಾರ್ಚ್ 30–2016 ನವದೆಹಲಿಯ ಮಾಳವಂಕರ್ ಹಾಲ್‌ನಲ್ಲಿ ಸರಕಾರದ ನಕಾರಾತ್ಮಕ ಧೋರಣೆಯ ವಿರುದ್ಧ ರಾಷ್ಟ್ರೀಯ ಸಮಾವೇಶವನ್ನು ನಡೆಸಿ, ಸೆಪ್ಟೆಂಬರ್ 2, 2016 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆಯನ್ನು ಕೊಟ್ಟಿವೆ. ಈ ಕರೆಯ ಮೇರೆಗೆ ಈ ಜೂನ್ 10 ರಂದು ರಾಜ್ಯದಲ್ಲಿಯೂ ಸಮಾವೇಶ ನಡೆಸಲಾಗುತ್ತಿದೆ.

58 ವರ್ಷಗಳ ತನಕ ವಂತಿಗೆಯಲ್ಲಿ ಜಮೆಯಾದ ಪಿ.ಎಫ್ ಹಣವನ್ನು ತೆಗೆದುಕೊಳ್ಳಲು ಆಗುವುದಿಲ್ಲ ಎಂಬ ತೀರ್ಮಾನದ ವಿರುದ್ಧ ಬೆಂಗಳೂರಿನಲ್ಲಿ ಲಕ್ಷಾಂತರ ಕಾರ್ಮಿಕರು ಏಪ್ರಿಲ್ 18 ಮತ್ತು 19 ರಂದು ಧೀರೋದ್ಧಾತ್ತ ಹೋರಾಟ ನಡೆಸುವ ಮುಖಾಂತರ ಆಳುವ ಪ್ರಭುಗಳಿಗೆ ಎಚ್ಚರಿಕೆಯನ್ನು ಕೊಟ್ಟು ತಮಗೆ ನ್ಯಾಯವನ್ನುಪಡೆದುಕೊಳ್ಳುವಲ್ಲಿಯಶಸ್ವಿಯಾಗಿದ್ದಾರೆ. ಹೋರಾಟದಲ್ಲಿ ಪಾಲ್ಗೊಂಡ ಎಲ್ಲರಿಗೂ ಸಮಾವೇಶ ಅಭಿನಂದಿಸುತ್ತದೆ. ಈ ಹೋರಾಟದಲ್ಲಿ ಸುಮಾರು 6 ಜನ ಮಹಿಳೆಯರನ್ನೊಳಗೊಂಡಂತೆ 325 ಜನರ ವಿರುದ್ಧ ಕೇಸುಗಳನ್ನು ಹಾಕಿ ಜೈಲಿಗಟ್ಟಿರುವುದನ್ನು ಈ ಸಮಾವೇಶ ಖಂಡಿಸುತ್ತದೆ. ಈ ದೂರುಗಳನ್ನು ವಾಪಾಸು ಪಡೆಯಬೇಕೆಂದು ಆಗ್ರಹಿಸುತ್ತದೆ.

ಸಂಗಾತಿಗಳೇ,

ಕೇಂದ್ರ ಕಾರ್ಮಿಕ ಸಂಘಟನೆಗಳು 12 ಬೇಡಿಕೆಗಳನ್ನು ಮುಂದಿಟ್ಟು ಸೆಪ್ಟೆಂಬರ್ 2, 2015ರಂದು 15 ಕೋಟಿ ದುಡಿಯುವ ಜನತೆ ಪಾಲ್ಗೊಂಡು ಚಾರಿತ್ರಿಕ ಮುಷ್ಕರವನ್ನು ನಡೆಸಿದ್ದಾರೆ. ಆದರೆ ಕೇಂದ್ರ ಸರಕಾರ ಬೇಡಿಕೆಗಳನ್ನು ಈಡೇರಿಸುವ ಬದಲಿಗೆ ನಕಾರಾತ್ಮಕ ಧೋರಣೆಯಿಂದ ಇನ್ನೂ ಹೆಚ್ಚಿನ ಬದಲಾವಣೆಗಳನ್ನು ತರಲು ಮತ್ತು ಜಾರಿ ಮಾಡಲು ಹೊರಟಿದೆ. ದುಡಿಯುವ ಜನರ ಹಾಗೂ ಭಾರತದ ಅಭ್ಯುದಯಕ್ಕೆ ವಿರುದ್ಧವಾಗಿರುವ ಕೇಂದ್ರ ಸರ್ಕಾರದ ನೀತಿಗಳನ್ನು ಈ ಸಮಾವೇಶ ಖಂಡಿಸುತ್ತದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೂ.16.75 ಸಿಗುವ 1ಲೀಟರ್ ಪೆಟ್ರೋಲ್ ಗೆ 55 ರೂ. ಗಳಷ್ಟು ತೆರಿಗೆ, ಲೆವಿ, ಸೆಸ್ ಗಳನ್ನು ಹಾಕುವ ಮುಖಾಂತರ ರೂ.70.75 ಪೈಸೆಗೆ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ಎಲ್ಲಾ ರೀತಿಯ ಅಗತ್ಯ ವಸ್ತುಗಳು, ಆಹಾರ ಧಾನ್ಯಗಳು ಹಾಗೂ ಶಿಕ್ಷಣ, ನೀರು, ಆರೋಗ್ಯ ದಂತಹ ಸೇವೆಗಳು ಮತ್ತಷ್ಟು ದುಬಾರಿಯಾಗುತ್ತಿವೆ. ಒಳ್ಳೆಯ ದಿನಗಳನ್ನು ಕೊಡುವ ಆಶ್ವಾಸನೆ ನೀಡಿದ್ದ ಸರಕಾರ ಇಂದು ದುಬಾರಿ ದಿನಗಳನ್ನು ದೇಶದ ಜನತೆಗೆ ನೀಡುತ್ತಿದೆ.

ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರುವ ಬದಲಿಗೆ "ನೇರ ನಗದು ವರ್ಗಾವಣೆ" ಮುಖಾಂತರ ಅವಶ್ಯಕತೆ ಇರುವವರನ್ನು ದೂರ ಇಡಲು ಪ್ರಯತ್ನಿಸುವುದಷ್ಟೆ ಅಲ್ಲದೇ ಈ ವ್ಯವಸ್ಥೆಯನ್ನೇ ಹಂತ ಹಂತವಾಗಿ ನಾಶಗೊಳಿಸಲಾಗುತ್ತಿದೆ.

ಬ್ಯಾಂಕುಗಳಲ್ಲಿನ ಸುಸ್ತಿ ಸಾಲ 4.4 ಲಕ್ಷ ಕೋಟಿ ರೂ.ಗಳ ವಸೂಲಾತಿಯನ್ನು ಮಾಡದೇ ಸರ್ಕಾರ ರೂ. 20,600 ಕೋಟಿಗಳ ಅಪ್ರತ್ಯಕ್ಷ ತೆರಿಗೆ ಸಂಗ್ರಹದ ಗುರಿಯನ್ನಿಟ್ಟುಕೊಂಡಿದೆ. ಎರಡು ದಿನಗಳ ಹಿಂದೆ ಶೇ.15ಕ್ಕೆ ಸೇವಾ ತೆರಿಗೆಯನ್ನು ಹೆಚ್ಚಿಸಿ ನೇರ ತೆರಿಗೆಯನ್ನು ಕಡಿಮೆ ಮಾಡಿರುವುದಲ್ಲದೆ ಕಾರ್ಪೋರೇಟ್ ಕಂಪನಿಗಳಿಗೆ ಮತ್ತು ನೇರ ತೆರಿಗೆದಾರರಿಗೆ ಇನ್ನೂ ಹೆಚ್ಚಿನ ಅನುಕೂಲಗಳನ್ನು ಕೇಂದ್ರದ ಬಜೆಟ್‌ನಲ್ಲಿ ಮಾಡಿಕೊಡಲಾಗಿದೆ.

ದೇಶದಲ್ಲಿ ಮತ್ತು ರಾಜ್ಯದಲ್ಲಿ ಭೀಕರ ಬರಗಾಲ, ಅನಾವೃಷ್ಟಿ, ಅತಿವೃಷ್ಟಿಗಳಿಂದಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಪ್ರಾಣಹಾನಿಯೂ ಒಳಗೊಂಡಂತೆ ನಡೆದಿರುವ ಅಪಾರ ಪ್ರಮಾಣದ ಸಂಕಷ್ಟಗಳ ವಿರುದ್ಧ ಸರ್ಕಾರಗಳ ವೈಫಲ್ಯವನ್ನು ಮತ್ತು ಲಕ್ಷಾಂತರ ಮಂದಿ ಗುಳೆ ಹೋಗುತ್ತಿರುವುದರ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯವನ್ನು ಈ ಸಮಾವೇಶ ತೀವ್ರವಾಗಿ ಖಂಡಿಸುತ್ತದೆ.

ಜಿಡಿಪಿಯ ಬೆಳವಣಿಗೆಯ ದರವು ಶೇ. 7.5ರಷ್ಟಾಗಿದೆ ಎಂದು ಸರ್ಕಾರ ಹೇಳುವಾಗಲೇ ಉದ್ಯೋಗಾವಕಾಶಗಳಲ್ಲಿ, ವೇತನ ಮತ್ತು ಭದ್ರತೆ ಸೌಲಭ್ಯಗಳಲ್ಲಿ, ಉದ್ಯೋಗ ಸೃಷ್ಟಿಯಲ್ಲಿನ ಹೂಡಿಕೆಗಳಲ್ಲಿ ಹೆಚ್ಚಳವಾಗದಿರುವುದು ಸರಕಾರದ ಹೇಳಿಕೆಯನ್ನು ಪ್ರಶ್ನಿಸುವಂತಾಗಿದೆ. ಉದ್ಯೋಗಾವಕಾಶಗಳಲ್ಲಿ ಇಳಿಮುಖವಾಗಿ, 2015 ಸೆಪ್ಟೆಂಬರ್‌ರಿಂದ ಡಿಸೆಂಬರ್ ವರೆಗಿನ ಅವಧಿಯಲ್ಲಿ ಐದು ಉತ್ಪಾದನಾ ಕ್ಷೇತ್ರಗಳಲ್ಲಿ 81 ಸಾವಿರ ಉದ್ಯೋಗಗಳು ಕಡಿತಗೊಂಡಿವೆ. ಉತ್ಪಾದನಾ ಕ್ಷೇತ್ರಗಳಲ್ಲಿ ರೋಬೋಟ್‌ಗಳ ಮೂಲಕ ಕೆಲಸ ಮಾಡಿಸುತ್ತಿರುವುದರಿಂದ ಸಾವಿರಾರು ಉದ್ಯೋಗಗಳು ನಷ್ಟವಾಗಿವೆ. ಒಂದು ಕೋಟಿ ಯುವಕರು ಪ್ರತಿ ವರ್ಷ ಉದ್ಯೋಗ ಮಾರುಕಟ್ಟೆಗೆ ಸೇರ್ಪಡೆಯಾಗುತ್ತಿದ್ದಾರೆ. ನಿರುದ್ಯೋಗ ಮತ್ತು ಉದ್ಯೋಗ ಕಡಿತದಲ್ಲಿನ ಹೆಚ್ಚಳ, ಕೂಲಿ ಮತ್ತು ಇತರ ಸೌಲಭ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಇದರಿಂದಾಗಿ ಕಾರ್ಮಿಕರು ಹೆಚ್ಚು ಹೆಚ್ಚಾಗಿ ಹಂಗಾಮಿ, ಗುತ್ತಿಗೆ ಕಾರ್ಮಿಕರಾಗಿ ಪರಿವರ್ತನೆಯಾಗುತ್ತಿದ್ದಾರೆ. Center for Monitoring Indian Economy (CMIE) ಪ್ರಕಟಿಸಿರುವ ಅಂಕಿ ಅಂಶಗಳಿಂದ ಒಟ್ಟು ಉತ್ಪಾದನಾ ಆದಾಯದ ಸುಮಾರು 10% ಕ್ಕೆ ವೇತನ ವೆಚ್ಚ ಇಳಿದಿದೆ. ಗ್ರಾಮೀಣ ಕೂಲಿಕಾರರ ವೇತನ ಮತ್ತು ಕೆಲಸದ ದಿನಗಳು ಕಡಿಮೆಯಾಗುತ್ತಿವೆ. Make in India, Stand Up India, Start Up India, Skill India, Digital India ಗಳ ಅಬ್ಬರದ ಪ್ರಚಾರ ನಡೆಯುತ್ತಿದೆ. ನವ ಉದಾರೀಕರಣದ ಈ ಯೋಜನೆಗಳ ಉದ್ದೇಶ, ಸಾರ್ವಜನಿಕ ಕ್ಷೇತ್ರದ ಆರ್ಥಿಕತೆಯಲ್ಲಿಯೂ ಖಾಸಗಿ ಉದ್ಯಮಗಳಿಗೆ ಅಧಿಕ ಲಾಭ ದೊರಕುವಂತೆ ಮಾಡುವುದು.

7ನೇ ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ, ಕನಿಷ್ಠ ಕೂಲಿ ಒಂದು ದಿನಕ್ಕೆ ರೂ. 700 ಆಗಿದ್ದರೆ, ಕೇಂದ್ರ ಸರಕಾರ ದಿನಕ್ಕೆ ರೂ.273 ಗಳಂತೆ ಕನಿಷ್ಠ ಕೂಲಿ ಕಾಯಿದೆಗೆ ತಿದ್ದುಪಡಿ ತರುತ್ತೇನೆಂದು ಹೇಳುತ್ತಿದೆ.

1970 ಗುತ್ತಿಗೆ ಕಾರ್ಮಿಕರ ಕಾಯ್ದೆಯ ಪ್ರಕಾರ, ಖಾಯಂ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಕಾಯ್ದೆ 25(2)(ಎ) ರ ಪರಿಚ್ಛೇದವನ್ನು ಮೂಲ ಕಾನೂನಿಗೆ ಅಳವಡಿಸಿ ಅದನ್ನು ಕಡ್ಡಾಯವಾಗಿ ಜಾರಿಗೊಳಿಸುವ ಬದಲಾಗಿ ಕಾಯ್ದೆಯ ಪುನಃಪರಿಶೀಲನೆಯ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ. 50ರಷ್ಟು ಕಾರ್ಮಿಕರಿದ್ದರೂ ಈ ಕಾಯ್ದೆ ಅನ್ವಯವಾಗದಿರುವುದರಿಂದ ಶೇ. 10 ಸಾವಿರಕ್ಕೆ ಕನಿಷ್ಠ ಕೂಲಿಯನ್ನು ಹೆಚ್ಚಿಸಿರುವುದು ಕೇವಲ ಕಣ್ಣೊರೆಸುವ ತಂತ್ರವಾಗಿದೆ. ಏಕೆಂದರೆ ಕಾಯ್ದೆಯೇ ಅನ್ವಯವಾಗದಿರುವುದರಿಂದ ಕನಿಷ್ಠ ಕೂಲಿ ಪಾವತಿಯ ಪ್ರಶ್ನೆಯೇ ಬರುವುದಿಲ್ಲವಲ್ಲ.

45ನೇ ILC ನೇ ಅಂಗನವಾಡಿ, ಬಿಸಿಯೂಟ, ಆಶಾ ನೌಕರರಿಗೆ ಕಾರ್ಮಿಕರೆಂದೂ ಪರಿಗಣಿಸಿ, ಕನಿಷ್ಠ ಕೂಲಿ, ಸಾಮಾಜಿಕ ಭದ್ರತೆಯನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದೆ. ಇದನ್ನು ಜಾರಿ ಮಾಡುವ ಬದಲಿಗೆ ಯೋಜನೆಗಳಿಗೆ ಅನುದಾನ ಕಡಿತ ಮಾಡಿ ದುರ್ಬಲಗೊಳಿಸುತ್ತಿದೆ. ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಾಮಾಜಿಕ ಭದ್ರತೆಯ ಕಾನೂನಿನ ಬದಲಿಗೆ ಹಳೆ ಯೋಜನೆಗಳಾದ ಅಟಲ್ ಪೆನ್ಷನ್ ಯೋಜನೆ, ಪ್ರಧಾನಮಂತ್ರಿ ಸುರಕ್ಷತಾ ವಿಮಾ ಯೋಜನೆ, ಸ್ವಾವಲಂಬನೆ ಮತ್ತು ಜನಸಾಮಾನ್ಯರ ಯೋಜನೆಗಳನ್ನು ಹೊಸ ಹೆಸರಿನಿಂದ ಜಾರಿ ಮಾಡಲಾಗುತ್ತಿದೆ. ಪಿ.ಎಫ್ ಮತ್ತು ಇಎಸ್‌ಐ ಸೌಲಭ್ಯಗಳನ್ನು ಐಚ್ಛಿಕ ಎಂದು ಪರಿವರ್ತಿಸಿ ಈ ಯೋಜನೆಗಳನ್ನು ದುರ್ಬಲಗೊಳ್ಳಿಸುವ ಮೂಲಕ ದುಡಿಯುವ ಜನರ ಸಾಮಾಜಿಕ ಭದ್ರತೆಯನ್ನು ಕಿತ್ತುಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

'ಶ್ರಮಯೇವ ಜಯತೆ' ಯ ಅಬ್ಬರದ ಪ್ರಚಾರದ ನಡುವೆಯೇ, ಕಾರ್ಖಾನೆ ಕಾಯ್ದೆ (Factories Act.) ಗೆ ತಿದ್ದುಪಡಿಯನ್ನು ಸಂಸತ್ತಿನ ಮುಂದಿಡಲಾಗುತ್ತಿದೆ, 44 ಕಾರ್ಮಿಕ ಕಾನೂನುಗಳನ್ನು 5 ಕೋಡ್‌ಗಳನ್ನಾಗಿ ಬದಲಾಯಿಸಲಾಗುತ್ತಿದೆ. ವೇತನ ನಿಯಮಗಳ ಕರಡು ಮತ್ತು ಔದ್ಯೋಗಿಕ ಸಂಬಂಧಗಳ ನಿಯಮಗಳ ಕರಡನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುತ್ತಿದೆ.

ಒಂದು ಸಂಸ್ಥೆಯಲ್ಲಿನ ಲಾಭ, ಬೋನಸ್‌ಗಳೆರಡೂ ಕಾರ್ಮಿಕರ ಉತ್ಪಾದನಾ ಚಟುವಟಿಕೆಗಳ ಫಲಿತಾಂಶವೇ ಆಗಿರುತ್ತದೆ. ಆದರೆ, ಲಾಭಕ್ಕೆ ಮಾತ್ರ ಮಿತಿ ಇಲ್ಲ ; ಬೋನಸ್‌ಗೆ ಇದೆ. ರೂ. 21 ಸಾವಿರ ಕ್ಕೂ ಮೀರಿದ ಮೂಲ ವೇತನವಿದ್ದಲ್ಲಿ ಬೋನಸ್ ಇಲ್ಲವೇ ಇಲ್ಲ. ಬೋನಸ್ ಮೇಲಿನ ಮಿತಿಯನ್ನು ತೆಗೆಯಬೇಕೆಂದು ಒತ್ತಾಯಿಸುತ್ತಿದ್ದರೂ, ಅದಕ್ಕೆ ಪ್ರತಿಕ್ರಿಯೆ ಇಲ್ಲ. ಸಾರ್ವಜನಿಕ ಕೈಗಾರಿಕೆಗಳಲ್ಲಿ 50 ವರ್ಷ ವಯಸ್ಸಾದ ಅಥವಾ 30 ವರ್ಷ ಸೇವೆ ಸಲ್ಲಿಸಿದ ಕಾರ್ಮಿಕರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಬೇಕೆಂಬ ತಿದ್ದುಪಡಿಯನ್ನು ಸ್ಥಾಯಿ ಆದೇಶ (Standing Orders) ತರಲು ಪ್ರಯತ್ನಿಸಲಾಗುತ್ತಿದೆ. ಬಂಡವಾಳ ಹಿಂತೆಗೆತದ ಹೆಸರಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಷೇರುಗಳನ್ನು ಅತೀ ಕಡಿಮೆ ಬೆಲೆಗೆ ಮಾರಲಾಗುತ್ತಿದೆ. ಬಂಡವಾಳ ಹಿಂತೆಗೆತದ ಪ್ರತಿಯೊಂದು ಪ್ರಕರಣದಲ್ಲೂ ಷೇರು ಮಾರಾಟದ ಬೆಲೆ ಸಂಬಂಧಪಟ್ಟ ಸಾರ್ವಜನಿಕ ಉದ್ದಿಮೆಯ ಆಸ್ತಿಗಿಂತಲೂ ತೀರಾ ಕಡಿಮೆ ಪ್ರಮಾಣದಲ್ಲಿದೆ. ಈ ರೀತಿಯ ಷೇರು ಮಾರಾಟದ ಪ್ರಕ್ರಿಯೆಯ ಮೂಲಕ ರಾಷ್ಟ್ರೀಯ ಸಂಪತ್ತನ್ನು ಹಂತ ಹಂತವಾಗಿ ಖಾಸಗಿಯವರಿಗೆ ವರ್ಗಾಯಿಸುವುದಲ್ಲದೇ ಸಾರ್ವಜನಿಕ ಉದ್ದಿಮೆಗಳ ಆಡಳಿತ ನಿರ್ವಹಣೆಯನ್ನು ಕೂಡಾ ಖಾಸಗಿಯವರಿಗೆ ಒಪ್ಪಿಸುವ ಕೆಲಸ ನಡೆಯುತ್ತಿದೆ. ಬಂಡವಾಳ ಹಿಂತೆಗೆತದ ಮೂಲಕ ಸಂಗ್ರಹಿಸಲು ಉದ್ದೇಶಿಸಲಾಗಿರುವ ಒಟ್ಟು 56 ಸಾವಿರ ಕೋಟಿ ರೂಪಾಯಿಗಳಲ್ಲಿ 20,500 ಕೋಟಿ ರೂ.ಗಳನ್ನು ನಿರ್ದೇಶಿತ ಮಾರಾಟ (Strategic Sale)ದ ಮೂಲಕವೇ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ. ರಕ್ಷಣಾ, ರೈಲ್ವೆ, ವಿಮಾ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳನ್ನು ವಿದೇಶೀ ನೇರ ಬಂಡವಾಳದ ನಿಯಂತ್ರಣಕ್ಕೆ ಒಪ್ಪಿಸುವ ತಂತ್ರ ಸರ್ಕಾರದ್ದು.

ಮೇಕ್ ಇನ್ ಇಂಡಿಯಾ ಎಂದು ಘೋಷಣೆ ಕೊಡುತ್ತಿರುವ ಸರ್ಕಾರ, ಎಲ್ಲಾ ಕ್ಷೇತ್ರಗಳಲ್ಲಿ ವಿದೇಶೀ ನೇರ ಬಂಡವಾಳದ ಹೂಡಿಕೆಗೆ ಅನಿಯಂತ್ರಿತ ಅವಕಾಶ ಮಾಡಿಕೊಡುವುದರ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ದುರ್ಬಲಗೊಳಿಸಿ ಆ ಮೂಲಕ ದೇಶದ ಭದ್ರತೆಯ ಜೊತೆಯಲ್ಲಿ ರಾಜಿಮಾಡಿಕೊಳ್ಳುವುದರ ಜೊತೆಗೆ ಆರ್ಥಿಕತೆಯನ್ನು ವಿದೇಶೀ ಶಕ್ತಿಗಳ ಕೈವಾಡಕ್ಕೆ ಒಡ್ಡುವ ಅಪಾಯಕಾರಿ ಪರಿಸ್ಥಿತಿಗೆ ತಳ್ಳುತ್ತಿದೆ.

ಕಾರ್ಮಿಕರ, ರೈತರ ಹಾಗೂ ಜನಸಾಮಾನ್ಯರ ಮತ್ತು ದೇಶದ ಆರ್ಥಿಕತೆಯ ಹಿತಾಸಕ್ತಿಯ ಬಗ್ಗೆ ಕಳಕಳಿ ತೋರುವ ಬದಲಾಗಿ, ಆಳುವ ಜನ ಕಾರ್ಪೋರೇಟ್ ಕಂಪೆನಿಗಳ ಒಳಿತಿಗಾಗಿ ಅವರ ತಾಳಕ್ಕೆ ತಕ್ಕಂತೆ ಕೇಂದ್ರ ಸರ್ಕಾರ ಕುಣಿಯುತ್ತಿದೆ.

ಏನೆಲ್ಲಾ ಪ್ರಯತ್ನ ಮಾಡಿದರೂ ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಆಳುವ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸೆಪ್ಟೆಂಬರ್ 02, 2015ರ ಮುಷ್ಕರ ಇದನ್ನು ನಿಚ್ಛಳವಾಗಿ ಸಾಬೀತು ಪಡಿಸಿದೆ. ಈ ಐಕ್ಯತೆಯನ್ನು ಇನ್ನಷ್ಟು ಗಟ್ಟಿಗೊಳಿಸಿ ಹನ್ನೆರಡು ಬೇಡಿಕೆಗಳ ಒಪ್ಪಿಗೆಗಾಗಿ ಹಾಗೂ ಜನತೆಯ

ಪುಟ 10 ಕ್ಕೆ



ಜೆಸಿಟಿಯು (ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ) ಕರ್ನಾಟಕ ಜೂನ್ 10 ರಂದು ಬೆಂಗಳೂರಿನ ಶೇಷಾದ್ರಿಪುರಂನ ವರದಾಚಾರ್ ಮೆಮೋರಿಯಲ್ ಹಾಲ್‌ನಲ್ಲಿ ರಾಜ್ಯ ಮಟ್ಟದ ಕಾರ್ಮಿಕರ ಮತ್ತು ನೌಕರರ ಸಮಾವೇಶ ಏರ್ಪಡಿಸಿತ್ತು. ಸಮಾವೇಶ ಸೆಪ್ಟೆಂಬರ್ 2 ರ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಿದೆ. ಈ ಸಮಾವೇಶದಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳಾದ INTUC, AITUC, HMS, CITU, AIUTUC, TUCC, AICCTU; ಬಿ.ಎಸ್.ಎನ್.ಎಲ್., ಬ್ಯಾಂಕ್–ವಿಮಾ ನೌಕರರ ಸಂಘಟನೆಗಳು; ಕೇಂದ್ರ–ರಾಜ್ಯ ಸೇವಾ ನೌಕರರ ಸಂಘಟನೆಗಳ – ರಾಜ್ಯ ಘಟಕಗಳು ಹಾಗೂ JAF-ಬೆಂಗಳೂರು ಪ್ರತಿನಿಧಿಗಳು ನಾಯಕರೂ ಭಾಗವಹಿಸಿದ್ದರು. ಈ ಸಮಾವೇಶ ಕೆಳಗಂಡ ನಿರ್ಣಯವನ್ನು ಅಂಗೀಕರಿಸಿದೆ:

ಶ್ರಮ ವಿಭಜನೆಯ ಭರದಲ್ಲಿ ಜನತೆಯ ಸಂಕಟ ಮರೆತ ಬಿಜೆಪಿ ಕಾರ್ಯಕಾರಿಣಿ

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ಬಿಜೆಪಿ ಕಾರ್ಯಕಾರಿಣಿಯ ಸಭೆಯಲ್ಲಿ ಒಂದು ಕಡೆ ವಿಕಾಸದ ರಾಗಾಲಾಪನೆ, ಮತ್ತೊಂದು ಕಡೆ ಕೈರಾನಾ ಸಾಮೂಹಿಕ ದೇಶಾಂತರದ ಆಲಾಪನೆ ಮೋದಿ–ಷಾ ಜೋಡಿಯ ಶ್ರಮವಿಭಜನೆಯನ್ನು ದೃಢಪಡಿಸಿದೆ. ಈ ಕಾರ್ಯಕಾರಿಣಿ ಸಭೆಯ ಇನ್ನೊಂದು ಪ್ರಮುಖ ಅಂಶವೆಂದರೆ, ಸರ್ವಾಧಿಕಾರಿ ನಾಯಕನಾಗಿ ಮೋದಿಯವರ ವ್ಯಕ್ತಿಪೂಜೆಯನ್ನು ಕಟ್ಟುವ ಪ್ರಯತ್ನ. ಈ ಭರದಲ್ಲಿ ಅಂಗೀಕರಿಸಲಾದ ಗೊತ್ತುವಳಿಗಳಲ್ಲಿ ಜನಸಾಮಾನ್ಯರ ಸಂಕಟಗಳು ಮತ್ತು ಆರ್ಥಿಕ ಪರಿಸ್ಥಿತಿಯ ವಿಚಾರಗಳು ಕಾಣೆಯಾಗಿವೆ.



ಪ್ರಕಾಶ್ ಕಾರಟ್

ಅಲಹಾಬಾದ್‌ನಲ್ಲಿ ಜೂನ್ 12 ಮತ್ತು 13ರಂದು ನಡೆದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಮೋದಿ–ಷಾ ಜೋಡಿ ನಡುವಿನ ಶ್ರಮ ವಿಭಜನೆಯನ್ನು ದೃಢಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ವಿಕಾಸ ಮತ್ತು ಅಭಿವೃದ್ಧಿಯ ಓಘವನ್ನು ಮುಂದಕ್ಕೊಯ್ಯುವ ತಮ್ಮ ಸರಕಾರದ ಬದ್ಧತೆಯ ರಾಗ ಆಲಾಪಿಸಿದರೆ, ಬಿಜೆಪಿ ಅಧ್ಯಕ್ಷ ಅಮಿತ್ ಷಾ ಉತ್ತರ ಪ್ರದೇಶದ ಪಶ್ಚಿಮ ಭಾಗದ ಕೈರಾನಾದಿಂದ ಹಿಂದೂಗಳ ತಥಾಕಥಿತ ವಲಸೆಯಂಥ ಹಿಂದೂತ್ವ ವಿಚಾರಗಳ ಬಗ್ಗೆ ಮಾತಾಡಿದರು. ಉತ್ತರ ಪ್ರದೇಶದಲ್ಲಿ ನಡೆದ ಕಾರ್ಯಕಾರಿಣಿ ಸಭೆ, 2017ರ ಫೆಬ್ರವರಿಯಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಕಾರ್ಯತಂತ್ರ ರೂಪಿಸುವುದಕ್ಕೆ ಹೆಚ್ಚಿನ ಗಮನ ಕೇಂದ್ರೀಕರಿಸಿತು. ಬಿಜೆಪಿ ಅಧಿಕಾರಕ್ಕೆ ಬಂದರೆ ಉತ್ತರ ಪ್ರದೇಶವನ್ನು ಒಂದು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡುವುದಾಗಿ ಮೋದಿ ಆಶ್ವಾಸನೆ ನೀಡಿದರು. ಇನ್ನೊಂದೆಡೆಯಲ್ಲಿ ಅಮಿತ್ ಷಾ 2014ರ ಲೋಕಸಭೆ ಚುನಾವಣೆಯ ಒರೆಗಲ್ಲಲ್ಲಿ ಬಹಳ ಯಶಸ್ವಿಯಾಗಿರುವ ಹಿಂದೂತ್ವ ಅಜೆಂಡಾವನ್ನು ಬಿಚ್ಚಿಟ್ಟರು. ಈ ಅಜೆಂಡಾ ಅದಕ್ಕೆ ಉತ್ತರ ಪ್ರದೇಶದ 80 ಸ್ಥಾನಗಳ ಪೈಕಿ 71ನ್ನು ದೊರಕಸಿಕೊಟ್ಟಿತು.

ಕೈರಾನಾದಿಂದ ತಥಾಕಥಿತ ಸಾಮೂಹಿಕ ಹಿಂದೂ ವಲಸೆಯ ಬಗ್ಗೆ ಷಾ ಅಧ್ಯಕ್ಷೀಯ ಭಾಷಣದಲ್ಲಿ ಪ್ರಸ್ತಾವ ಮಾಡಿರುವುದು ಸುಳ್ಳು ಕತೆಯೊಂದರ ಆಧಾರದಲ್ಲಿ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸುವ ವ್ಯವಸ್ಥಿತ ಲೆಕ್ಕಾಚಾರದ ಭಾಗವಾಗಿದೆ. ಕೈರಾನಾ ಪಟ್ಟಣದಿಂದ 346 ಹಿಂದೂ ಕುಟುಂಬಗಳು ಜೀವಕ್ಕೆ ಅಪಾಯ ವಿರುವುದರಿಂದ, ವಲಸೆ ಹೋಗಿವೆ ಎಂದು ಕೈರಾನಾದ ಬಿಜೆಪಿ ಸಂಸದ ಹುಕುಮ್ ಸಿಂಗ್ ಹೇಳಿದ್ದಾರೆ. ಅವರ ಪ್ರಕಾರ ಈ ಬೆದರಿಕೆ ಮುಸ್ಲಿಮರಿಂದ ಎಂದು ಊಹಿಸಬಹುದು. ಬಿಜೆಪಿ ಸಂಸದ ಬಾಧಿತ ಕುಟುಂಬಗಳ ಪಟ್ಟಿಯನ್ನು ಕೊಟ್ಟ ನಂತರ ಬಿಜೆಪಿಯ ಇಡೀ ರಾಷ್ಟ್ರೀಯ ನಾಯಕತ್ವ ಮತ್ತು ಕೇಂದ್ರ ಗೃಹ ಇಲಾಖೆ ಕೂಡ ಕಾರ್ಯಾಚರಣೆಗೆ ಇಳಿದವು. ಸಂಸದ ಮಾಡಿದ ಆರೋಪ ಅಪ್ಪಟ ಸುಳ್ಳು ಎಂಬುದು ಜಿಲ್ಲಾಡಳಿತ ನಡೆಸಿದ ತನಿಖೆಯಿಂದ ಸಾಬೀತಾಗಿದೆ. ಮಾಧ್ಯಮದವರು ಕೂಡ ಈ ವಿಚಾರದಲ್ಲಿ ಸತ್ಯಸಂಗತಿಗಳನ್ನು ಪರಿಣಾಮಕಾರಿಯಾಗಿ ಬಿಚ್ಚಿಟ್ಟಿದ್ದಾರೆ. ಪಟ್ಟಿಯಲ್ಲಿರುವ ಬಹುತೇಕ ಜನರು ಉತ್ತಮ ಉದ್ಯೋಗ ಮತ್ತು ಜೀವನವನ್ನರಸಿ ವರ್ಷಗಳ ಹಿಂದೆಯೇ ಆ ಪಟ್ಟಣ ಬಿಟ್ಟು ಹೋಗಿದ್ದಾರೆ ಎನ್ನುವುದು ತಿಳಿದುಬಂದಿದೆ. ಅವರಲ್ಲಿ ಕೆಲವರು ಈಗ ಜೀವಂತವಾಗಿಲ್ಲ.

ಕೈರಾನಾ ವಲಸೆ ಸಿದ್ಧಾಂತ ಸುಳ್ಳೆಂಬುದು ಪರಿಣಾಮಕಾರಿಯಾಗಿ ಬಯಲಿಗೆ ಬಂದ ಮೇಲೂ ಬಿಜೆಪಿ ರಾಷ್ಟ್ರೀಯ ನಾಯಕತ್ವ ಅದನ್ನು ಗಂಭೀರವಾಗಿ ಪರಿಗಣಿಸಿ ಸಂಸತ್ ಸದಸ್ಯರ ಎಂಟು ಸದಸ್ಯರ ತಂಡವೊಂದನ್ನು ತನಿಖೆಗಾಗಿ ಅಲ್ಲಿಗೆ ಕಳಿಸಿದ್ದು ಚುನಾವಣೆ ಹಿನ್ನೆಲೆಯಲ್ಲಿ ಕೋಮುವಾದಿ ಅಜೆಂಡಾವನ್ನು ಆ ಪಕ್ಷ ಹೇಗೆ ಕೆದಕಲಿದೆ ಎನ್ನುವುದರ ಸ್ಪಷ್ಟ ಸೂಚನೆಯಾಗಿದೆ. ನಿಜ ಹೇಳಬೇಕೆಂದರೆ ಕೈರಾನಾದ ನೆರೆಯ ಮುಜಫರ್‌ನಗರದಿಂದ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು 2013 ಸೆಪ್ಟೆಂಬರ್‌ನಲ್ಲಿ ಅವರ ಮೇಲೆ ನಡೆದ ಹಿಂಸಾಚಾರದ ನಂತರ ವಲಸೆ ಹೋಗಿದ್ದಾರೆ. ಇದು ವಾಸ್ತವ ಸಂಗತಿ.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಇನ್ನೊಂದು ಪ್ರಮುಖ ಅಂಶವೆಂದರೆ, ನರೇಂದ್ರ ಮೋದಿಯವರನ್ನು ಪಕ್ಷ ಮತ್ತು ಸರಕಾರದ ಸರ್ವೋನ್ನತ ನಾಯಕರಾಗಿ ಬಿಂಬಿಸಲು ಇನ್ನಿಲ್ಲದ ಪ್ರಯತ್ನ–ಪ್ರಚಾರ ನಡೆಸುವುದು. ಸಭೆಯಲ್ಲಿ ಅಂಗೀಕರಿಸಲಾದ ರಾಜಕೀಯ ಮತ್ತು ಆರ್ಥಿಕ ಗೊತ್ತುವಳಿಗಳು ತಮ್ಮ ಸರಕಾರದ ಎರಡು ವರ್ಷಗಳಲ್ಲಿ ನರೇಂದ್ರ ಮೋದಿಯವರ ಸಾಧನೆಗಳ ಸುತ್ತವೇ ಗಿರಕಿ ಹೊಡೆದವು. ಒಬ್ಬ ಸರ್ವಾಧಿಕಾರಿ ನಾಯಕನ ವ್ಯಕ್ತಿಪೂಜೆಯನ್ನು ಕಟ್ಟುವ ಪ್ರಯತ್ನ ಢಾಳಾಗಿ ಕಾಣಿಸುತ್ತದೆ.

ಮೋದಿಯೇ ನಾಯಕ ಎಂದು ಬಿಂಬಿಸುವ ಭರದಲ್ಲಿ, ಅಂಗೀಕರಿಸಲಾದ ಗೊತ್ತುವಳಿಗಳಲ್ಲಿ ಜನಸಾಮಾನ್ಯರ ಸಂಕಟಗಳು ಮತ್ತು ಆರ್ಥಿಕ ಪರಿಸ್ಥಿತಿಯ ವಿಚಾರಗಳು ಕಾಣೆಯಾಗಿವೆ.

ಅಲಹಾಬಾದ್‌ನಲ್ಲಿ ಬಿಜೆಪಿ ಸಭೆ ನಡೆಯುತ್ತಿರುವಾಗ ಅತ್ತ ಅದೇ ರಾಜ್ಯದ ಬುಂದೇಲ್‌ಖಂಡ್ ಪ್ರದೇಶದ ಬರಪೀಡಿತ ರೈತರು ಮತ್ತು ಗ್ರಾಮೀಣ ಬಡಜನರು ಗುಳೆ ಹೋಗುತ್ತಿರುವುದು ಮುಂದುವರಿದಿತ್ತು.

ಆಹಾರ ವಸ್ತುಗಳ ಬೆಲೆಗಳಲ್ಲಿ ಭಾರೀ ಏರಿಕೆ ಆಗಿರುವುದನ್ನು ಹಣದುಬ್ಬರ ಕುರಿತ ಇತ್ತೀಚಿನ ಅಂಕಿಅಂಶಗಳೇ ತೋರಿಸುತ್ತವೆ. ಎಪ್ರಿಲ್ ತಿಂಗಳ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಶೇಕಡಾ 0.8 ರ ಕುಸಿತವನ್ನು ದಾಖಲಿಸಿದೆ. ವರ್ಷದಿಂದ ವರ್ಷಕ್ಕೆ ಇದು ಕುಸಿಯುತ್ತಲೇ ಇದೆ. ಪ್ರತಿ ವರ್ಷ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುವ 1.3 ಭಾರತೀಯರನ್ನು ಉದ್ಯೋಗಾವಕಾಶಗಳು ಕುಂಠಿತಗೊಳ್ಳುತ್ತಿರುವ ಸಮಸ್ಯೆ ಕಾಡುತ್ತಲೇ ಇದೆ.

ಕಾರ್ಯಕಾರಿಣಿಯಲ್ಲಿ ಮೋದಿ ಸರಕಾರದ ಎರಡು ವರ್ಷಗಳ ಸಂಭ್ರಮದ ಬಡಾಯಿಗಳು ದೇಶ ಎದುರಿಸುತ್ತಿರುವ ಘೋರ ವಾಸ್ತವಕ್ಕೆ ತದ್ವಿರುದ್ಧವಾಗಿದ್ದವು.

ಅನುವಾದ: ವಿಶ್ವ



ಮಥುರ, ಕೈರಾನ ಮತ್ತು ಉತ್ತರಪ್ರದೇಶ 2017

ವ್ಯಂಗ್ಯಚಿತ್ರ: ಸುರೇಂದ್ರನ್,, ದಿ ಹಿಂದು

ಹೈದರಾಬಾದ್ ವಿವಿಯ ಇಬ್ಬರು ಪ್ರಾಧ್ಯಾಪಕರ ಅಮಾನತು –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ ಉಪಕುಲಪತಿಯನ್ನು ತಕ್ಷಣವೇ ವಜಾ ಮಾಡಲು ಆಗ್ರಹ

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಇಬ್ಬರು ಪ್ರಾಧ್ಯಾಪಕರಾದ ಪ್ರೊ..ಕೆ ವೈ ರತ್ನಂ ಮತ್ತು ಪ್ರೊ. ತಥಾಗತ ಸೆನ್‌ಗುಪ್ತ ಅವರನ್ನು ರೊಹಿತ್ ವೆಮುಲ ಆತ್ಮಕತ್ಯೆಯ ಹಿನ್ನೆಲೆಯಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಬೆಂಬಲಿಸಿದರು ಎಂಬ ಆಪಾದನೆಯ ಮೇಲೆ ಅಮಾನತುಗೊಳಿಸಲಾಗಿದೆ.

ವಿವಿಯ ಉಪಕುಲಪತಿ ವಿದ್ಯಾರ್ಥಿಗಳ ಚಳುವಳಿಯನ್ನು ಮುರಿಯಲು ವಿವಿ ಆವರಣದೊಳಕ್ಕೆ ಕರೆಸಿಕೊಂಡ ಪೋಲೀಸರ ಅಮಾನುಷ ಲಾಠೀ ಪ್ರಹಾರವನ್ನು ತಪ್ಪಿಸಲು ಪ್ರಯತ್ನಿಸಿದ್ದೇ ಇವರ ಅಪರಾಧವಾಗಿದೆ!

ಈ ಉಪಕುಲಪತಿ, ಅಪ್ಪಾ ರಾವ್ ಮೇಲೆ ರೋಹಿತ್ ವೆಮುಲ ಆತ್ಮಹತ್ಯೆಗೆ ಕಾರಣರಾದವರು ಎಂಬ ಕೇಸ್ ದಾಖಲಾಗಿದೆ. ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದಲ್ಲೂ ಈತನ ವಿರುದ್ಧ ಕೇಸು ದಾಖಲಾಗಿದೆ. ರೋಹಿತ್ ವೆಮುಲ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದ ಸನ್ನಿವೇಶವನ್ನು ಸೃಷ್ಟಿಸಿದ ಉಪಕುಲಪತಿ ಮತ್ತು ಇತರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ವಿವಿ ಆಡಳಿತ ಈ ಘಟನೆಯಿಂದ ಘಾಸಿಗೊಂಡವರ ವಿರುದ್ಧವೇ ಕ್ರಮ ಕೈಗೊಂಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿವಿಯ ಈ ಕ್ರಮವನ್ನು ಬಲವಾಗಿ ಖಂಡಿಸಿದೆ.


ಈ ಉಪಕುಲಪತಿ ಪೋಲೀಸ್ ದೌರ್ಜನ್ಯವನ್ನು ತಡೆಯಲು ಹೋದ ಇಬ್ಬರು ಪ್ರಾಧ್ಯಾಪಕರ ವಿರುದ್ಧ ಕೇಸುಗಳನ್ನು ದಾಖಲಿಸಿದರು, ತೆಲಂಗಾಣ ಸರಕಾರ ಅವರನ್ನು ಒಂಭತ್ತು ದಿನಗಳ ಕಾಲ ಜೈಲಿಗೆ ಕಳಿಸಿತು. ಈಗ ಅದನ್ನೇ ನೆವ ಮಾಡಿಕೊಂಡು ಅವರನ್ನು ಅಮಾನತು ಗೊಳಿಸಲಾಗಿದೆ. ಈ ಮೂಲಕ ತೆಲಂಗಾಣ ಸರಕಾರ ಕೇಂದ್ರ ಹೆಚ್‌ಆರ್‌ಡಿ ಮಂತ್ರಿಗಳ ಆದೇಶದಂತೆ ನಡೆಯುತ್ತಿರುವ ಉಪಕುಲಪತಿಯ ಮೇಲಿನ ಕ್ರಿಮಿನಲ್ ಕೇಸಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಆತನ ಪರವಾಗಿ ವರ್ತಿಸುತ್ತಿದೆ.

ಈ ಉಪಕುಲಪತಿಯನ್ನು ತಕ್ಷಣವೇ ವಜಾ ಮಾಡಬೇಕು, ಕೇಂದ್ರ ಸರಕಾರ ಮಧ್ಯಪ್ರವೇಶಿಸಿ ಈ ಕೇಂದ್ರೀಯ ವಿವಿಯ ಆವರಣದಲ್ಲಿ ಸಾಮಾನ್ಯ ವಾತಾವರಣ ನೆಲೆಸುವಂತೆ ಮಾಡಬೇಕು, ತೆಲಂಗಾಣ ಸರಕಾರ ಕೂಡಲೇ ರೊಹಿತ್ ವೆಮುಲ ಆತ್ಮಹತ್ಯೆಗೆ ಕಾರಣರಾದ ಈ ವ್ಯಕ್ತಿ ಮತ್ತು ಇತರರ ವಿರುದ್ಧ ಕ್ರಿಮಿನಲ್ ಕೇಸುಗಳಲ್ಲಿ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ರೋಹಿತ್ ವೆಮುಲ ದಲಿತ –ಗುಂಟೂರು ಕಲೆಕ್ಟರಿಂದ ಅಧಿಕೃತ ಪ್ರಮಾಣ ಈಗ ತೆಲಂಗಾಣ ಪೋಲೀಸ್ ಅತ್ಯಾಚಾರಗಳ ತಡೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು

ರೋಹಿತ್ ವೆಮುಲ ದಲಿತರೇ ಅಲ್ಲ, ಎಂದು ಕೇಂದ್ರೀಯ ಮಂತ್ರಿಗಳಾದ ಸುಷ್ಮಾ ಸ್ವರಾಜ್, ಸ್ಮೃತಿ ಇರಾನಿ ಮತ್ತು ಸ್ವತಃ ಸಾಮಾಜಿಕ ನ್ಯಾಯದ ಮಂತ್ರಿ(!) ತಾರಾಚಂದ್ ಗೆಹ್ಲೋಟ್ ಸೇರಿದಂತೆ ಬಿಜೆಪಿ ಮುಖಂಡರು ಹೇಳಿಕೊಂಡು ಬಂದಿದ್ದಾರೆ. ಆದ್ದರಿಂದ ದಲಿತರ ಮೇಲಿನ ಅತ್ಯಾಚಾರ ತಡೆ ಕಾನೂನು ಈ ಕೇಸಿನಲ್ಲಿ ಅನ್ವಯವಾಗುವುದಿಲ್ಲ ಎಂಬುದು ಅವರ ವಾದವಾಗಿತ್ತು. ಆದರೆ ಈಗ ಗುಂಟೂರಿನ ಕಲೆಕ್ಟರ್ ಅವರು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಸಲ್ಲಿಸಿದ ವರದಿಯಲ್ಲಿ ರೋಹಿತ್ ಪರಿಶಿಷ್ಟ ಜಾತಿಯಾದ ಮಾಲಾ ಸಮುದಾಯಕ್ಕೆ ಸೇರಿದವರು ಎಂದು ಪ್ರಮಾಣಿಸಿರುವುದಾಗಿ ವರದಿಯಾಗಿದೆ. ಈಗ ಈ ವರದಿಯ ಆಧಾರದ ಮೇಲೆ ಆಯೋಗ ಸೈಬರಾಬಾದ್ ಪೋಲೀಸರಿಗೆ ಕೇಂದ್ರ ಮಂತ್ರಿ ಬಂಡಾರು ದತ್ತಾತ್ರೇಯ, ಹೈದರಾಬಾದ್ ಕೇಂದ್ರೀಯ ವಿವಿ ಉಪಕುಲಪತಿ ಅಪ್ಪಾ ರಾವ್ ಮತ್ತಿತರ ಮೂರು ಮಂದಿಯ ವಿರುದ್ಧ ಪರಿಶಿಷ್ಟ ಜಾತಿ/ಬುಡಕಟ್ಟುಗಳ ಮೇಲೆ ಅತ್ಯಾಚಾರಗಳ ತಡೆ ಕಾನೂನಿನ ಅಡಿಯಲ್ಲಿ ಹಾಕಲಾಗಿರುವ ಕೇಸಿನ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡುವುದಾಗಿ ಆಯೋಗದ ಅಧ್ಯಕ್ಷರು ಹೇಳಿದ್ದಾರೆ. ತೆಲಂಗಾಣ ಪೋಲೀಸರು ಈ ಆಪಾದನೆಗಳ ಮೇಲೆ ಕ್ರಮ ಕೈಗೊಳ್ಳದಿದ್ದರೆ ಅದು ಸಂವಿಧಾನದ ಮತ್ತು ಕಾನೂನಿನ ಉಲ್ಲಂಘನೆಯಾಗುತ್ತದೆ, ಆಗ ಆಯೋಗ ಪೋಲೀಸರಿಂದ ಈ ಬಗ್ಗೆ ವಿವರಣೆ ಕೇಳಲೇಬೇಕಾಗುತ್ತದೆ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.





ಇಸ್ಕಾನ್ ಭೂಹಗರಣ

ಜನಶಕ್ತಿ ವಿಶೇಷ ತನಿಖಾ ವರದಿ

ಲಿಂಗರಾಜು

ಕರ್ನಾಟಕದಲ್ಲಿ ಭೂಹಗರಣಗಳು ಹೊಸದೇನಲ್ಲ. ಆದರೆ ಇಸ್ಕಾನ್ ಎಂಬ ಧಾರ್ಮಿಕ ಸಾಮಾಜಿಕ ಸೇವಾ ಸಂಸ್ಥೆಯ ಈ ಭೂಹಗರಣಕ್ಕೆ ಹಲವು ವಿಶೇಷತೆಗಳಿವೆ. ಇದು ಧಾರ್ಮಿಕ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಡೆವಲಪರ್ ಕಂಪನಿಗಳು, ರೀಯಲ್ ಎಸ್ಟೇಟ್ ಕುಳಗಳು, ಅಧಿಕಾರಿಗಳು, ರಾಜಕಾರಣಿಗಳು ಸೇರಿ ಧರ್ಮದ ಹೆಸರಿನಲ್ಲಿ ನಡೆಸುತ್ತಿರುವ ಲೂಟಿ. ಇಲ್ಲಿ ಪರಿಸರ, ಕೈಗಾರಿಕಾ ಬೆಳವಣಿಗೆ ಬಗ್ಗೆ ಇರುವ ಎಲ್ಲಾ ನೀತಿ ನಿಯಮಗಳು, ಕಾನೂನುಗಳನ್ನು ಉಲ್ಲಂಘಿಸಲಾಗಿದೆ. ಇದು ಲಿಂಗರಾಜು 'ಜನಶಕ್ತಿ'ಗಾಗಿ ತಯಾರಿಸಿರುವ ವಿಶೇಷ ತನಿಖಾ ವರದಿ. ಇಂತಹ ಹಲವು ತನಿಖಾ ವರದಿಗಳನ್ನು 'ಜನಶಕ್ತಿ' ನೀಡಲಿದೆ.

ಬೆಂಗಳೂರು ನಗರದಲ್ಲಿ 34 ಸಾವಿರ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದ್ದರೂ ಒಂದು ರಾಜ್ಯ ಸರ್ಕಾರಕ್ಕೆ ಒತ್ತುವರಿದಾರರನ್ನು ಏನೂ ಮಾಡಲಾಗದ ಸ್ಥಿತಿ ಇದೆ. ಹಾಗೆಯೇ ವಾಣಿಜ್ಯ ಉದ್ದೇಶಕ್ಕಾಗಿ ಸರ್ಕಾರದಿಂದ ಜಮೀನು ಪಡೆದಿದ್ದವರು ಅಕ್ರಮವಾಗಿ ರೆಸಿಡೆನ್ಸಿಯಲ್ ಲೇಔಟ್‌ಗಳನ್ನು ನಿರ್ಮಾಣ ಮಾಡಿ ಕೋಟಿಗಟ್ಟಲೆ ಗಾಂಧಿ ನೋಟು ಎಣಿಸುತ್ತಾ, ಐಷಾರಾಮಿ ಕಾರುಗಳಲ್ಲಿ ಅರಾಮಾಗಿ ಓಡಾಡಿಕೊಂಡಿದ್ದಾರೆ. ಈ ರಿಯಲ್ ಎಸ್ಟೇಟ್ ದೊರೆಗಳ ಪರಾಕ್ರಮಗಳು ಬೆಂಗಳೂರಿಗರಿಗೆ ಹೊಸದೇನಲ್ಲ ಬಿಡಿ. ಆದರೆ ಆಶ್ಚರ್ಯವಾಗಿದ್ದು ಅಧರ್ಮವನ್ನು ಹೋಗಲಾಡಿಸಿ, ಧರ್ಮ ಸಂಸ್ಥಾಪನೆ ಮಾಡುವ ಸಂಸ್ಥೆಯೂ ಇಂತಹ ನೀಚಕೃತ್ಯಕ್ಕೆ ಇಳಿದರೆ ದೇವರನ್ನು ನಂಬಿದವರ ಸ್ಥಿತಿ ಏನಾದೀತು?

ಧರ್ಮ ಸಂಸ್ಥಾಪನಾರ್ಥ ಸಂಭವಾಮಿ ಯುಗೇ ಯುಗೇ ಎಂದು ಉದ್ಘೋಷಿಸಿದ ಶ್ರೀಕೃಷ್ಣ, ಅಂದು ಧರ್ಮವನ್ನು ಉಳಿಸಲು ಚಾಣಕ್ಯ ತಂತ್ರಗಳನ್ನು ಎಣೆದು ಅಂತಿಮವಾಗಿ ಧರ್ಮವನ್ನು ಉಳಿಸಿದನೆಂದು ವ್ಯಾಸನ ಮಹಾಭಾರತದಲ್ಲಿ ಓದಿದ್ದೇವೆ, ಕೇಳಿದ್ದೇವೆ. ಹೀಗಾಗಿಯೇ ಇಂದಿಗೂ ದೇಶದ ನಾನಾ ಭಾಗಗಳಲ್ಲಿ ಕೃಷ್ಣನ ದೇವಸ್ಥಾನಗಳಿವೆ. ಜನ ಶ್ರದ್ಧಾಭಕ್ತಿಯಿಂದ ಕೃಷ್ಣನನ್ನು ಆರಾಧಿಸುತ್ತಾರೆ. ಆದರೆ ಕೃಷ್ಣನ ಆರಾಧನೆ ಮಾಡುತ್ತಾ ಪಿಳ್ಳು ಜುಟ್ಟು ಬಿಟ್ಟುಕೊಂಡು, ಪಂಡರಾಪುರದ ಶ್ರೀಕೃಷ್ಣನ ಅಪರಾವತಾರವೆಂದೇ ಬಿಂಬಿಸಿಕೊಂಡು ಅಕ್ಷಯ ಪಾತ್ರೆ ಹಿಡಿದು ಬೆಂಗಳೂರಿಗೆ ಕಾಲಿಟ್ಟ ಇಸ್ಕಾನ್ ಸಂಸ್ಥೆ, ಕೃಷ್ಣನ ಹೆಸರನ್ನು ಬಂಡವಾಳ ಮಾಡಿಕೊಂಡು ಅಕ್ರಮ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮುಳುಗಿದೆ.

ಕೃಷ್ಣನ ಆರಾಧಾಕರಾದ ಇವರು ಧರ್ಮದ ಎಲ್ಲ ಎಲ್ಲೆಗಳನ್ನು ಹೊಸಕಿ ಹಾಕಿ ಗರ್ಭಗುಡಿಯಲ್ಲಿ ಕಷ್ಣನ ಬದಲು ಇಸ್ಕಾನ್‌ನ ರಿಯಲ್ ಎಸ್ಟೇಟ್ ದೊರೆಗಳು ಪ್ರತಿಷ್ಠಾನೆಯಾಗಿದ್ದಾರೆ. ಇವರ ಈ ಭಯಾನಕ ಕರ್ಮಕಾಂಡವನ್ನು ಕಣ್ಣಾರೆ ಕಂಡು ಪಾವನ ಆಗಬೇಕಿದ್ದವರು ಕನಕಪುರ ರಸ್ತೆಯ ದೊಡ್ಡಕನ್ನಸಂದ್ರದ ಗುಬ್ಬಲಾಳ ರಸ್ತೆಯಲ್ಲಿ ಸುಂದರವಾದ ಸಿಂಗಾಪುರ್ ಲೇಔಟ್ ಇದೆ. ಇಲ್ಲಿನ ಯಾವುದಾದರೊಂದು ಮನೆಯ ಮಹಡಿ ಮೇಲೆ ನಿಂತು ನೋಡಿದರೆ ಅದರ ದರ್ಶನ ಪ್ರಾಪ್ತಿಯಾಗುತ್ತದೆ. ಕೇವಲ ನೋಡಿದರಷ್ಟೇ ಅದರ ಪಾಪಕೃತ್ಯ ಅರ್ಥವಾಗುವುದಿಲ್ಲ ಅದನ್ನೊಮ್ಮೆ ಒಳಹೊಕ್ಕು ನೋಡಬೇಕು.

ಇಲ್ಲಿ 12 ಬೃಹತ್ ರೆಸಿಡೆನ್ಸಿಯಲ್ ಅಪಾರ್ಟ್‌ಮೆಂಟ್‌ಗಳು, ಒಂದು ಕ್ಲಬ್ ಹೌಸ್, ಒಂದು ಬೃಹತ್ ಮಾಲ್ ನಿರ್ಮಾಣವಾಗುತ್ತಿವೆ. ಘಂಟೆ ನಾದ ಕೇಳಬೇಕಾದ ಜಾಗದಲ್ಲಿ ಎದೆ ಝಲ್ ಎನಿಸುವ ಭಯಾನಕ ಡಿಗ್ಗಿಂಗ್ ಶಬ್ದ ಎಂತಹವರಿಗೂ ದಿಗಿಲು ಹುಟ್ಟಿಸುತ್ತೆ, ಚಳಿಗಾಲದಲ್ಲಿ ಸೋನೆ ಮಳೆ ಸುರಿದಂತೆ ಸಿಮೆಂಟ್ ಧೂಳು ಪಕ್ಕದ ಸಿಂಗಾಪುರ್ ಲೇಔಟ್ ಮನೆಗಳ ಮೇಲೆ ಸಿಂಚನವಾಗುತ್ತದೆ. ಆಕಾಶದಲ್ಲಿ ಹಾರಾಡುತ್ತಿರುವ ಕ್ರೇನ್‌ಗಳು ತಲೆಯ ಮೇಲೆ ಬಿದ್ದಂತೆಯೇ ಭಾಸವಾಗುತ್ತೆ. ಡಿಗ್ಗಿಂಗ್‌ನ ಕಾರಣಕ್ಕಾಗಿ ಲೇಔಟ್‌ನ ಬಹುತೇಕ ಮನೆಗಳು ಬಿರುಕು ಬಿಟ್ಟಿವೆ. ಇಲ್ಲಿನ ಕಾಂಪೌಂಡ್ ಇಂದೋ ನಾಳೆಯೋ ಕುಸಿದು ಬೀಳುವ ಅಪಾಯದಲ್ಲಿದೆ. ಈ ಬೃಹತ್ ಕಟ್ಟಡ ನಿರ್ಮಾಣಕ್ಕಾಗಿ ಸಾವಿರಾರು ಮರಗಳನ್ನು ಬಲಿ ತೆಗೆದುಕೊಳ್ಳಲಾಗಿದೆ. ಜನ-



ಜಾನುವಾರುಗಳಿಗೆ, ಪ್ರಾಣಿ-ಪಕ್ಷಿ ಸಂಕುಲದ ದಾಹ ತಣಿಸುತ್ತಿದ್ದ ವೆಂಕಟರಾಯನ ಕೆರೆ ಹುಡುಕಾಡಿದರೂ ಸಿಗುವುದಿಲ್ಲ. ಕೆರೆಯಿಂದ ಕೆರೆಗೆ ಹಾದು ಹೋಗುವ 33 ಅಡಿಯ ರಾಜಕಾಲುವೆಯೂ ಮಂಗಮಾಯ! ಇವೆರೆಡು ಕಂದಾಯ ಇಲಾಖೆಯ ನಕ್ಷೆಯಲ್ಲಿ ಮಾತ್ರ ಸಿಗುತ್ತವೆ!

ಇಸ್ಕಾನ್ ದಗಲುಬಾಜಿತನ ಶುರುವಾಗಿದ್ದು ಹೀಗೆ

1972ರಲ್ಲಿ ಮೈಸೂರ್ ಇಂಡಸ್ಟ್ರೀಯಲ್ ಡೆವಲೆಪ್‌ಮೆಂಟ್ ಬೋರ್ಡ್ ಸರ್ವೆ ನಂಬರ್ 55 ರಿಂದ 60 ರ 40 ಎಕರೆ ಜಮೀನನ್ನು ಅಂದು ರೈತ-ರಿಂದ ಖರೀದಿಸಿತ್ತು. ಈ ಜಮೀನನ್ನು 1976ರಲ್ಲಿ ಶ್ರೀಶೈಲ ಕೋ ಆಪರೇಟೀವ್ ಇಂಡಸ್ಟ್ರೀಸ್ ಕಂಪನಿಗೆ ಕೈಗಾರಿಕೆಗಳನ್ನು ತೆರೆಯಲು ಪ್ರತಿ ಚದರ ಅಡಿಗೆ 2.11 ಪೈಸೆಯಂತೆ ಲೀಸ್‌ಗೆ ನೀಡಲಾಗುತ್ತೆ. ಅದರಂತೆ ಈ ಸಂಸ್ಥೆಯು ಈ ಜಾಗದಲ್ಲಿ ಶ್ರೀಶೈಲಾ ಕಂಪನಿಯೇ 18 ವಿವಿಧ ಹೆಸರುಗಳಲ್ಲಿ ಒಟ್ಟು ಜಾಗವನ್ನು ಪಡೆ-ಯುತ್ತದೆ. ಇಲ್ಲಿಂದೀಚೆಗೆ ಇಸ್ಕಾನ್‌ನ ಕರಾಮತ್ತು ಶುರುವಾಗುತ್ತದೆ. ಇಸ್ಕಾನ್ ತನ್ನ ಪ್ರಭಾವವನ್ನು ಬಳಸಿ ಕೆಐಎಡಿಬಿ 40 ಎಕರೆ ಭೂಮಿಯನ್ನು ಪುನಃ ಶ್ರೀಶೈಲಾದಿಂದ ವಶಕ್ಕೆ ಪಡೆಯುವಂತೆ ಮಾಡಿ ಆ ಜಮೀನನ್ನು ಕೆಐಎಡಿಬಿಯಿಂದ ಪ್ರತಿ ಚದರ ಅಡಿಗೆ ರೂ.600 ನಂತೆ ಒಟ್ಟು 2.65 ಕೋಟಿಗೆ ಲೀಸ್‌ಗೆ ಹಸ್ತಾಂತರ ಮಾಡಲಾಗುತ್ತದೆ. ನಂತರ ಸಾವಿರಾರು ಕೋಟಿ ಬೆಲೆ ಬಾಳುವ ಈ ಭೂಮಿಯನ್ನು, ಜತೆಗೆ ಮೂರ್‍ನಾಲ್ಕು ಎಕರೆ ಖರಾಬ್ ಜಮೀನನ್ನು ಸೇರಿಸಿ ಶಾಶ್ವತವಾಗಿ ಇಸ್ಕಾನ್‌ಗೆ ಮಾರಾಟ ಮಾಡುತ್ತದೆ. (ಇವತ್ತಿನ ಮಾರುಕಟ್ಟೆ ಬೆಲೆ ಚದರ ಅಡಿಗೆ 6 ಸಾವಿರ ರೂಪಾಯಿ!)

ಕೈಗಾರಿಕಾ ಉದ್ದೇಶಕ್ಕೆ ಮಾತ್ರವೇ ಬಳಕೆ ಮಾಡಬೇಕಾದ ಭೂಮಿಯನ್ನು ಎಲ್ಲ ಕಾನೂನು ಉಲ್ಲಂಘಿಸಿ ಇಸ್ಕಾನ್‌ಗೆ ಮಾರಾಟ ಮಾಡಿದ್ದಾದರೂ ಹೇಗೆ? ಮತ್ತು ಕಾನೂನಿನ ರೀತಿ ಈ ಜಮೀನನ್ನು ಲೀಸ್‌ಗೆ ನೀಡಬಹುದೇ ವಿನಃ ಮಾರಾಟ ಮಾಡುವ ಹಾಗಿಲ್ಲ. ನಂತರ ಇಸ್ಕಾನ್ ಇಲ್ಲಿ 2005ರಲ್ಲಿ ಅಕ್ಷಯ ಪಾತ್ರೆ ಆಹಾರ ಉತ್ಪಾದನಾ ಫ್ಯಾಕ್ಟರಿಯನ್ನು ಕೇವಲ ಅರ್ಧ ಎಕರೆ ಜಾಗದಲ್ಲಿ ತೆರೆಯುತ್ತದೆ. ಉಳಿದಂತೆ ಜಮೀನು ಖಾಲಿ ಉಳಿಸಲಾಗುತ್ತದೆ. ಈ ಮಧ್ಯೆ ಈ ಜಮೀನನ ಪಕ್ಕದಲ್ಲೇ ಕಂದಾಯ ಇಲಾಖೆಗೆ ಒಳಪಟ್ಟ ವಸಂತಪುರದ ಸರ್ವೆ ನಂ.36 ಮತ್ತು 37 ರ 27 ಎಕರೆ ಜಮೀನನ್ನು ದೇವಸ್ಥಾನ ಮತ್ತು ನಂದನವನ ನಿರ್ಮಿಸಲು ಜಿಲ್ಲಾಧಿಕಾರಿಗಳಿಂದ ಖರೀದಿಸುತ್ತದೆ. ಅಕ್ಷಯ ಪಾತ್ರೆ ಮತ್ತು ದೇವಸ್ಥಾನ ಕಟ್ಟುವುದರಿಂದಾಗಿ, ಇಲ್ಲಿನ ಸ್ಥಳೀಯರು ಇವರ ಅಂತರಂಗದ ರಾಕ್ಷಸತನವನ್ನು ಅರಿಯದೇ ದೇವರ ಕಾರ್ಯವಲ್ಲವೇ... ಎಂದು ಬೆಂಬಲಿಸುತ್ತಾರೆ. ಅದೇ ರೀತಿ ದೇವಸ್ಥಾನವನ್ನೂ ನಿರ್ಮಿಸುತ್ತಾರೆ.

2003-2004 ರ ಮಧ್ಯೆ ಇಸ್ಕಾನ್ 65 ಎಕರೆ ಜಮೀನಿನಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಕೆಐಎಡಿಬಿಗೆ ಡಿಪಿಆರ್ (Detail project report) ಸಲ್ಲಿಸುತ್ತದೆ. ಕಂದಾಯ ಇಲಾಖೆಯಿಂದ ಖರೀದಿಸಿದ್ದ 27 ಎಕರೆ ಜಮೀನನ್ನು ಒಳಗೊಂಡು 65 ಎಕರೆಯಲ್ಲಿ 28 ಎಕರೆ ಗ್ರಾನೈಟ್ ಹಿಲ್‌ಲಾಕ್ ಕಂಪನಿಗೆ, ಥೀಮ್ ಪಾರ್ಕ್ ನಿರ್ಮಿಸಲು ಇಂಡಿಯಾ ಹೆರಿಟೇಜ್ 27 ಎಕರೆ, ಹಾಗೆಯೇ 20 ಎಕರೆ ಜಮೀನಿನಲ್ಲಿ 'Botanical Garden' – multi varity herbal, Aromatic and Botacal plant ನಿರ್ಮಾಣ ಮಾಡುವುದಾಗಿ ಡಿಪಿಆರ್‌ನಲ್ಲಿ ಹೇಳಲಾಗುತ್ತದೆ. ಇವರು ಕೊಟ್ಟ ಫೇಕ್ ಡಿಪಿಆರ್‌ಗೆ ನಮ್ಮ ಖದೀಮ ಕೆಐಎಡಿಬಿ ತಥಾಸ್ತು ಎನ್ನುತ್ತದೆ. ಕೈಗಾರಿಕೆ ಮಾಡುವ ಹೆಸರಲ್ಲಿ ಹಳ್ಳಕೊಳ್ಳಗಳಿಂದ ಕೂಡಿದ್ದ ಜಮೀನನ್ನು ಮಣ್ಣು ತುಂಬಿಸಿ ಮಟ್ಟ ಮಾಡಲಾಗುತ್ತದೆ.

ಇದಾದ ನಂತರ ಈ 65 ಎಕರೆ ಜಮೀನಿನ ಪಕ್ಕದಲ್ಲಿರುವ ಗೋಕುಲ ಅಪಾರ್ಟ್‌ಮೆಂಟ್ಸ್ (ಇದು ಇಸ್ಕಾನ್ ನಿರ್ಮಿಸಿದ್ದು) ನ್ನು ವಿಸ್ತರಿಸಲು ವಿವಿಧ ಇಲಾಖೆಗಳನ್ನು ಕೋರಲಾಗುತ್ತದೆ. ಇದ-ಕ್ಕೆ ಪರಿಸರ ಇಲಾಖೆ, ಬಿಡಿಎ, ಬಿಬಿಎಂಪಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬೆಸ್ಕಾಂ, ಅರಣ್ಯ ಇಲಾಖೆ ಎಲ್ಲರೂ ಒಪ್ಪಿಗೆ ನೀಡುತ್ತಾರೆ. ಅಂದರೆ ವಿಸ್ತರಿಸುವ ಅವರ ಯೋಜನೆಗೆ ಭೂಮಿ ಯಾವುದು? ಇದರಿಂದ ಪರಿಸರಕ್ಕೆ ಹಾನಿಯಾಗಬಹುದೇ? ಅಪಾರ್ಟ್‌ಮೆಂಟ್ ನಿರ್ಮಾಣದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಪಾಲಿಸಿದೆಯೇ? ಎಂಬುದನ್ನು ಈ ಇಲಾಖೆಗಳು ನೋಡಬೇಕಲ್ಲವೇ? ಹೌದು ಎಲ್ಲರೂ ನೋಡಿದ್ದಾರೆ. ಹಸಿದ ನಾಯಿ ಅನ್ನ ನೋಡಿ ಜೊಲ್ಲು ಸುರಿಸುವಂತೆ ಹಲ್ಲು ಕಿರಿಯುತ್ತಿದ್ದ ಅಧಿಕಾರಿಗಳಿಗೆ ಎಂಜಲು ಬಿಸ್ಕೆಟ್ ಬಿಸಾಕಿದ ಇಸ್ಕಾನ್, ಅಧಿಕಾರಿಗಳು ಬಾಲ ಮುದುರಿ ಇರುವಂತೆ ಮಾಡಿತು.

ಕುತೂಹಲದ ವಿಷಯವೆಂದರೆ ಗೋಕುಲ ಅಪಾರ್ಟ್‌ಮೆಂಟ್ ವಿಸ್ತರಣೆಗೆ ಬೇಕಾದ ಎಲ್ಲ ವ್ಯವಹಾರಗಳನ್ನು ನಡೆಸಿದ್ದು ಇಸ್ಕಾನ್ ಸಂಸ್ಥೆ ಹೆಸರಿನಲ್ಲಿ. ಆದರೆ ಅಪಾರ್ಟ್‌ಮೆಂಟ್ ಶುರು ಮಾಡಿದ್ದು ಮಂತ್ರಿ ಡೆವಲಪರ್ಸ್!!! ಹೇಗಿದೆ ನೋಡಿ ಇವರ ಕರಾಮತ್ತು... ಅಂದರೆ ಇಷ್ಟೂ ಬೆಳವಣಿಗೆಗಳ ಹಿಂದೆ ಮೊದಲಿನಿಂದಲೂ ಮಂತ್ರಿಯ ಕೈಚಳಕ ಇತ್ತು. ಆದರೆ ಅದು ತೆರೆಯ ಹಿಂದೆ ನಿಂತು ಈ ಕೆಲಸಗಳನ್ನು ನಿಭಾಯಿಸುತ್ತಿತ್ತು ಎಂಬುದು ಇಲ್ಲಿ ಸ್ಪಷ್ಟ.

ತ್ರಿವಳಿ ದುಷ್ಟಕೂಟದ ಅಕ್ರಮ ಸಂತಾನ

ಕಾರ್ಪೊರೇಟ್ಸ್, ರಾಜಕಾರಣಿಗಳು ಮತ್ತು ಅಧಿಕಾರಶಾಹಿ, ಈ ತ್ರಿವಳಿಕೂಟದ ಅಕ್ರಮ ಸಂತಾನಗಳೇ ಸದ್ಯ ಈಗ 40 ಎಕರೆ ಜಮೀನಿನಲ್ಲಿ ತಲೆ ಎತ್ತುತ್ತಿರುವ ಹನ್ನೆರೆಡು ಬೃಹತ್ ಅಪಾರ್ಟ್‌ಮೆಂಟ್

ಪುಟ 10 ಕ್ಕೆ

ಹವಾಮಾನ ವೈಪರಿತ್ಯವು ಹವಾಮಾನ ಬದಲಾವಣೆಯ ಮುನ್ಸೂಚನೆ – ಡಾ|| ಮಧುರಾ ಸ್ವಾಮಿನಾಥನ್

ರೈತರಿಗೂ ಪರಿಸರಕ್ಕೂ ಇರುವ ನಂಟು ಅತ್ಯಂತ ಹಳೆಯದು. ಆದ್ದರಿಂದ ರೈತ ಸಂಘ ಪರಿಸರ ದಿನಾಚರಣೆ ಮಾಡುವುದು ಅಸ್ವಾಭಾವಿಕವೇನೂ ಅಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ವಿಶೇಷವೇ. ಪರಿಸರ ದಿನಾಚರಣೆ ಬರಿಯ 'ಒಂದು ಗಿಡ ನೆಟ್ಟು ಫೋಟೋ ತೆಗೆಸಿಕೊಳ್ಳುವ' ಸೋಗಿನ ಅರ್ಥಹೀನ ಸರಕಾರಿ ಸಮಾರಂಭಗಳಲ್ಲಿ ಕಳೆದು ಹೋಗಿರುವುದೇ ಇದಕ್ಕೆ ಕಾರಣ. ಹವಾಮಾನ ಬದಲಾವಣೆ, ಪರಿಸರ ಕಾಳಜಿ ಸಹ ಕೆಲವು ಪರಿಣತರು ಹಾಗೂ ಎನ್.ಜಿ.ಒ.ಗಳಿಗೆ ಸಂಬಂಧಪಟ್ಟಿದ್ದು ಎಂದು ಪ್ರಚಲಿತವಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘ ವಿಶ್ವ ಪರಿಸರ ದಿನಾಚರಣೆ ಆಚರಣೆಯ ಭಾಗವಾಗಿ 'ಹವಾಮಾನ ವೈಪರಿತ್ಯ – ಕಾರಣಗಳು, ಪರಿಹಾರಗಳು' ಎಂಬ ವಿಚಾರ ಸಂಕಿರಣ ನಡೆಸಿದ್ದು ವಿಶೇಷವಾಗಿತ್ತು. ಈ ವಿಚಾರ ಸಂಕಿರಣದ ಬಗ್ಗೆ ಟಿ. ಯಶವಂತ ಅವರಿಂದ ಒಂದು ವರದಿ.



ಭವಿಷ್ಯದಲ್ಲಿ ಸಂಭವಿಸಬಹುದಾದ ಹವಾಮಾನ ಬದಲಾವಣೆಯ ಮುನ್ಸೂಚನೆಗಳನ್ನು ಈಗ ನಡೆಯುತ್ತಿರುವ ಹವಾಮಾನ ವೈಪರಿತ್ಯದ ಅಧ್ಯಯನಗಳಿಂದ ತಿಳಿಯಬಹುದು. ಸರಾಸರಿ ಉಷ್ಣಾಂಶ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶಗಳು, ಮಳೆ ಬೀಳುವಿಕೆ, ಮಳೆ ಆಗುವ ವಿಧಾನ, ಮಳೆ ಬೀಳುವ ದಿನಗಳು ಮುಂತಾದ ಎಲ್ಲಾ ಅಂಶಗಳು ಕೃಷಿ ಉತ್ಪಾದನೆ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಹಾಗಾಗಿ ಈ ಬಗ್ಗೆ ಸೂಕ್ತ ಮುತುವರ್ಜಿ ಅನಿವಾರ್ಯ ಎಂದು ಕೃಷಿ ಅರ್ಥಶಾಸ್ತ್ರಜ್ಞೆ ಡಾ|| ಮಧುರ ಸ್ವಾಮಿನಾಥನ್ ಪ್ರತಿಪಾದಿಸಿದರು.

ಅವರು ಕರ್ನಾಟಕ ಪ್ರಾಂತ ರೈತ ಸಂಘ (KPRS) ಜೂನ್ 15ರಂದು ಬೆಂಗಳೂರಿನ ಶಾಸಕರ ಭವನದ ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ 'ಹವಾಮಾನ ವೈಪರಿತ್ಯ – ಕಾರಣಗಳು, ಪರಿಹಾರಗಳು' ಕುರಿತು ಮಾತನಾಡುತ್ತಿದ್ದರು.

ಮುಂದುವರೆದು ಅವರು, ಹವಾಮಾನ ಬದಲಾವಣೆ ಮತ್ತು ಹವಾಮಾನ ವೈಪರಿತ್ಯ ಎರಡೂ ಒಂದೇ ಅಲ್ಲ. ಜಾಗತಿಕ ತಾಪಮಾನ ಈಗಾಗಲೇ ಆರಂಭಗೊಂಡಿರುವ ವಿದ್ಯಮಾನವಾಗಿದ್ದು, ಮಳೆ ಬೀಳುವಿಕೆ, ಗಾಳಿ, ತೀವ್ರ ವಾತವರಣದ ಸ್ಥಿತಿ, ಮೋಡ ಕಟ್ಟುವ ದಿನಗಳು ಇನ್ನಿತರ ಎಲ್ಲಾ ಅಂಶಗಳನ್ನು ಪ್ರಭಾವಿಸುತ್ತಿದೆ. ಈಗ ಇದರ ಗತಿ ನಿಧಾನವಾಗಿದ್ದರೂ, ನಂತರದ ದಿನಗಳಲ್ಲಿ ವೇಗ ಪಡೆದುಕೊಳ್ಳಲಿದೆ ಎಂದು ಆತಂಕ ವ್ಯಕ್ತ ಪಡಿಸಿದರು.

ಭಾರತದಲ್ಲಿ ಸರಾಸರಿ ವಾರ್ಷಿಕ ಉಷ್ಣಾಂಶ 1850 ರಲ್ಲಿ ಇದ್ದುದಕ್ಕಿಂತ 2010 ರಲ್ಲಿ 0.6–0.8 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಳವಾಗಿದ್ದು, ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶಗಳೆರಡರಲ್ಲೂ ಏರಿಕೆ ದಾಖಲಿಸಿದೆ. ಚಳಿಗಾಲದಲ್ಲಿನ ಉಷ್ಣಾಂಶ ಏರಿಕೆ, ಇದೇ ಅವಧಿಯ ಸರಾಸರಿ ಏರಿಕೆಗಿಂತ ಹೆಚ್ಚಿದೆ ಎಂಬುದು ಗಮನಾರ್ಹ ಎಂದು ತಿಳಿಸಿದರು.

ಪ್ರಯೋಗಾಲಯದಲ್ಲಿ ಬೆಳೆದು ಪಡೆದ ಇಳುವರಿಗೂ ಜಮೀನಿನಲ್ಲಿ ಬೆಳೆದು ಪಡೆದ ಇಳುವರಿಗೂ ಇರುವ ಇಳುವರಿ ಅಂತರ ಹೆಚ್ಚುತ್ತಿರುವುದು ಕರ್ನಾಟಕದ ಕೃಷಿ ರಂಗದ ಮೇಲಿನ ಹವಾಮಾನ ವೈಪರೀತ್ಯದಿಂದಾಗುವ ಪರಿಣಾಮಕ್ಕೆ ಉದಾಹರಣೆ ಎಂದ ಅವರು, ಇದು ಮಳೆಯಾಶ್ರಿತ ಪ್ರದೇಶಗಳಲ್ಲಿ ಈ ಅಂತರ ಮತ್ತಷ್ಟು ಹೆಚ್ಚು ಇದೆ ಎಂದು ವಿವರಿಸಿದರು.

1970ರಲ್ಲಿ ಎಣ್ಣೆಬೀಜ, ದ್ವಿದಳಧಾನ್ಯಗಳ ಇಳುವರಿ ಎಷ್ಟು ಇತ್ತೋ, ಸರಿಸುಮಾರು ಅಷ್ಟೇ ಇಳುವರಿ 2010 ರಲ್ಲೂ ಕೂಡ ಹಾಗೇ ಮುಂದುವರೆದಿದೆ. ಈ ವಿದ್ಯಾಮಾನಕ್ಕೆ ಹವಾಮಾನ ಬದಲಾವಣೆ ಅಲ್ಲದೇ ಬೇರೆ ಕಾರಣಗಳು ಇವೆ. ಅದನ್ನು ಪತ್ತೆ ಮಾಡಬೇಕು ಎಂದು ತಿಳಿಸಿದರು.

ಹವಾಮಾನದ ವೈಪರಿತ್ಯದಿಂದ ಉಂಟಾಗುತ್ತಿರುವ ಬೆಳವಣಿಗೆಗಳ ಪರಿಣಾಮವು ಈಗಾಗಲೇ ಇರುವ ಗ್ರಾಮೀಣ ಅಸಮಾನತೆಯನ್ನು ಮತ್ತಷ್ಟು ಹೆಚ್ಚು ಮಾಡುತ್ತಿದೆ. ವಾತಾವರಣದಲ್ಲಿ ಉಷ್ಣಾಂಶ ಏರಿಕೆ ಕಂಡ ವರ್ಷಗಳಲ್ಲಿ ಬೆಳೆಗಳ ಸರಾಸರಿ ಇಳುವರಿ ಕಡಿಮೆ ಆಗುತ್ತಿರುವುದನ್ನು ಬಾಂಬೆಯ ಸಮಾಜ ವಿಜ್ಞಾನದ ಟಾಟಾ ಅಧ್ಯಯನ ಸಂಸ್ಥೆಯ ಟಿ. ಜಯರಾಮನ್ ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ ಎಂದು ಅವರು ವಿವರಿಸಿದರು. ಹವಾಮಾನದ ವೈಪರಿತ್ಯದಿಂದ ಉಂಟಾಗುತ್ತಿರುವ ಬೆಳವಣಿಗೆಗಳ ಪರಿಣಾಮ ರೈತರ ಮೂರು ಪ್ರಮುಖ ವಿಭಾಗ (ಶ್ರೀಮಂತ, ಮಧ್ಯಮ, ಬಡ) ಗಳ ಮೇಲೆ ಸಮಾನ ಪರಿಣಾಮ ಬೀರುವುದಿಲ್ಲ. ತಮ್ಮ ಅಧ್ಯಯನದ ಪ್ರಕಾರ ಮಧ್ಯಮ, ಬಡ ರೈತರ ಬೆಳೆಗಳಿಗೆ ಮಾಡುವ ಖರ್ಚು ಶ್ರೀಮಂತ ರೈತರ ಎರಡು ಪಟ್ಟು ಇರುತ್ತದೆ ಎಂದು ಅವರು ಉದಾಹರಣೆ ಸಹಿತ ವಿವರಿಸಿದರು.

ಸರಾಸರಿ ಮಳೆ (ವಾರ್ಷಿಕ)ಯಲ್ಲಿ 1900 ರಿಂದ ಇಲ್ಲಿಯವರೆಗೂ ಅಂತಹ ವ್ಯತ್ಯಾಸ ಏನೂ ಆಗದೇ ಇದ್ದರೂ, ಮಳೆ ಬೀಳುವ ದಿನಗಳು, ಮಳೆಯ ಪ್ರಮಾಣದ ಅವಧಿ ಮತ್ತು ತೀವ್ರತೆಯಲ್ಲಿ ವ್ಯತ್ಯಾಸಗಳು ಕಂಡು ಬಂದಿದೆ. ಇದು ಕೃಷಿ ರಂಗದ ಮೇಲೆ ಪರಿಣಾಮ ಬೀರುತ್ತಿದೆ. ಈ ರೀತಿ ಮಳೆ ಆಗುವಿಕೆಯ ವ್ಯತ್ಯಾಸಗಳಿಗೆ ಜಾಗತಿಕ ತಾಪಮಾನದ ಕೊಡುಗೆ ಎಷ್ಟು ಎನ್ನುವುದನ್ನು ಪತ್ತೆ ಹಚ್ಚುವುದು ಕಷ್ಟಕರವಾಗಿದೆ ಎಂದರು.

ಹವಾಮಾನ ವೈಪರೀತ್ಯ ಹಾಗೂ ಬದಲಾವಣೆಯಿಂದ ಕೃಷಿಯ ಮೇಲೆ ಆಗುವ ಪರಿಣಾಮಗಳ ಬಗ್ಗೆ ಭಾರತ ಸರಕಾರದಿಂದ ಈ ವರೆಗೆ ಯಾವುದೇ ಅಧ್ಯಯನ ನಡೆದಿಲ್ಲ. ಬೆಂಗಳೂರಿನ ಎಫ್.ಎ.ಎಸ್. (ಕೃಷಿ ಅಧ್ಯಯನ ಫೌಂಡೇಶನ್) ಎಂಬ ಸಂಸ್ಥೆ ಈ ಕುರಿತು ದೇಶದ ವಿವಿಧ ಭಾಗಗಳ 22 ಹಳ್ಳಿಗಳಲ್ಲಿ ಅಧ್ಯಯನ ನಡೆಸಿದೆ ಎಂದೂ ಅವರು ಹೇಳಿದರು.

ಹವಾಮಾನ ಮಾಹಿತಿ ವ್ಯವಸ್ಥೆ ರೈತರಿಗೆ ಬಳಕೆಯಾಗಬೇಕು: ಡಾ. ಪ್ರಕಾಶ್

ಕರ್ನಾಟಕದ ಕೃಷಿ ರಂಗದ ಮೇಲಿನ ಹವಾಮಾನ ವೈಪರಿತ್ಯದ ಪರಿಣಾಮಗಳು ಕುರಿತು ಮಾತಾನಾಡಿದ ಅಂತರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಕುಲಸಚಿವ ಡಾ|| ವಿ.ಎಸ್. ಪ್ರಕಾಶ್ ಮಾತನಾಡಿ ಗಾಳಿವೇಗ, ದಿಕ್ಕು, ವಾತವರಣದ ತೇವಾಂಶಗಳಲ್ಲಿ ಬದಲಾವಣೆ ಕಂಡು ಬರುತ್ತಿದ್ದು, ಜೂನ್ ಮೊದಲನೆ ವಾರದಲ್ಲಿ ಬರಬೇಕಾದ ಮಳೆ ಮೂರನೆ ವಾರ ಆದರೂ ಇಡೀ ರಾಜ್ಯವನ್ನು ಆವರಿಸಿಕೊಂಡಿಲ್ಲ ಎಂದು ತಿಳಿಸಿದರು. ಇಡೀ ದೇಶದಲ್ಲಿ ಈ ಬಗೆಗಿನ ಅಧ್ಯಯನಕ್ಕೆ ಕರ್ನಾಟಕ ಮಾದರಿ ಆಗಿದ್ದು, ಪ್ರತಿ ಗ್ರಾ. ಪಂ. ಕೇಂದ್ರಗಳಲ್ಲೂ ಮಳೆಮಾಪನ ಕೇಂದ್ರಗಳನ್ನು ಸ್ಥಾಪಿಸಿದ್ದು ಪ್ರತಿ 15 ನಿಮಿಷಕ್ಕೆ ಒಮ್ಮೆ ಮಾಹಿತಿ ಪಡೆಯುವ ವಾತಾವರಣ ಮಾಹಿತಿ ಉಸ್ತುವಾರಿ ವ್ಯವಸ್ಥೆಯನ್ನು ಸಿದ್ದ ಪಡಿಸಲಾಗಿದೆ. ಹವಾಮಾನ ಮುನ್ಸೂಚನೆ ಅತ್ಯಂತ ಸಂಕೀರ್ಣ ವಿಜ್ಞಾನವಾಗಿದ್ದು ಅದನ್ನು ಅಭಿವೃದ್ಧಿ ಪಡೆಸುವುದು ಅಗತ್ಯ. ಅದರಿಂದ ಕೃಷಿಯ ಮೇಲೆ ಆಗುವ ಪರಿಣಾಮಗಳ ಬಗ್ಗೆ ವಿವರವಾದ ಅಧ್ಯಯನಗಳೂ ಅಗತ್ಯ. ಕೃಷಿಯ ಮೇಲೆ ಪರಿಣಾಮ ತಿಳಿಯಲು ಕೀಟಗಳ ಉಪಟಳ, ಜಲಾಶಯಗಳಲ್ಲಿ ಸಂಗ್ರಹ ಆಗುವ ನೀರು, ಭೂಗರ್ಭದಲ್ಲಿ ಶೇಖರವಾಗಿರುವ ನೀರು ಎಷ್ಟು ಎಂಬ ಬಗ್ಗೆ ನಿಖರವಾಗಿ ತಿಳಿಯುವಂತಹ ಮಾದರಿಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಹವಾಮಾನ ವೈಪರೀತ್ಯ ಮತ್ತು ಬದಲಾವಣೆ ಕೃಷಿಯ ಮೇಲೆ ಬೀರಲಿರುವ ಪರಿಣಾಮಗಳನ್ನು ವಿವರವಾಗಿ ಅಧ್ಯಯನ ಮಾಡುತ್ತಾ ಅವನ್ನು ಮುಂಗಾಣುವ ಮತ್ತು ಪರಿಹಾರಗಳನ್ನು ಹುಡುಕುವ ಅಗತ್ಯ ಇದೆ. ಇಂತಹ ವ್ಯವಸ್ಥೆ ಸಿದ್ದ ಪಡಿಸಿ ಈಗಿನ ಸ್ಥೂಲ ಮುನ್ಸೂಚನೆಯ ಬದಲು ಒಬ್ಬ ರೈತನ ಹೊಲದ ಮಟ್ಟದಲ್ಲಿ ಹವಾಮಾನ ಮುನ್ಸೂಚನೆ, ಯಾವಾಗ ಬೀಜ ಬಿತ್ತಬೇಕು, ಬೆಳೆಯ ಇಳುವರಿಯ ಸೂಚನೆ ಇತ್ಯಾದಿ ಬಗ್ಗೆ ಮುಂಗಾಣುವಂತೆ ವಾತಾವರಣ ಮಾಹಿತಿ ಉಸ್ತುವಾರಿ ವ್ಯವಸ್ಥೆಯನ್ನು ಬಳಸಿಕೊಳ್ಳಲು ಡಾ|| ಪ್ರಕಾಶ್ ಕರೆ ನೀಡಿದರು.

ಹವಾಮಾನ ಬದಲಾವಣೆಗೆ ಶ್ರೀಮಂತ ದೇಶಗಳೇ ಕಾರಣ: ಶ್ರೀರಾಮರೆಡ್ಡಿ

ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಹಾರದ ಕ್ರಮಗಳ ಕುರಿತು ಮಾತನಾಡಿದ ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ ರವರು ಜಗತ್ತಿನಲ್ಲಿ ಅತ್ಯಂತ ಮುಂದುವರಿದ ಬಂಡವಾಳಶಾಹಿ ದೇಶಗಳು ತಮ್ಮ ಕಾರ್ಪೋರೇಟ್ ದುರಾಸೆಗಾಗಿ ಹೆಚ್ಚು ಹೆಚ್ಚು ಮಾಲಿನ್ಯಕ್ಕೆ ಕಾಣಿಕೆ ನೀಡುತ್ತಿವೆ. ವಾತಾವರಣಕ್ಕೆ ಇಂಗಾಲ ಆಕ್ಸೈಡ್ ಮತ್ತು ಇತರ ಹಾನಿಕಾರಕ ರಾಸಾಯನಿಕಗಳನ್ನು ಸೇರ್ಪಡೆ ಮಾಡುವ ಅವರ ಅಭಿವೃದ್ಧಿ ಮಾದರಿಯಿಂದಾಗಿ ಇಡೀ ಮನುಕುಲ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳು ಹೆಚ್ಚು ಹೆಚ್ಚು ಸಂಕಷ್ಟಕ್ಕೆ ಈಡಾಗುತ್ತಿವೆ. ಹವಾಮಾನ ಬದಲಾವಣೆ ಮುಂತಾದ ಈಗಿನ ಪರಿಸರ ಸಮಸ್ಯೆಗಳ ಮುಖ್ಯ ಕಾರಣ ಈ ಅಭಿವೃದ್ಧ ದೇಶಗಳೇ. ಆದರೆ ರಿಯೋ ಶೃಂಗಸಭೆಯಿಂದ ಆರಂಭಿಸಿ ಇತ್ತೀಚಿನ ಪ್ಯಾರಿಸ್ ಹವಾಮಾನದ ಜಾಗತಿಕ ಸಮಾವೇಶಗಳಲ್ಲಿ ಶ್ರೀಮಂತ ರಾಷ್ಟ್ರಗಳು ತಮಗೆ ಅನುಕೂಲ ಆಗುವ ನಿರ್ಣಯವನ್ನು ಅಂಗೀಕರಿಸಿಕೊಳ್ಳುತ್ತಿವೆ. ಅವನ್ನೂ ಪಾಲಿಸುತ್ತಿಲ್ಲ. ಈ ಸಮಸ್ಯೆಗಳನ್ನು ಸೃಷ್ಟಿಸಿರುವ ಶ್ರೀಮಂತ ದೇಶಗಳು ಇವುಗಳ ಪರಿಹಾರಕ್ಕೆ ಬಡದೇಶಗಳಿಗೆ ಧನ ಸಹಾಯ, ತಂತ್ರಜ್ಞಾನ ಸಹಕಾರ ಮೂಲಕ ಸಹಾಯ ನೀಡಬೇಕು ಎಂಬ ನೀತಿಯನ್ನು ಸಡಿಲಗೊಳಿಸಿ ಇಲ್ಲವಾಗಿಸಿವೆ. ಪರಿಸರ ಸಮಸ್ಯೆಯ ಹಿಂದಿರುವ ಈ ರಾಜಕೀಯವನ್ನು ರೈತರು ಅರ್ಥ ಮಾಡಿಕೊಳ್ಳಬೇಕು. ಇತ್ತೀಚಿನ ಪ್ಯಾರೀಸ್ ಒಪ್ಪಂದ ಇವುಗಳಲ್ಲಿ ಅತ್ಯಂತ ಕೆಟ್ಟ ಒಪ್ಪಂದ. ಇದನ್ನೇ ದೊಡ್ಡ ವಿಜಯ ಎಂದು ಬಿಂಬಿಸಲು ಪ್ರಯತ್ನಿಸುತ್ತಿರುವ ಮೋದಿ ಸರ್ಕಾರದ ಪ್ರಚಾರವನ್ನು ಅವರು ಟೀಕಿಸಿದರು.

ವೈಜ್ಞಾನಿಕ ಸಾರ್ವಜನಿಕ ಬೆಳೆ ವಿಮೆ ವ್ಯವಸ್ಥೆ ಬೇಕು: ಮಾನ್ವಡೆ

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆರವರು, ಹವಾಮಾನ ವೈಪರಿತ್ಯದ ಅಂಶಗಳನ್ನು ರೈತರನ್ನು ರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳಿಗೆ ಉಪಯೋಗಿಸಬೇಕಾದ ಕೇಂದ್ರ ಸರ್ಕಾರ, ಬೆಳೆ ವಿಮೆಯ ವ್ಯವಹಾರದಲ್ಲಿ ತೊಡಗಿರುವ ಖಾಸಗಿ ವಿಮಾ ಕಂಪನಿಗಳ ತಿಜೋರಿ ತುಂಬಿಸಲು ಬಳಸುತ್ತಿದೆ. ರೈತರಿಗೆ ನೀಡುತ್ತಿದ್ದ ಅನುದಾನವನ್ನು ಬೆಳೆ ವಿಮೆ ಹೆಸರಿನಲ್ಲಿ ವಿದೇಶಿ ವಿಮಾ ಕಂಪನಿಗಳಿಗೆ ನೀಡುತ್ತಾ, ರೈತರ ಕಲ್ಯಾಣ ಮಾಡುತ್ತಿದ್ದೇವೆ ಎಂದು ವಂಚನೆ ಮಾಡುತ್ತಿದೆ ಎಂದು ಆಪಾದಿಸಿದರು. ಅತಿವೃಷ್ಟಿ ಅನಾವೃಷ್ಟಿಗಳಿಂದ ರೈತರನ್ನು ರಕ್ಷಿಸಲು ಹವಾಮಾನ ಮುನ್ಸೂಚನೆ ವ್ಯವಸ್ಥೆಯ ಮೂಲಸೌಕರ್ಯವನ್ನು ಸಿದ್ದಪಡಿಸಿ, ಪರಿಣಾಮಕಾರಿಯಾಗಿ ಬಳಸಬೇಕು. ಅದು ಘಟಿಸಿದಾಗ ವೈಜ್ಞಾನಿಕವಾದ ಪರಿಹಾರ ಕೊಡುವ ವಿಮೆ ವ್ಯವಸ್ಥೆ ಆಗಬೇಕು. ಇದು ಈಗ ಇರುವಂತೆ ಕಳೆದ 5 ವರ್ಷಗಳ ಬೆಳೆಯ ಇಳುವರಿಯ ಬೆಲೆ ಕನಿಷ್ಠ ಪ್ರಮಾಣ ಅಲ್ಲ. ಹಿಂದಿನ 5 ವರ್ಷಗಳ ಸರಾಸರಿ ಮತ್ತು ಕನಿಷ್ಠ ಆದಾಯದ ಮೇಲೆ ಆಧಾರಿತವಾಗಿರಬೇಕು. ಇದಕ್ಕೆ ಖಾಸಗಿ ವಿಮಾ ಕಂಪನಿಗಳಿಗೆ ಬದಲು, ಸಾರ್ವಜನಿಕ ಒಡೆತನದ ವಿಮಾ ಕಂಪನಿ ಸ್ಥಾಪಿಸಬೇಕೆಂದು ಒತ್ತಾಯಿಸಲು ರೈತರು ಚಳುವಳಿ ಹೂಡಬೇಕೆಂದು ಅವರು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ಮಾತನಾಡಿದರು. ವೇದಿಕೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರುಗಳಾದ ಜಿ.ಸಿ. ಬಯ್ಯಾರೆಡ್ಡಿ, ವೆಂಕಟಾಚಲಯ್ಯ ಉಪಸ್ಥಿತರಿದ್ದರು.



ಭಾಷೆಗಳಲ್ಲಿ ಜಗತ್ತನ್ನು ನೋಡುವ ಅದ್ಭುತ ದೃಷ್ಟಿಕೋನವಿದೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ಸಹಯಾನ ಸಹಯೋಗದಲ್ಲಿ ಜೂನ್ 13ರಂದು 'ಬುಡಕಟ್ಟು ಅಭಿವೃದ್ಧಿ, ಭಾಷೆ ಮತ್ತು ಪ್ರಾದೇಶಿಕ ನೆಲೆಗಳ ಅಂತರ್ ಸಂಬಂಧಗಳು' ಕುರಿತು ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಅಂತಾರಾಷ್ಟ್ರೀಯ ಭಾಷಾ ವಿದ್ವಾಂಸರು, ಭಾಷಾ ಸಂಶೋಧನೆ ಮತ್ತು ಪ್ರಕಾಶನ ಕೇಂದ್ರ ಸಂಸ್ಥಾಪಕ ನಿರ್ದೇಶಕರು ಆದ ಪದ್ಮಶ್ರೀ ಡಾ.ಗಣೇಶ್ ಎನ್.ದೇವಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಡಾ.ಗಣೇಶ್ ಎನ್.ದೇವಿರವರು ಮಾತನಾಡಿ "ಆದಿವಾಸಿ–ಬುಡಕಟ್ಟು ಹೆಸರಿನ ಹಿಂದೆ ದೊಡ್ಡ ವೇದನಾದಾಯಕ ಇತಿಹಾಸ ಇದೆ. ಅವರ ಭಾಷೆ ಒಂದು ಪದ ಗುಚ್ಛವಲ್ಲ, ಅದರ ಹಿಂದೆ ಜಗತ್ತಿನ ಮೌಲ್ಯ ಅಡಗಿದೆ. ಆದಿವಾಸಿಗಳ ಭಾಷೆಗಳಲ್ಲಿ ಜಗತ್ತನ್ನು ನೋಡುವ ಅದ್ಭುತ ದೃಷ್ಟಿಕೋನವಿದೆ. ಆದಿವಾಸಿ ಬುಡಕಟ್ಟುಗಳ ಬದುಕು, ಭಾಷೆ, ಸಂಸ್ಕೃತಿ ಉಳಿವಿಗಾಗಿ ಎಲ್ಲರೂ ಪ್ರಯತ್ನ ಮಾಡಬೇಕಿದೆ. ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ತಂದಾಗ ನಮ್ಮ ದೇಶದಲ್ಲಿ ಕೇವಲ 14 ಭಾಷೆಗಳಿಗಷ್ಟೇ ಮಾನ್ಯತೆ ದೊರೆತಿದ್ದು, ಉಳಿದ 748 ಭಾಷೆಗಳು ಇನ್ನು ಅತಂತ್ರವಾಗಿ ಉಳಿದಿದೆ. ಇದರಲ್ಲಿ ಬುಡಕಟ್ಟುಗಳ ಭಾಷೆಯೇ ಹೆಚ್ಚಿದ್ದು, ಇದಕ್ಕೆ ರಕ್ಷಣೆಯೇ ಇಲ್ಲದಿರುವುದು ನೋವಿನ ಸಂಗತಿ ಎಂದರು.

ಪ್ರಗತಿಪರ ಚಿಂತಕರಾದ ಜಿ.ಎನ್.ನಾಗರಾಜ್ ವಿಷಯ ಮಂಡನೆ ಮಾಡಿ "ಭಾಷೆಯಲ್ಲಿ ಜ್ಞಾನದ ಸಂಪತ್ತಿದೆ. ಭೂಮಿಯ ಮೇಲಿನ ಚರಾಚರಗಳ ಸಂಬಂಧದ ತುಡಿತವಿದೆ. ಭಾಷೆಗಳ ಅನುಭವ, ಅನುಕಂಪ ಎಲ್ಲವೂ ದೊರೆಯಬೇಕಿದೆ. ಕೇವಲ ಮುಂದುವರಿದ ನಗರಗಳ ಭಾಷೆ ಮಾತನಾಡಬೇಕೆನ್ನುವುದು ಸರಿಯಲ್ಲ. ಪದ ಸಂಪತ್ತನ್ನು ಬಳಸಿ ಭಾಷೆ ಶ್ರೀಮಂತಗೊಂಡು ಬೆಳೆಯಬೇಕಿದೆ ಎಂದರು.

ರಾಜ್ಯ ಆದಿವಾಸಿ ಹಕ್ಕುಗಳ ಸಹ ಸಂಚಾಲಕರಾದ ಎಸ್.ವೈ.ಗುರುಶಾಂತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂವಾದಲ್ಲಿ ರಾಜ್ಯ ಸಹಸಂಚಾಲಕರಾದ ಕೃಷ್ಣಪ್ಪ ಕೊಂಚಾಡಿ, ಹಂಪಿ ಕನ್ನಡ ವಿ.ವಿ. ಡಾ.ಮಲ್ಲಿಕಾರ್ಜುನ ಮಾನ್ಪಡೆ, ಸಂಶೋಧನಾ ವಿದ್ಯಾರ್ಥಿ ಕೃಷ್ಣಮೂರ್ತಿ.ಕೆ.ವಿ., ಸ್ಥಳೀಯ ಜಾನಪದ ವಿಶ್ವವಿದ್ಯಾಲಯದ ಬಾಲಚಂದ್ರ ನಾಯ್ಕ, ಚಿಂತಕರಾದ ಡಾ.ಎಸ್.ಇಂದ್ರ ನಾಯನ್ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಯಾನ ಕಾರ್ಯದರ್ಶಿ ಡಾ.ವಿಠ್ಠಲ್ ಭಂಡಾರಿ ವಹಿಸಿದ್ದರು. ಸ್ವಾಗತವನ್ನು ಕವಿ ಹಾಗೂ ಸಾಮಾಜಿಕ ಕಾರ್ಯಕರ್ತೆ ಯಮುನಾ ಗಾಂವ್ಕರ್ ಮಾಡಿ, ಸಂಚಾಲಕ ಗಣೇಶ ವಂದನಾರ್ಪಣೆ ಮಾಡಿದರು. ●

ಇಸ್ಕಾನ್ ಭೂಹಗರಣ............. ಪುಟ 8 ರಿಂದ

ಕಟ್ಟಡಗಳು, ಕ್ಲಬ್‌ಹೌಸ್, ಮತ್ತು ಕಮರ್ಷಿಯಲ್ ಕಾಂಪ್ಲೆಕ್ಸ್. ಇಲ್ಲಿ ಯಾವುದೂ ನಿಯಮಾನುಸಾರ ಪಾಲನೆ ಆಗುತ್ತಿಲ್ಲ. ಅದರ ಕೆಲವು ಸ್ಯಾಂಪಲ್‌ಗಳು ಈ ರೀತಿ ಇವೆ. ಇಲ್ಲಿ 14 ಮಹಡಿವರೆಗೆ ಪರ್ಮಿಷನ್ ಪಡೆದು 24 ಮಹಡಿ ಕಟ್ಟುತ್ತಿದರೂ ಬಿಡಿಎ ಕಂಡೂ ಕಾಣದಂತೆ ಮೌನ ವಹಿಸಿದೆ. ಅಪಾರ್ಟ್‌ಮೆಂಟ್ ಸುತ್ತಲೂ ನಿಯಮಾನುಸಾರ 16 ಮೀಟರ್ ಸೆಟ್ ಬ್ಯಾಕ್ ಏರಿಯಾ ಬಿಡಬೇಕು, ಇದನ್ನೂ ಬಿಟ್ಟಿಲ್ಲ. ನಿರ್ಮಾಣ ಹಂತದಲ್ಲಿ ಧೂಳು ಬೀಳದಂತೆ ಮತ್ತು ಭದ್ರತೆ ದೃಷ್ಟಿಯಿಂದ ತಾತ್ಕಾಲಿಕ ಪರದೆ ನಿರ್ಮಿಸಬೇಕು, ಊಹುಂ.. ಇದೂ ಕೂಡ ಇಲ್ಲ. ಅಷ್ಟಲ್ಲದೇ ಸಮಯ ಮೀರಿ ಕೆಲಸ ನಡೆಸುವುದು ಮಾಮೂಲು. ಬೆಂಗ್ಳೂರಲ್ಲೀಗ ಲೋಡ್‌ಶೆಡ್ಡಿಂಗ್ ಕಡ್ಡಾಯ. ಆದರೆ ಮಂತ್ರಿಯವರಿಗೆ ಮಾತ್ರ 24 ಗಂಟೆ ಕರೆಂಟ್ ಅದೂ ಉಚಿತವಾಗಿ!! ನೀರೂ ಕೂಡ ಇವರಿಗೆ ಉಚಿತ. 24 ಅಂತಸ್ತಿನ ಈ ಅಪಾರ್ಟ್‌ಮೆಂಟ್ ನಿರ್ಮಾಣ ಆಗುತ್ತಿರುವುದು ಭರ್ತಿ ಮಾಡಿದ ಮಣ್ಣಿನ ಮೇಲೆ. ಹೀಗಾಗಿ ಇದು ನಮ್ಮ ಇಡಬ್ಲ್ಯೂಎಸ್ ಕ್ವಾರ್ಟಸ್ ಕುಸಿದು ಬಿದ್ದಂತೆ ಬಿದ್ದರೆ ಆಶ್ಚರ್ಯಪಡಬೇಕಿಲ್ಲ.

ಸಿಂಗಾಪುರ್ ಬಡಾವಣೆ ನಿವಾಸಿಗಳ ನರಕ ಯಾತನೆ

ಮೇಲಿನ ಎಲ್ಲಾ ಅಕ್ರಮಗಳಿಗೆ ಮೂಕ ಸಾಕ್ಷಿಗಳಾಗಿ ನಿಂತಿರುವವರು ಮಂತ್ರಿ ಅಪಾರ್ಟ್‌ಮೆಂಟ್‌ಗೆ ಹೊಂದಿಕೊಂಡಂತ್ತಿರುವ ಸಿಂಗಾಪುರ್ ಲೇಔಟ್‌ನ ನಿವಾಸಿಗಳು. 1992ರಲ್ಲಿ ನಿರ್ಮಾಣಗೊಂಡ ಸಿಂಗಾಪುರ್ ಲೇಔಟ್‌ನಲ್ಲಿ ಬಹುತೇಕರು ನಿವೃತ್ತಿಯ ನಂತರದ ಜೀವನವನ್ನು ನೆಮ್ಮದಿಯಿಂದ ಕಳೆಯಲು ಬಂದವರು. ಹತ್ತು ವರ್ಷಗಳ ಹಿಂದೆ ಮನೆ ಕಟ್ಟಿ ವಾಸ ಮಾಡಲು ಬಂದಾಗ ಜೀವನ ಸ್ವರ್ಗದಂತಿತ್ತು ಎಂದು ಕೆಲ ಹಿರಿಯ ನಾಗರಿಕರು ನೆನಪಿಸಿಕೊಳ್ಳುತ್ತಾರೆ. ಲೇಔಟ್ ಎದುರು ವೆಂಕಟರಾಯನ ಕೆರೆ, ಸುತ್ತಲೂ ಮರ–ಗಿಡಗಳು, ಹಕ್ಕಿಗಳ ಕಲರವ, ಕಲ್ಮಶವಿಲ್ಲದ ಗಾಳಿ, ಇಂಥ ಉತ್ತಮ ವಾತಾವರಣದಲ್ಲಿ ಬದುಕುತ್ತಿದ್ದವರಿಗೆ ಮಂತ್ರಿ ಅಪಾರ್ಟ್‌ಮೆಂಟ್ ಶುರುವಾಗಿದ್ದೇ ತಡ ಬದುಕಿದ್ದಾಗಲೇ ನರಕ ನೋಡುವ ಸ್ಥಿತಿ ಬಂದೊದಗಿದೆ. ಇಲ್ಲಿನ ಧೂಳು, ಶಬ್ಧ ಮಾಲಿನ್ಯದಿಂದಾಗಿ ಅನೇಕರು ಕಾಯಿಲೆಗಳಿಗೆ ತುತ್ತಾಗಿದ್ದಾರೆ, ಬಹುತೇಕ ಎಲ್ಲರ ಮನೆಗಳು ಬಿರುಕು ಬಿಟ್ಟಿವೆ, ರಾತ್ರಿ ವೇಳೆ ಮಕ್ಕಳು ಬೆಚ್ಚಿ ಬೀಳುತ್ತವೆ ಎಂದು ನಾಗರಿಕರೊಬ್ಬರು ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ರಾಜಕಾಲುವೆಯನ್ನು ಒತ್ತುವರಿ ಮಾಡಿರುವುದರಿಂದ ಮಳೆ ಬಂದಲ್ಲಿ ತಮ್ಮ ಮನೆಗಳಿಗೆ ನೀರು ನುಗ್ಗುವುದೋ ಎಂಬ ಆತಂಕದಿಂದಲೇ ಬದುಕು ಸವೆಸುತ್ತಿದ್ದಾರೆ. ರಾಜಕಾಲುವೆ ಒತ್ತುವರಿ ಮಾಡಿದ್ದರಿಂದ ವೆಂಕಟರಾಯನ ಕೆರೆ ಬತ್ತಿ ಹೋಯಿತು. ಈ ಬತ್ತಿಹೋದ ಕೆರೆಯನ್ನು ಬಿಡಿಎ ಅಕ್ರಮವಾಗಿ ಲೇಔಟ್ ಮಾಡಿ ಸೈಟು ಹಂಚಿ ಜನ ಅಲ್ಲೀಗ ವಾಸಿಸುತ್ತಿದ್ದಾರೆ. ಮಂತ್ರಿ ಸಂಸ್ಥೆಯಿಂದ ರಾಜಕಾಲುವೆ ಒತ್ತುವರಿ ಆಗಿರುವ ಬಗ್ಗೆ ಕೋರ್ಟ್ ಮೆಟ್ಟಿಲೇರಿದಾಗ ನ್ಯಾಯಮೂರ್ತಿ ರಾಮ ಮನೋಹರ್ ರೆಡ್ಡಿಯವರು 'ರಾಜಕಾಲುವೆ ಮಾರ್ಗವನ್ನು ಬದಲಿಸಿ' ಎಂದು ತೀರ್ಪು ನೀಡುತ್ತಾರೆ!

ಇಲ್ಲಿನ ನಿವಾಸಿಗಳು ನಿವಾಸಿಗಳ ಸಂಘ ರಚಿಸಿಕೊಂಡು ತಮಗಾಗುತ್ತಿರುವ ಮತ್ತು ಸರ್ಕಾರಕ್ಕೆ ಮಾಡುತ್ತಿರುವ ಅನ್ಯಾಯದ ಕುರಿತು ದನಿ ಎತ್ತಿದ್ದಾರೆ, ಆದರೆ ಅದು ಅರಣ್ಯರೋದನವಾಗಿದೆ. ಅಧಿಕಾರಿಗಳ, ರಾಜಕಾರಣಿಗಳ ಮನೆ ಬಾಗಿಲುಗಳನ್ನು ಕಾದು ಕಾದು ಬರಿಗೈಲಿ ವಾಪಸ್ಸು ಬಂದಿದ್ದಾರೆ. ಬೆಂಗಳೂರಿನ ಪರಿಸರ, ಕೆರೆಗಳ ಬಗ್ಗೆ ದೊಡ್ಡ ಮಾತನಾಡುವ ರಾಜೀವ್ ಚಂದ್ರಶೇಖರ್‌ನ ಬೆಂಗಳೂರು ಫೌಂಡೇಶನ್‌ಗೂ ದೂರು ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ. ಸ್ಥಳೀಯ ಪೋಲೀಸರಂತೂ ಇವರನ್ನು ನೋಡಿ ಅಪಹಾಸ್ಯ ಮಾಡಿ ನಗುತ್ತಾರಂತೆ. ಈ ಅಕ್ರಮದ ವಿರುದ್ಧ ಸ್ವಲ್ಪ ಹೆಚ್ಚು ಮಾತನಾಡಿದರೆ ಅಂತಹವರಿಗೆ ಕಾಸಿನ ಆಸೆ ತೋರಿಸಿ ಸುಮ್ಮನಿರುಸುವುದು, ಅದಕ್ಕೂ ಬಗ್ಗದಿದ್ದಾಗ ಬೆದರಿಕೆ ಹಾಕುವುದು. ಶಾಸಕ ಕೃಷ್ಣಪ್ಪ ಕೂಡ ದುಷ್ಟಕೂಟದ ಪಾಲುದಾರನಾಗಿದ್ದು, ನೇರವಾಗಿ ಬೆದರಿಕೆ ಹಾಕಿದ್ದಾನೆ. ಇಲ್ಲಿನ ನಿವಾಸಿ ಸಂತೋಷ್ (ಹೆಸರು ಬದಲಾಗಿದೆ) ಎಂಬುವವರಿಗೆ ಇಲ್ಲಿಯವರೆಗೆ 9 ಸಾವಿರ ಬೆದರಿಕೆ ಕರೆಗಳು ಬಂದಿವೆ. ಇಸ್ಕಾನ್‌ನ ಅಕ್ರಮಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಶೋಧಿಸಿ ಹೊರ ತೆಗೆದಿದ್ದಾರೆ. ಈ ದಾಖಲೆಗಳಿಂದ ಅನೇಕ ಜನ ಶ್ರೀಮಂತರಾಗಿದ್ದಾರೆ ಎಂದು ತಮಾಷೆಯಾಗಿ ಹೇಳಿಕೊಳ್ಳುತ್ತಾರೆ. ಇದು ನಿಜವೂ ಹೌದು. ಕೆಲ ಪತ್ರಕರ್ತರೂ ಸೇರಿ ಇಸ್ಕಾನ್‌ನ ಅಕ್ರಮ ಸಂತಾನದ ಪಾಲುದಾರರೆ. ಬೆದರಿಕೆಗಳು ಈಗಲೂ ಇವೆಯಾದರೂ ತಮ್ಮ ಹೋರಾಟ ಮುಂದುರಿಸಿದ್ದಾರೆ.

ಕಾರ್ಪೊರೇಟ್ಸ್ ತಮ್ಮ ಲಾಭಕ್ಕಾಗಿ ಜನರ ಧಾರ್ಮಿಕ ಭಾವನೆಗಳನ್ನು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಸಿಗಲಾರದು. ಗುಡ್ಡದ ಮೇಲೆ ದೇವಸ್ಥಾನ ನಿರ್ಮಿಸಿ ಅಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ್ದಾರೆ. ಸತ್ಯವಾಗಿ ಅದು ಶ್ರೀಕೃಷ್ಣನನ್ನು ಆರಾದಿಸಲಿಕ್ಕಲ್ಲ ಬದಲಾಗಿ ತನ್ನ ದುಷ್ಟಕೂಟದ ಅಕ್ರಮಗಳಿಗೆ ಕಾವಲುಗಾರನೆಂಬಂತೆ ಬಳಸಿಕೊಳ್ಳಲಷ್ಟೆ.

ಅಕ್ರಮ ಗಣಿಗಾರಿಕೆಯ ಮೊದಲ ವರದಿಯನ್ನು ಕೊಡುವಾಗ ಗೌರವಾನ್ವಿತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ 'ಕೆಲವು ಗಣಿಗಾರಿಕಾ ಕಂಪನಿಗಳ ವಿರುದ್ಧ ಕ್ರಿಮಿನಲ್ ದಾವೆಗಳನ್ನು ಹೂಡುವುದನ್ನು ಬಿಟ್ಟರೆ ಬೇರೆ ಯಾವುದೇ ಸ್ಪಷ್ಟವಾದ ಕ್ರಮವನ್ನು ಸರ್ಕಾರ ಜರುಗಿಸಿಲ್ಲ ಎಂದು ಹೇಳಲು ಖೇದವಾಗುತ್ತದೆ. ಪರಿಣಾಮವಾಗಿ ವರದಿಯಲ್ಲಿ ಸ್ಪಷ್ಟಪಡಿಸಿರುವ ಅಕ್ರಮ ಗಣಿಗಾರಿಕೆ ಮುಂದುವರಿದಿದೆ. ವಾಸ್ತವವಾಗಿ ನಾನು ದಾಖಲೆ ಸಮೇತ ಸ್ಪಷ್ಟಪಡಿಸಿರುವಂತೆ, ನನ್ನ ಮೊದಲನೇಯ ವರದಿಯ ನಂತರ ಅಕ್ರಮ ಗಣಿಗಾರಿಕೆ ಇನ್ನಷ್ಟು ಹೆಚ್ಚಾಗಿದೆ ಎಂದೇ ಹೇಳಬೇಕು. ಈ ಅಕ್ರಮ ವಿದ್ಯಮಾನಗಳನ್ನು ತಡೆಯುವಲ್ಲಿ ಸಂಬಂಧಪಟ್ಟ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ' ಎಂದು ಅತ್ಯಂತ ನೋವಿನಿಂದ ಹೇಳಿದ್ದರು.

ಇಸ್ಕಾನ್‌ನ ಈ ದಗಲುಬಾಜಿತನಕ್ಕೆ ರಾಜಕಾರಣಿಗಳು, ಬಂಡವಾಳದಾರರು, ಅಧಿಕಾರಿಗಳು ಪೊಲೀಸು, ನ್ಯಾಯಾಲಯ ಜತೆಗೆ ಪತ್ರಕರ್ತರೂ ಕೈ ಜೋಡಿಸಿದರೆ ಅಕ್ರಮಗಳನ್ನು ತಡೆಯುವುದಾದರೂ ಹೇಗೆ? ನ್ಯಾಮೂರ್ತಿ ಸಂತೋಷ್ ಹೆಗ್ಡೆ ಇದ್ದಾಗ ಲೋಕಾಯುಕ್ತ ಸಂಸ್ಥೆ ಬಗ್ಗೆ ವಿಶ್ವಾಸ ಬಂದಿತ್ತು. ಇತ್ತೀಚಿಗೆ ಲೋಕಾಯುಕ್ತವೂ ಭ್ರಷ್ಟಾಚಾರದ ಕೆಸರು ಮೆತ್ತಿಸಿಕೊಂಡಿದೆ. ಸಾಮಾನ್ಯ ಜನ ಯಾರ ಬಳಿ ಹೋಗಬೇಕು? ●

ಸೆಪ್ಟೆಂಬರ್ 2 ಮುಷ್ಕರ ಯಶಸ್ವಿಗೊಳಿಸಿ...... ಪುಟ 6 ರಿಂದ


ಪ್ರಜಾಪ್ರಭುತ್ವ ಹಕ್ಕುಗಳು ಹಾಗೂ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ನಡೆಸುವ ಹೋರಾಟ ನಮ್ಮ ಮುಂದಿದೆ. 'ನೀತಿಗಳ ಬದಲಾವಣೆಗಾಗಿ ಎಲ್ಲಾ ವಿಭಾಗದ ಕಾರ್ಮಿಕರ ಐಕ್ಯ ಹೋರಾಟ' ಎಂಬ ಘೋಷಣೆಯನ್ನು ಸಾರ್ವತ್ರಿಕವಾಗಿ ಪ್ರಚಾರಗೊಳಿಸಿ, 'ಸಂಪತ್ತನ್ನು ಸೃಷ್ಟಿಸುವ ನಾವು ಸಮಪಾಲು ಕಳೆಯಲು ಬಿಡುವುದಿಲ್ಲ' ಎಂಬ ಪ್ರತಿಜ್ಞೆಯೊಂದಿಗೆ ಸೆಪ್ಟೆಂಬರ್ 02, 2016ರ ಮುಷ್ಕರವನ್ನು ಯಶಸ್ವಿಗೊಳಿಸೋಣ.

ರಾಷ್ಟ್ರವ್ಯಾಪಿ ಮುಷ್ಕರದ ಜೆಸಿಟಿಯು ಬೇಡಿಕೆಗಳು:

1. ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿ ಮಾಡಬೇಕು ಮತ್ತು ಸರಕು ಮಾರುಕಟ್ಟೆಯಲ್ಲಿ ಸಟ್ಟಾ ವ್ಯವಹಾರವನ್ನು ತಡೆಗಟ್ಟಬೇಕು.
2. ನಿರುದ್ಯೋಗವನ್ನು ತಡೆಗಟ್ಟಿ, ಉದ್ಯೋಗಗಳನ್ನು ಸೃಷ್ಟಿಸಲು ನಿರ್ಧಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು.
3. ಮೂಲ ಕಾರ್ಮಿಕ ಕಾನೂನುಗಳನ್ನು ಯಾವುದೇ ವಿನಾಯಿತಿಗಳಿಲ್ಲದೆ ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ಶಿಕ್ಷಾರ್ಹ ಕ್ರಮಗಳನ್ನು ಬಲಗೊಳಿಸಿ.
4. ಸಾರ್ವತ್ರಿಕವಾದ ಸಾಮಾಜಿಕ ಭದ್ರತೆಯ ರಕ್ಷಣೆ ಎಲ್ಲಾ ಕಾರ್ಮಿಕರಿಗೂ ಸಿಗಬೇಕು.
5. ರೂ.18 ಸಾವಿರ ರಾಷ್ಟ್ರವ್ಯಾಪಿ ಸಮಾನ ಕನಿಷ್ಠ ವೇತನ ನಿಗದಿಯಾಬೇಕು.
6. ಎಲ್ಲಾ ಕಾರ್ಮಿಕರಿಗೂ ನಿಗದಿತ ಕನಿಷ್ಟ ನಿವೃತ್ತಿ ವೇತನ ರೂ.3 ಸಾವಿರ ಹೆಚ್ಚಳ ಮಾಡಬೇಕು.
7. ಕೇಂದ್ರ ಮತ್ತು ರಾಜ್ಯದ ಸಾರ್ವಜನಿಕ ಕೈಗಾರಿಕೆಗಳಲ್ಲಿ ಬಂಡವಾಳ ಹಿಂತೆಗೆತದ ಎಲ್ಲಾ ಕ್ರಮಗಳನ್ನು ನಿರ್ಮಿಸಬೇಕು.
8. ಖಾಯಂ ಆಗಿ ನಿರಂತರವಾಗಿರುವ ಕೆಲಸಗಳ ಗುತ್ತಿಗೆ ಕೊಡುವುದನ್ನು ರದ್ದುಗೊಳಿಸಬೇಕು ಹಾಗೂ ಖಾಯಂ ನೌಕರರ ರೀತಿ ಮತ್ತು ಅಂಥಹುದೇ ಕೆಲಸಮಾಡುವ ಗುತ್ತಿಗೆ ಕಾರ್ಮಿಕರಿಗೆ ಖಾಯಂ ನೌಕರರಿಗೆ ಕೊಡುವ ವೇತನ ಮತ್ತು ಸೌಲಭ್ಯಗಳನ್ನು ನೀಡಬೇಕು.
9. ಬೋನಸ್ ಭವಿಷ್ಯ ನಿಧಿ, ಉಪಧನ ಕಾಯ್ದೆಗಳಲ್ಲಿನ ಮಿತಿಹೆಚ್ಚಳ ಮಾಡಬೇಕು.
10. 45 ದಿನಗಳಲ್ಲಿ ಸಂಘಗಳ ನೊಂದಾವಣೆಗಾಗಿ, ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ) 87ನೇ ಸಮಾವೇಶದ ಹಾಗೂ, ಸಂಘ ಕಟ್ಟುವ ಹಕ್ಕಿನ ಮತ್ತು ಸಾಮೂಹಿಕ ಚೌಕಾಸಿಯ ಐ.ಎಲ್.ಓ.ದ 98ನೇ ಸಮಾವೇಶದ ನಿರ್ಣಯಗಳಿಗೆ ಸಂಸತ್‌ನ ಅನುಮೋದನೆ ಪಡೆಯಲು ಕ್ರಮವಹಿಸಬೇಕು.
11. ಕಾರ್ಮಿಕ ಕಾನೂನುಗಳಿಗೆ ಕಾರ್ಮಿಕರ ವಿರೋಧಿ ತಿದ್ದುಪಡಿಗಳನ್ನು ಮಾಡಬಾರದು.
12. ರೈಲ್ವೆ, ವಿಮಾ ಮತ್ತು ರಕ್ಷಣಾ ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿರೋಧಿಸಿ.
13. ಇಂಡಿಯನ್ ಕಾರ್ಮಿಕ ಸಮ್ಮೇಳನ (ILC) ರೀತಿಯಲ್ಲಿ ಕರ್ನಾಟಕ ಕಾರ್ಮಿಕ ಸಮ್ಮೇಳನ (KLC)ವನ್ನು ರಚಿಸಬೇಕು.
14. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ನ್ಯಾಯಾಲಯವನ್ನು ಸ್ಥಾಪಿಸಬೇಕು.
15. ಪಶ್ಚಿಮಬಂಗಾಳ ಮಾದರಿಯಲ್ಲಿ ಎಲ್ಲಾ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಭವಿಷ್ಯನಿಧಿಯನ್ನು ನೀಡಬೇಕು.
16. ತಮಿಳುನಾಡು, ಮಹಾರಾಷ್ಟ್ರ ಮಾದರಿಯಲ್ಲಿ ಗುತ್ತಿಗೆ ಕಾರ್ಮಿಕರ ಕೆಲಸದ ಖಾಯಂಮಾತಿ ಆಗಬೇಕು. ಅಲ್ಲಿಯವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಮಾನ್ಯತೆಯ ಶಾಸನ ರೂಪಿಸಬೇಕು.
17. ICDS ಯೋಜನೆಯನ್ನು ಮಿಷನ್ ಮೋಡ್ ಆಗಿ ಪರಿವರ್ತಿಸಬಾರದು. ●

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮೀರವರು ಕರಡು ಘೋಷಣೆ ಮಂಡಿಸಿದರು. ಸಿಐಟಿಯು ರಾಜ್ಯ ಅ ಧ್ಯಕ್ಷರಾದ ವಿ.ಜೆ.ಕೆ.ನಾಯರ್, ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಮಾತನಾಡಿದರು. ಐಎನ್‌ಟಿಯುಸಿ ಸಂಘಟನಾ ಕಾರ್ಯದರ್ಶಿ ಶ್ಯಾಮಣ್ಣರೆಡ್ಡಿ, ಎಐಟಿಯುಸಿ ಅ ಧ್ಯಕ್ಷರಾದ ಅನಂತಸುಬ್ಬರಾವ್, ಹೆಚ್‌ಎಂಎಸ್‌ನಿಂದ ನಾಗಣ್ಣ, ಎಐಯುಟಿಯುಸಿಯಿಂದ ಸೋಮಶೇಖರ್, ಟಿಯುಸಿಸಿಯಿಂದ ಶಿವಶಂಕರ್, ಎಐಸಿಸಿಟಿಯುಯಿಂದ ಅಪ್ಪಣ್ಣ, ಬ್ಯಾಂಕ್ ನೌಕರರ ಸಂಘಟನೆಯಿಂದ ಹೆಚ್.ವಸಂತ ರೈ, ವಿಮಾ ನೌಕರರ ಸಂಘಟನೆಯಿಂದ ಗೋಪಾಲ್, ಮುಂತಾದವರು ಮಾತನಾಡಿದರು.

ಕ್ಯಾಸ್ಟ್ರೋ ಕಥೆ 15



ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಮೆಕ್ಸಿಕೊದಲ್ಲಿ ಗೆರಿಲ್ಲಾ ತರಬೇತಿ

ಮೆಕ್ಸಿಕೋಗೆ ಹೊರಡುವಾಗ ಫಿಡೆಲ್‌ರಲ್ಲಿದ್ದ ಐಡಿಯಾ ಏನೆಂದರೆ, ಒಂದು ಸೈನ್ಯವನ್ನು ಸೋಲಿಸಬಲ್ಲಂತಹ ಒಂದು ಶಕ್ತಿಯನ್ನು (ಮಿಲಿಟರಿ) ಬೆಳೆಸುವುದು. ಸಿಯೆರ್ರಾ ಮೇಸ್ತ್ರಾದ ಸಂಘರ್ಷದಲ್ಲಿ ಆರಂಭದ ದಿನಗಳಲ್ಲಿ ಫಿಡೆಲ್‌ರ ಸಣ್ಣ ಗುಂಪು ನಡೆಸಿದ ಚಟುವಟಿಕೆಗಳು ಇಂತಹ ಐಡಿಯಾವನ್ನು ಗಟ್ಟಿಗೊಳಿಸಿದ್ದವು. ಮೆಕ್ಸಿಕೋದಲ್ಲಿ ಇಂತಹ ಸೈನ್ಯವನ್ನು ಕಟ್ಟುವ ಮತ್ತು ಸಂಘಟಿಸುವ ಸಾಹಸಕ್ಕೆ ಫಿಡೆಲ್ ಮುಂದಾಗಿದ್ದರು. ಸ್ಪೈನ್‌ನ ಸಿವಿಲ್ ಯುದ್ಧದ ಸಂದರ್ಭದಲ್ಲಿ ರಿಪಬ್ಲಿಕನ್ನರ ಪರವಾಗಿ ಹೋರಾಡಿದ ಆಲ್ಬರ್ಟೋ ಬಾಯೋ ಎಂಬ ಮಿಲಿಟರಿ ಜನರಲ್ ಮಿಲಿಟರಿ ತರಬೇತಿಯನ್ನು ನೀಡಲು ಲಭ್ಯವಾಗಿದ್ದರು. ಇವರು ಮುಖ್ಯವಾಗಿ ಮಿಲಿಟರಿ ತಂತ್ರಗಾರಿಕೆಯ ಪಾಠಗಳನ್ನು ಹೇಳಿಕೊಡುತ್ತಿದ್ದರು. ಈ ತಂತ್ರಗಾರಿಕೆಯ ಪಾಠಗಳಿಗೆ ಚೆ' ಶ್ರದ್ಧೆಯಿಂದ ಭಾಗವಹಿಸುತ್ತಿದ್ದರು. ಬಾಯೋಗೆ ಚೆ ಅತ್ಯಂತ ಪ್ರಿಯವಾದ ವಿದ್ಯಾರ್ಥಿಯಾಗಿದ್ದರು. ಇಬ್ಬರೂ ಕೂಡಿ ಪ್ರತಿ ರಾತ್ರಿ ಚೆಸ್ ಆಡುತ್ತಿದ್ದರು. ಈ ಜನರಲ್ ಬಾಯೋ ಯುದ್ಧದ ತಂತ್ರಗಳನ್ನು ಬೋಧಿಸುತ್ತಿದ್ದರೇ ಹೊರತು ವ್ಯೂಹದ ಬಗ್ಗೆ ಹೇಳಿಕೊಡುತ್ತಿರಲಿಲ್ಲ. ಅವರು ಬಹುಶಃ ಗೆರಿಲ್ಲಾ ಗುಂಪೊಂದು ಸಾಂಪ್ರದಾಯಿಕ ಯುದ್ಧ ಮಾಡಬಲ್ಲ ಸೈನ್ಯವಾಗುವ ಸಾಧ್ಯತೆಗಳ ಬಗ್ಗೆ ಯೋಚಿಸಿರಲಿಲ್ಲ. ಆದರೆ ಇಂತಹ ಗುಂಪೇ ಸೈನ್ಯವಾಗಿ ಸಾಂಪ್ರದಾಯಿಕ ಸೈನ್ಯವನ್ನು ಸೋಲಿಸಬೇಕೆಂಬ ಐಡಿಯಾ ಫಿಡೆಲ್ ತಲೆಯಲ್ಲಿ ಇದ್ದದ್ದು.

ಇವರ ಬಳಿ ಹಣವೂ ಇರಲಿಲ್ಲ ಶಸ್ತ್ರಾಸ್ತ್ರಗಳೂ ಇರಲಿಲ್ಲ. ಹೇಗಾದರೂ ಮಾಡಿ ಕ್ಯೂಬಾದಲ್ಲಿ ಬಟಿಸ್ಟಾನ ಪೀಡನೆಯನ್ನು ತೊಲಗಿಸಿ ಕ್ರಾಂತಿ ಮಾಡಬೇಕಾಗಿತ್ತು. ವಿಮಾನಗಳು, ಟ್ಯಾಂಕರ್‌ಗಳು, ಫಿರಂಗಿಗಳು, ಸಂಪರ್ಕಗಳು, ಇತ್ಯಾದಿ., ಎಲ್ಲವನ್ನೂ ಹೊಂದಿದ್ದ ಬಟಿಸ್ಟಾನ ಸೈನ್ಯವನ್ನು ಎದುರಿಸಲು ಸೂತ್ರವನ್ನು ಇವರು ಹುಡುಕಿದ್ದರು. ಇಂತಹ ಐಡಿಯಾ ಪೂರ್ಣವಾಗಿ ತನ್ನ ಅರ್ಹತೆಯ ಮೇಲೆ ಯಶಸ್ವಿಯಾಗುತ್ತದೆಂಬ ಖಾತ್ರಿಯಿಲ್ಲದಿದ್ದರೂ ಧೃಡವಾದ ನಂಬಿಕೆಯಿತ್ತು. ಈ ಧೃಡತೆಯ ಜೊತೆ-ಗೆ ಅದೃಷ್ಟವು ಪ್ರಮುಖ ಪಾತ್ರವನ್ನು ವಹಿಸಿತೆಂದು ಫಿಡೆಲ್ ನೆನಪಿಸಿಕೊಳ್ಳುತ್ತಾರೆ.

ಚೆ ವೈದ್ಯ ಕಮಾಂಡರ್

ಚೆ ಮಿಲಿಟರಿ ತರಬೇತಿಯನ್ನು ಪಡೆಯುತ್ತಿದ್ದರೂ ಸಹ, ಮುಖ್ಯವಾಗಿ ಅವರು ತಂಡದ ವೈದ್ಯರಾಗಿ ಕೆಲಸ ಮಾಡುತ್ತಿದ್ದರು. ಇಡೀ ತಂಡದ ಆರೋಗ್ಯವನ್ನು ಕಾಪಾಡುವುದರಲ್ಲಿ ಹೆಚ್ಚಿನ ಮುತುವರ್ಜಿ ಮಾಡುತ್ತಿದ್ದುದರಿಂದ ಎಲ್ಲಾ ಸದಸ್ಯರ ಪ್ರೀತಿಗೆ ಪಾತ್ರರಾಗಿದ್ದರು. ಚೆ'ನ ಹಲವು ಅದ್ಭುತ ಗುಣಗಳನ್ನು ಕೊಂಡಾಡುತ್ತಲೇ, ಒಂದು ವಿಶೇಷ ಗುಣವನ್ನು ಫಿಡೆಲ್ ಮೆಚ್ಚುತ್ತಾ ಹೇಳುವುದು ಹೀಗೆ,.. "ಚೆ ಆಸ್ತಮಾ ಖಾಯಿಲೆಯಿಂದ ನರಳುತ್ತಿದ್ದರು. ಮೆಕ್ಸಿಕೊ ನಗರಕ್ಕೆ 70 ಕಿ.ಮೀ. ದೂರದಲ್ಲಿ ಪೊಪೊ ಎಂದು ಸಾಮಾನ್ಯವಾಗಿ ಕರೆಯಲಾಗುವ ಪೊಪೊಕತೆಪೆತಿಲ್ ಎಂಬ ಜ್ವಾಲಾಮುಖಿ ಬೆಟ್ಟವೊಂದಿತ್ತು. ವರ್ಷಪೂರ್ತಿ ಮಂಜಿನಿಂದ ತುಂಬಿರುತ್ತಿದ್ದ ಇದು 18,000 ಅಡಿ ಎತ್ತರವಾಗಿತ್ತು. ಪ್ರತಿ ವಾರದ ಕೊನೆಯಲ್ಲಿ ಅಲ್ಲಿಗೆ ಹೋಗಿ ಇದನ್ನು ಹತ್ತಲು ಚೆ ಪ್ರಯತ್ನಿಸುತ್ತಿದ್ದರು. ಹತ್ತಲು ಅಗಾಧವಾದ ಪ್ರಯತ್ನವನ್ನು ಮಾಡುತ್ತಿದ್ದರು, ಆದರೆ ಬೆಟ್ಟದ ತುದಿ ಮುಟ್ಟಲು ಆಗುತ್ತಿರಲಿಲ್ಲ. ಆಸ್ತಮಾ ಅವರನ್ನು ಹಿಡಿದೆಳೆಯುತ್ತಿತ್ತು. ಮತ್ತೆ ಮುಂದಿನ ವಾರ ಪ್ರಯತಿಸುತ್ತಿದ್ದರು, ಆದರೆ ಆಗುತ್ತಿರಲಿಲ್ಲ. ಅವಕಾಶವಿದ್ದಿದ್ದರೆ, ಜೀವನಪೂರ್ತಿ ಪ್ರಯತ್ನಿಸುತ್ತಲೇ ಇರುತ್ತಿದ್ದರು. ಇಲ್ಲಿ ಚೆ'ನ ಗುಣಸ್ವಭಾವ, ಮನೋಸಾಮರ್ಥ್ಯ ಮತ್ತು ನಿರಂತರತೆ ಗಮನಿಸಬಹುದು".

"ಚೆ'ನ ಇಚ್ಛಾಶಕ್ತಿ ಅದ್ಭುತವಾದುದು ಮತ್ತು ಯಾವುದೇ ಕೆಲಸಕ್ಕೂ ಹಿಂಜರಿಯದೆ ತನ್ನನ್ನು ಒಪ್ಪಿಸಿಕೊಳ್ಳುತ್ತಿದ್ದ. ಯಾವುದೇ ಕಷ್ಟಕರ ಯೋಜನೆಗಳಿದ್ದಾಗ, ಅನಿರೀಕ್ಷಿತ ದಾಳಿಗಳನ್ನು ನಡೆಸಬೇಕಾದಾಗ, ಶಸ್ತ್ರಾಸ್ತ್ರಗಳು ಅಗತ್ಯವಿದ್ದಾಗ ಮೊದಲು ವಾಲಂಟೀಯರ್ ಮಾಡುತ್ತಿದ್ದುದು ಚೆ. ಈತ ಅಸಾಮಾನ್ಯ ಶೌರ್ಯವಂತನಾಗಿದ್ದ, ಅಪಾಯಗಳ ಕುರಿತು ಸಂಪೂರ್ಣ ತಿರಸ್ಕಾರವನ್ನು ಹೊಂದಿದ್ದ. ಕೆಲವು ಸಂದರ್ಭಗಳಲ್ಲಿ ಅತ್ಯಂತ ಕಷ್ಟಕರ ಮತ್ತು ತೊಂದರೆಯೊಡ್ಡಬಹುದಾದ ಕೆಲಸಗಳಿಗೆ ಚೆ' ತನ್ನನ್ನೇ ಸೂಚಿಸಿಕೊಂಡಾಗ ನಾನು 'ಬೇಡ' ಎಂದು ಹೇಳುತ್ತಿದ್ದೆ" ಎನ್ನುತ್ತಾರೆ ಫಿಡೆಲ್.



ಜನರಲ್ ಬಾಯೋ ಯುದ್ಧದ ತಂತ್ರಗಳನ್ನು ಬೋಧಿಸುತ್ತಿದ್ದರೇ ಹೊರತು ವ್ಯೂಹದ ಬಗ್ಗೆ ಹೇಳಿಕೊಡುತ್ತಿರಲಿಲ್ಲ. ಅವರು ಬಹುಶಃ ಗೆರಿಲ್ಲಾ ಗುಂಪೊಂದು ಸಾಂಪ್ರದಾಯಿಕ ಯುದ್ಧ ಮಾಡಬಲ್ಲ ಸೈನ್ಯವಾಗುವ ಸಾಧ್ಯತೆಗಳ ಬಗ್ಗೆ ಯೋಚಿಸಿರಲಿಲ್ಲ. ಆದರೆ ಇಂತಹ ಗುಂಪೇ ಸೈನ್ಯವಾಗಿ ಸಾಂಪ್ರದಾಯಿಕ ಸೈನ್ಯವನ್ನು ಸೋಲಿಸಬೇಕೆಂಬ ಐಡಿಯಾ ಫಿಡೆಲ್ ತಲೆಯಲ್ಲಿ ಇದ್ದದ್ದು.

ಮೆಕ್ಸಿಕೋದಲ್ಲಿ ಮಿಲಿಟರಿ ತರಬೇತಿ ಶಿಬಿರವೊಂದಕ್ಕೆ ಚೆ'ನನ್ನು ಕಮಾಂಡ್ ಆಗಿ ನೇಮಿಸಲಾಗಿತ್ತು. ಅಲ್ಲಿ ಪ್ರಾರಂಭದ ಕೆಲ ಸಂದರ್ಭಗಳಲ್ಲಿ ಅರ್ಜೆಂಟೈನ್ ಎಂಬ ಕಾರಣಕ್ಕೆ ಕೆಲವರು ಚೆ ವಿರುದ್ಧ ದೂರುಗಳನ್ನು ಹೇಳುತ್ತಿದ್ದರು. ಆದರೆ ನಿಧಾನಕ್ಕೆ ಅವರೆಲ್ಲಾ ಚೆ'ನ ವಿಶಿಷ್ಟ ಗುಣಲಕ್ಷಣಗಳ ಕಾರಣದಿಂದಾಗಿ ಆತನನ್ನು ಪ್ರೀತಿಸತೊಡಗಿದರು. ಚೆ'ಗೆ ಮಾನವೀಯ ಮತ್ತು ರಾಜಕೀಯದ ವಿಶೇಷ ಗುಣಗಳಲ್ಲದೆ, ಶೌರ್ಯದ ಆಕರ್ಷಕ ಗುಣವಿತ್ತು. ಒಬ್ಬ ಮನುಷ್ಯನಾಗಿ ಚೆ ಅಸಾಧಾರಣ ಮಾನವೀಯ ವ್ಯಕ್ತಿಯಾಗಿದ್ದ. ಅದ್ಭುತ, ಸುಸಂಸ್ಕೃತ ಹಾಗೂ ಅಪೂರ್ವ ಬುದ್ಧಿಮತ್ತೆಯನ್ನು ಹೊಂದಿದ್ದ. ಜೊತೆಗೆ ಮಿಲಿಟರಿ ಗುಣಗಳೂ ಸಹ ವಿಶಿಷ್ಟವಾಗಿದ್ದವು. ವೈದ್ಯನಾಗಿದ್ದ ಚೆ, ಸೈನಿಕನಾದರೂ ಸಹ ವೈದ್ಯತನವನ್ನು ಅವನು ಒಂದು ಕ್ಷಣವೂ ಬಿಟ್ಟಿರಲಿಲ್ಲ. ಫಿಡೆಲ್ ಮತ್ತು ಚೆ ಒಟ್ಟಿಗೆ ಹಲವು ಸಂದರ್ಭಗಳಲ್ಲಿ ಕಷ್ಟಕರ ಕಾರ್ಯಾಚರಣೆಗಳನ್ನು ಮುನ್ನಡೆಸಿದ್ದರು.

ಗೆರಿಲ್ಲಾ ಯುದ್ಧ ಕಲೆ

ಯುದ್ಧ ಕಲೆಯನ್ನು ಕರಗತ ಮಾಡಿಕೊಳ್ಳುವುದು ಕ್ಯೂಬನ್ ಕ್ರಾಂತಿಯ ದೃಷ್ಟಿಯಿಂದ ಅತ್ಯಗತ್ಯವಾಗಿತ್ತು. ಅಸಾಂಪ್ರದಾಯಿಕ ಗುಂಪೊಂದು ಯುದ್ಧ ತತ್ವಗಳನ್ನು ಕಲಿಯುತ್ತಾ ಮೈಗೂಡಿಸಿಕೊಂಡ ಬಗ್ಗೆ ಫಿಡೆಲ್ ಹೀಗೇಳುತ್ತಾರೆ.

"ನಾವು ಕ್ರಾಂತಿಕಾರಿಗಳು ಸಿಯೆರ್ರಾ ಹೋರಾಟದಲ್ಲಿ ಯುದ್ಧ ಕಲೆಯನ್ನು ಕಲಿತೆವು. ಶತ್ರು ತನ್ನ ನೆಲೆಯಲ್ಲಿ ಅದರ ವ್ಯಾಪ್ತಿಯಲ್ಲಿ ಬಲಿಷ್ಟ, ಆದರೆ ಚಲನೆಯಲ್ಲಿದ್ದಾಗ ದುರ್ಬಲ ಎಂಬುದನ್ನು ಕಂಡುಕೊಂಡೆವು. 300 ಜನರ ಒಂದು ಕಾಲಂ (column) ಒಂದು ಅಥವಾ ಎರಡು ಪ್ಲಾಟೂನ್‌ಗಳಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆ; ಕಾಂಬ್ಯಾಟ್ (combat) ನಲ್ಲಿ ಇತರರು ಫೈರ್ ಮಾಡುವುದಿಲ್ಲ, ಅಥವಾ ಸದ್ದು ಮಾಡಲು ಸುಮ್ಮನೆ ಗಾಳಿಯಲ್ಲಿ ಗುಂಡು ಹಾರಿಸುತ್ತಾರೆ – ತಮ್ಮ ಮುಂಚೂಣಿ ಸ್ಥಳಗಳಲ್ಲಿ (advanced positions) ಗುಂಡು ಹಾರಿಸುವ ಟ್ರೂಪ್ಸ್‌ನ್ನು ಇವರು ಕಾಣುವುದಿಲ್ಲ. ನಾವು ಬಳಸಿದ ಪ್ರಾಥಮಿಕ ತತ್ವಗಳಲ್ಲಿ ಇದೂ ಒಂದು; ಶತ್ರು ದುರ್ಬಲನಾಗಿದ್ದಾಗ ಮತ್ತು ಅತ್ಯಂತ ಭೇಧ್ಯನಾಗಿದ್ದಾಗ ದಾಳಿ ಮಾಡುವುದು. ನಾವು ಮುಂಚೂಣಿ ಸ್ಥಾನಗಳ ಮೇಲೆ ದಾಳಿ ಮಾಡಿದ್ದರೆ ಅನಾಹುತಗಳು ಸಾಮಾನ್ಯವಾಗಿರುತ್ತಿದ್ದವು, ನಾವು ಸ್ಫೋಟಕಗಳನ್ನು ವೃಥಾ ಪೋಲು ಮಾಡಿಕೊಳ್ಳುತ್ತಿದ್ದೆವು... ಹೀಗೆ, ಸ್ವಲ್ಪ ಸ್ವಲ್ಪವೇ ನಮ್ಮ ತಂತ್ರಗಳು ಅಭಿವೃದ್ಧಿಗೊಂಡವು. ನಾವು ಬಲಿಷ್ಟ ಶತ್ರುವನ್ನು ಎದುರಿಸುವುದನ್ನು ನಿಧಾನಕ್ಕೆ ಕಲಿತುಕೊಂಡೆವು ಮತ್ತು ಇದರಲ್ಲಿ ಕಾಲಂ 1 ನಮ್ಮ ಪ್ರಾಥಮಿಕ ಶಾಲೆಯಾಗಿತ್ತು."

ಮೆಕ್ಸಿಕೋ ಬಂಧನ

ಮೆಕ್ಸಿಕೋದಲ್ಲಿ ಫಿಡೆಲ್ ಮತ್ತು ಅವರ ತಂಡವನ್ನು ಅಪಹರಿಸಲು ಅಥವಾ ಕೊಲ್ಲಲು ಬಟಿಸ್ಟಾ ತನ್ನ ಏಜೆಂಟರನ್ನು ನೇಮಕ ಮಾಡಿದ್ದ. ಇವರಿಂದ ತಪ್ಪಿಸಿಕೊಳ್ಳಲು ಫಿಡೆಲ್ ಹಲವಾರು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿದ್ದರು. ಮೆಕ್ಸಿಕೋದಲ್ಲಿ ಆಗ ಫೆಡರಲ್ಸ್ ಮತ್ತು ಸೀಕ್ರೆಟ್ ಪೊಲೀಸ್ ವ್ಯವಸ್ಥೆಯಿತ್ತು. ಇದರ ಪೈಕಿ ಫೆಡರಲ್ಸ್ ಗುಪ್ತಚಾರರು ಫಿಡೆಲ್ ತಂಡವನ್ನು ಅನುಮಾನದಿಂದ ಹಿಂಬಾಲಿಸುತ್ತಿದ್ದರು. ಸೈನ್ಯದ ಅಧಿಕಾರಿಯೊಬ್ಬ ಇದರ ಕಮಾಂಡರನಾಗಿದ್ದ. ಇವರು ಪ್ರಾರಂಭದಲ್ಲಿ ಫಿಡೆಲ್ ತಂಡವನ್ನು ಕಳ್ಳ ವ್ಯಾಪಾರಿಗಳು ಅಥವಾ ಅಂತಹವರಿರಬೇಕೆಂದು ಭಾವಿಸಿದರು. ಫಿಡೆಲ್ ಮತ್ತು ಗೆಳೆಯರು ತೆಗೆದುಕೊಂಡಿದ್ದ ಎಚ್ಚರಿಕೆಯ ಕ್ರಮಗಳಿಗೆ ಇದು ಕಾರಣವಾಗಿತ್ತು. ಇನ್ನು ಮೆಕ್ಸಿಕನ್ ಸೀಕ್ರೆಟ್ ಪೊಲೀಸ್ ಒಳಗೆ ಬಟಿಸ್ಟಾನ ಪ್ರಭಾವವಿತ್ತು. ಅದರೊಳಗೆ ಹಲವರನ್ನು ಹಣಕೊಟ್ಟು ತನ್ನ ಪರವಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದ. ಹೀಗಾಗಿ ತಂತ್ರಗಳು ಮತ್ತು ಪ್ರತಿ–ತಂತ್ರಗಳು ಕ್ಷಣ ಕ್ಷಣದ ಅನಿವಾರ್ಯವಾಗಿತ್ತು. ಒಮ್ಮೆ ಒಂದು ಸಂಜೆ ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುವಾಗ ಕೆಲವು ಫೆಡರಲ್ಸ್ ಇವರನ್ನು ಅನುಮಾನದಿಂದ ಹಿಂಬಾಲಿಸಿದರು. ಅದು ಮನೆಗಳು ತುಂಬಾ ವಿರಳವಾಗಿದ್ದ ಪ್ರದೇಶ. ರಸ್ತೆಯ ಎಡಬದಿಯಲ್ಲಿ ಫಿಡೆಲ್ ಮತ್ತು ಅದೇ ಬದಿಯಲ್ಲಿ ಮೂವತ್ತು ಗಜಗಳ ಹಿಂದೆ ರಮಿರಿಟೋ ನಡೆದು ಬರುತ್ತಿದ್ದರು. ಇದ್ದಕ್ಕಿದ್ದಂತೆ ಹಿಂಬದಿಯಿಂದ ಕಾ–ರೊಂದು ಬರ್‍ರೆಂದು ಬಂದು ಇವರ ಬಳಿ ನಿಂತಿತು. ಅದರಿಂದ ಜನರ ಗುಂಪೊಂದು ನೆಗೆದು ಆಚೆ ಬಂತು. ತಕ್ಷಣ ಫಿಡೆಲ್ ನಿರ್ಮಾಣ ಹಂತದಲ್ಲಿದ್ದ ಪಕ್ಕದ ಕಟ್ಟಡದಲ್ಲಿ ಅವಿತುಕೊಂಡು ತಮ್ಮ ಬಳಿಯಿದ್ದ ಸ್ಪಾನಿಷ್ ಆಟೋಮ್ಯಾಟಿಕ್ ಪಿಸ್ತೂಲ್ ತೆಗೆಯಲು ಪ್ರಯತ್ನಿಸಿದರು. ಅಷ್ಟರಲ್ಲಿ ಬಂದೂಕಿನ ಬ್ಯಾರೆಲ್ ಒಂದು ಇವರ ತಲೆಗೆ ಹಿಡಿದು ಫೆಡರಲ್ ಒಬ್ಬ ನಿಂತಿದ್ದ. ಅಷ್ಟರೊಳಗೆ ರಮಿರಿಟೋನನ್ನು ಸಹ ಬಂಧಿಸಿದ್ದರು. ಅವರು ಇವರನ್ನು ಸ್ಮಗ್ಲರ್ಸ್ ಎಂದು ಭಾವಿಸಿದ್ದರು. ಆಗ ಅಷ್ಟಾಗಿ ಡ್ರಗ್ಸ್ ಸಮಸ್ಯೆ ಇರಲಿಲ್ಲ. ಹೆಚ್ಚಾಗಿ ಕಳ್ಳಸಾಗಣೆಯ ಕುರಿತು ಅಧಿಕಾರಿಗಳು ಚಿಂತಿತರಾಗಿದ್ದರು. ಇವರನ್ನು ಪೊಲೀಸ್ ಕೇಂದ್ರ ಕಛೇರಿಗೆ ಕರೆದೊಯ್ದರು.

ಜನರನ್ನು ಸೆರೆಹಿಡಿಯುವುದರಲ್ಲಿ ಮತ್ತು ತನಿಖೆಯನ್ನು ನಡೆಸುವುದರಲ್ಲಿ ಫೆಡರಲ್‌ಗಳದು ಎತ್ತಿದ ಕೈ. ಸಣ್ಣ ಪೇಪರಿನ ಚೂರನ್ನು ಇಟ್ಟುಕೊಂಡು ಏನೆಲ್ಲಾ ತನಿಖೆ ಮಾಡಿಬಿಡುವ ತಜ್ಞರಿವರು. ಕೊಟ್ಟ ಕೆಲಸ ಮಾಡಿ ಮುಗಿಸಬೇಕು ಎಂಬ ದೃಢ ನಿಲುವಿನ ಈ ಫೆಡರೇಲ್‌ಗಳು ಫಿಡೆಲ್‌ರೊಂದಿಗೆ ಮಾತನಾಡಲು ಪ್ರಾರಂಭಿಸಿದಾಗ ಸ್ವಲ್ಪ ನಿರಾಳವಾಯ್ತು. ಫಿಡೆಲ್ ಮತ್ತು ರಮಿರಿಟೋರಿಂದ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಫೆಡರೇಲ್ಸ್‌ಗಳು ಎಲ್ಲಾ ರೀತಿಯ ಪ್ರಯತ್ನಗಳನ್ನು ಪ್ರಾರಂಭಿಸಿದರು. ಇಲ್ಲೂ ಫಿಡೆಲ್‌ರ ಅದೃಷ್ಟ ಸಹಾಯಕ್ಕೆ ಬಂತು. ತಂಡದ ಸದಸ್ಯ ಕ್ಯಾಂಡಿಡೋ ಗೋನ್ಸಾಲೆಜ್ ಒಂದು ಚೀಟಿಯಲ್ಲಿ ದೂರವಾಣಿ ಸಂಖ್ಯೆಯನ್ನು ಬರೆದು ಫಿಡೆಲ್ ಜೇಬಿನಲ್ಲಿಟ್ಟಿದ್ದ. ಇದು ಇವರು ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟಿದ್ದ ಮನೆಯದಾಗಿತ್ತು. ಎಲ್ಲಾ ರೀತಿಯ ತನಿಖೆ ಮಾಡುತ್ತಿದ್ದ ಫೆಡರೇಲ್ಸ್ ಅದ್ಯಾಕೋ ಈ ದೂರವಾಣಿ ಸಂಖ್ಯೆಯನ್ನು ತೀವ್ರ ತನಿಖೆಗೆ ಒಳಪಡಿಸದೇ ಹೋದರು! ಹಾಗೇನಾದರೂ ಆಗಿದ್ದಲ್ಲಿ ಇವರ ಕಥೆ ಮುಕ್ತಾಯವಾಗುತ್ತಿತ್ತು.

ಮೆಕ್ಸಿಕನ್ ಪೊಲೀಸರು ಫಿಡೆಲ್ ತಂಡದ ತರಬೇತಿ ಶಿಬಿರದ ಸ್ಥಳವನ್ನು ಹುಡುಕುತ್ತಿದ್ದರು. ಆದರೆ ಯಶಸ್ವಿಯಾಗಲಿಲ್ಲ. ಒಮ್ಮೆ ಅವರು ಫಿಡೆಲ್‌ನನ್ನು ಉದ್ದೇಶಿಸಿ "ನಿಮ್ಮ ತರಬೇತಿ ಶಿಬಿರ ಎಲ್ಲಿದೆಯೆಂದು ಗೊತ್ತು" ಎಂದು ಖಚಿತವಾಗಿ ಹೇಳಿದಾಗ, ಸುಮಾರು ಇಪ್ಪತ್ತು ಕಾಂಪೆನ್ಯೇರೋಗಳು ಮತ್ತು ಅವರ ಬಳಿಯಿದ್ದ ಶಸ್ತ್ರಾಸ್ತ್ರಗಳು ಫಿಡೆಲ್ ಕಣ್ಮುಂದೆ ಬಂದವು. ಇನ್ನು ಗುಟ್ಟು ಮಾಡುವುದು ಪ್ರಯೋಜನವಿಲ್ಲೆಂದು ತಿಳಿದ ಫಿಡೆಲ್, ಫೆಡರೇಲ್ಸ್ ಮುಖ್ಯಸ್ಥನಿಗೆ, "ನಾನು ನಿಮ್ಮಲ್ಲಿ ಒಂದು ವಿಚಾರ ಕೇಳುತ್ತೇನೆ, ಸಂಘರ್ಷ ತಪ್ಪಿಸಲು, ನಿಮ್ಮೊಂದಿಗೆ ಅಲ್ಲಿಗೆ ಬರಲು ನನಗೆ ಅವಕಾಶ ಕೊಡಿ" ಎಂದರು. ಇದಕ್ಕೆ ಕಮಾಂಡರ್ ಒಪ್ಪಿದನು. ಅಲ್ಲಿಗೆ ತಲುಪಿದ ನಂತರ ಮೊದಲಿಗೆ ಫಿಡೆಲ್ ಒಬ್ಬರೇ ಒಳಗೆ ಹೋದರು. ಇದನ್ನು ಕಂಡು ಬಿಡುಗಡೆಯಾಗಿ ಬಂದಿರಬೇಕೆಂದು ಒಳಗಿದ್ದವರೆಲ್ಲಾ ಖುಷಿಪಟ್ಟರು. ಖುಷಿ ಪಡುವುದು ಬೇಡವೆಂದು ಹೇಳಿದ ಫಿಡೆಲ್ ಒಟ್ಟು ಪರಿಸ್ಥಿತಿಯನ್ನು ವಿವರಿಸಿದರು. ನಂತರ ಅಲ್ಲಿದ್ದವರನ್ನೆಲ್ಲಾ ಬಂಧಿಸಿದರು. ಇದರಲ್ಲಿ ಚೆ' ಸಹ ಬಂಧಿತರಾದರು. ಆ ಸಂದರ್ಭಕ್ಕೆ ಮನೆಯಿಂದ ಹೊರಗಿದ್ದವರು ಬಂಧನದಿಂದ ತಪ್ಪಿಸಿಕೊಂಡರು. ಆ ರೀತಿ ತಪ್ಪಿಸಿಕೊಂಡವರಲ್ಲಿ ಬಾಯೋ ಸಹ ಒಬ್ಬರು. ಈತ ಎಂತಹ ಮನುಷ್ಯನೆಂದರೆ ಕೆಲವು ವಾರಗಳ ಹಿಂದೆ ಇಪ್ಪತ್ತು ದಿನಗಳ ಕಾಲ ಉಪವಾಸ ಮಾಡಿದ್ದ, ಕೇವಲ ತನ್ನ ಇಚ್ಛಾಶಕ್ತಿಯನ್ನು ಪರೀಕ್ಷಿಸಿಕೊಳ್ಳಲು!. ಸ್ಪ್ಯಾನಿಷ್ ಸಿವಿಲ್ ಯುದ್ಧದಲ್ಲಿ ಈತ ಬೆಲೀರಸ್ ದ್ವೀಪ ವಿಮೋಚನೆಯ ಯುದ್ಧ ಯಾತ್ರೆಯ ಕ್ಯಾಪ್ಟನ್ ಆಗಿದ್ದ. ಆದರೆ ಯಶಸ್ವಿಯಾಗಿರಲಿಲ್ಲ. ಅಂತಹ ಎಲ್ಲಾ ಸಂದರ್ಭಗಳಲ್ಲೂ ಈ ಬಾಯೋ ಯದ್ಧ ಸಾಹಸಗಳ ಮತ್ತು ವೈಫಲ್ಯಗಳ ಕುರಿತು ಪುಸ್ತಕ ಬರೆಯುತ್ತಿದ್ದ. ಅದೇ ರೀತಿ ಫಿಡೆಲ್ ಮತ್ತು ತಂಡ ಖೈದಿಗಳಾಗಿದ್ದ ಸಂದರ್ಭದಲ್ಲಿ "ನಿಷ್ಫಲವಾದ ನನ್ನ ಕ್ಯೂಬಾ ದಂಡಯಾತ್ರೆ" ಎಂಬೊಂದು ಪುಸ್ತಕ ಬರೆದ.

ಖೈದಿಗಳ ಜೊತೆಗೆ ಅವರ ಬಳಿಯಿದ್ದ ಹಲವು ಡಜನ್ ಶಸ್ತ್ರಗಳನ್ನು ಸಹ ಫೆಡರೇಲ್ಸ್ ವಶಪಡಿಸಿಕೊಂಡರು. ಅವುಗಳಿಗೆ ದೂರದರ್ಶಕ ಸಾಧನಗಳನ್ನು ಅಳವಡಿಸಿರಲಿಲ್ಲವಾದ್ದರಿಂದ ಅಷ್ಟೊಂದು ಆಧುನಿಕವಾಗಿರಲಿಲ್ಲ. ಇಷ್ಟು ಮಾತ್ರ ಅವರಿಗೆ ದೊರೆಯಿತು. ಇವರಿದ್ದ ಮನೆ, ಚಾಲ್ಕೋ ಎಂಬಲ್ಲಿನ ರ್‍ಯಾಂಚೋ ಸಾಂತಾರೋಸ್ ಎಂಬ ಹೆಸರಿನ ಸ್ಥಳವಾಗಿತ್ತು. ಅಲ್ಲಿ ಮೇಕೆ ಹಾಲು ಮತ್ತು ಚೀಸ್ ಉತ್ಪಾದಿಸಲಾಗುತ್ತಿತ್ತು. ಇವರ ಕೆಲಸಗಳಿಗೆ ಆ ಸ್ಥಳವನ್ನು ಕವರ್‌ಅಪ್ ಆಗಿ ಬಳಸಲಾಗಿತ್ತು. ●

5.76% ಕ್ಕೇರಿದ ಹಣದುಬ್ಬರ, 7.88%ಕ್ಕೆ ನೆಗೆದ ಸಗಟು ಬೆಲೆ ಸೂಚ್ಯಂಕ, ಮತ್ತೆ ಪೆಟ್ರೋಲ್-ಡೀಸೆಲ್ ಬೆಲೆಯೇರಿಕೆ : 'ಅಚ್ಛೇದಿನ್'ಗೆ ಕಾಯುತ್ತಿರುವವರಿಗೆ ಎರಡು ವರ್ಷಗಳ ಆಚರಣೆಯ ಉಡುಗೊರೆಗಳು

ನೂರಾರು ಕೋಟಿ ರೂ.ಗಳಷ್ಟು ಜನಗಳ ತೆರಿಗೆ ಹಣವನ್ನು ಸುರಿದ ಎರಡು ವರ್ಷಗಳ 'ಸಾಧನೆ'ಗಳ ಪ್ರಚಾರ ಪರ್ವ ಮುಗಿಯುವ ಮೊದಲೇ 'ಈ ಬಾರಿ' 'ಅಚ್ಛೇದಿನ್' ಸರಕಾರ ಜನಸಾಮಾನ್ಯರ ಮೇಲೆ ಹೊರಿಸಿರುಈ 'ಸಾಧನೆ'ಗಳ ಹೊರೆಗಳ ಸೂಚ್ಯಂಕಗಳು ಪುಂಖಾನುಪುಂಖವಾಗಿ ಪ್ರಕಟಗೊಳ್ಳುತ್ತಿವೆ.

* ಹಣದುಬ್ಬರವನ್ನು ಲೆಕ್ಕ ಹಾಕುವ ಬಳಕೆದಾರರ ಬೆಲೆ ಸೂಚ್ಯಂಕ ಮೇ ತಿಂಗಳಲ್ಲಿ 5.76%ಕ್ಕೇರಿದೆ. ಇದು ಕಳೆದ 21 ತಿಂಗಳಲ್ಲೇ ಅತಿ ಹೆಚ್ಚಿನ ಹಣದುಬ್ಬರ ದರ.
* ಸಗಟು ಬೆಲೆ ಸೂಚ್ಯಂಕ ಸತತವಾಗಿ ಎರಡನೇ ತಿಂಗಳೂ ಏರಿ 7.88% ತಲುಪಿದೆ.
* ಸತತ ಎಂಟನೇ ಬಾರಿಗೆ ಡೀಸೆಲ್ ಬೆಲೆಗಳಲ್ಲಿ ರೂ. 1.26 ಮತ್ತು ಪೆಟ್ರೋಲ್ ಬೆಲೆಗಳಲ್ಲಿ 5ಪೈಸೆ ಏರಿಕೆಯಾಗಿದೆ.

ಹಣದುಬ್ಬರ: ಜೂನ್ 13ರಂದು ಪ್ರಕಟವಾದ ಚಿಲ್ಲರೆ ಬೆಲೆ ಸೂಚ್ಯಂಕದ ಈ ಕೆಳಗಿನ ಅಂಕಿ-ಅಂಶಗಳನ್ನು ನೋಡಿ:

ಸೂಚ್ಯಂಕ %	ಮೇ 2016	ಎಪ್ರಿಲ್ 2016	ಮೇ 2015
	ಗ್ರಾ. ನ. ಒಟ್ಟು	ಗ್ರಾ. ನ. ಒಟ್ಟು	ಗ್ರಾ. ನ. ಒಟ್ಟು
ಒಟ್ಟು ಬೆಲೆಗಳು	6.45 4.89 **5.76**	6.17 4.68 5.47	5.52 4.41 5.01
ಆಹಾರಬೆಲೆಗಳು	**7.75** 7.24 **7.55**	6.66 5.97 6.40	4.74 4.84 4.80

ಒಟ್ಟು ಹಣದುಬ್ಬರ ಈ ಒಂದು ವರ್ಷದಲ್ಲಿ 0.75%ದಷ್ಟು ಏರಿದ್ದರೆ, ಆಹಾರ ಪದಾರ್ಥಗಳ ಚಿಲ್ಲರೆ ಬೆಲೆಗಳಲ್ಲಿ ಏರಿಕೆ ಕಳೆದ ಒಂದು ವರ್ಷದಲ್ಲಿ 2.75% ಏರಿಕೆ ಕಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಈ ಏರಿಕೆ ಇನ್ನೂ ಹೆಚ್ಚು, ಸುಮಾರು 3%. ತರಕಾರಿ ಬೆಲೆಗಳ ಸೂಚ್ಯಂಕ 10.77%ವಾದರೆ, ಬೇಳೆ ಕಾಳುಗಳ ಬೆಲೆ ಸೂಚ್ಯಂಕ 31.57%

ಸಗಟು ಬೆಲೆ ಸೂಚ್ಯಂಕ: ಮರುದಿನ, ಅಂದರೆ ಜೂನ್14ರಂದು ಪ್ರಕಟವಾದ ಅಂಕಿ-ಅಂಶಗಳ ಪ್ರಕಾರ ಆಹಾರ ಪದಾರ್ಥಗಳ ಸಗಟು ಬೆಲೆ ಸೂಚ್ಯಂಕ 7.88% ಆಗಿದೆ, ಅಂದರೆ 0.79% ಹೆಚ್ಚಳವಾಗಿದೆ. ಎಪ್ರಿಲ್ ತಿಂಗಳಲ್ಲಿ 0.34% ಏರಿಕೆ ಕಂಡಿತ್ತು.

* ಬೇಳೆ ಕಾಳುಗಳ ಬೆಲೆಗಳಲ್ಲಿ ಏರಿಕೆ: 35.56%
* ತರಕಾರಿಗಳ ಬೆಲೆಗಳಲ್ಲಿ 12.94% ಏರಿಕೆ
* ಆಲೂಗಡ್ಡೆ ಬೆಲೆಗಳಲ್ಲಿ 60.01% ಏರಿಕೆ
* ಸಕ್ಕರೆ ಬೆಲೆಗಳಲ್ಲಿ 22.30% ಏರಿಕೆ.

ಪೆಟ್ರೋಲ್-ಡೀಸೆಲ್ ಬೆಲೆಗಳು:

ಆಹಾರ ಬೆಲೆಯೇರಿಕೆಗಳಿಗೆ ಒಂದು ಕಾರಣ ಡೀಸೆಲ್ ಬೆಲೆಗಳಲ್ಲಿ ಏರಿಕೆ ಎಂದು ಗಮನಕ್ಕೆ ಬಂದಿದ್ದರೂ, ಪ್ರತಿ 15 ದಿನಗಳಿಗೊಮ್ಮೆ ಮಾಡುತ್ತಿರುವ ಬೆಲೆ ವಿಮರ್ಶೆಯಲ್ಲಿ ಈ ಬಾರಿ ಸತತ 8ನೇ ಬಾರಿಗೆ ದರಗಳಲ್ಲಿ ಮತ್ತೆ ಏರಿಕೆ ಮಾಡಲಾಗಿದೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆಗಳು ಸತತವಾಗಿ ಇಳಿಯುತ್ತಿದ್ದಾಗ ಅದರ ಪೂರ್ಣ ಪ್ರಯೋಜನ ಬಳಕೆದಾರರಿಗೆ ಸಿಗದಂತೆ ಈ ಯತ್ಪನ್ನಗಳ ಮೇಲಿನ ಅಬಕಾರಿ ಸುಂಕಗಳನ್ನು ಹೆಚ್ಚಿಸಲಾಯಿತು. ಆದರೆ ಈಗ ಸತತ ಎಂಟನೇ ಬಾರಿ ಬೆಲೆಯೇರಿಕೆ ನಡೆದರೂ, ಆ ಏರಿಸಿದ ತೆರಿಗೆಗಳನ್ನು ಇಳಿಸುವ ಯೋಚನೆಯನ್ನು ಇತ್ತೀಚೆಗೆ ಸರಕಾರದ ವಕ್ತಾರರು ವ್ಯಕ್ತಪಡಿಸಿದ್ದರೂ ಅದನ್ನು ಜಾರಿಗೆ ತರುವ ಯೋಚನೆಗಳೇನೂ ಅದಕ್ಕೆ ಇದ್ದಂತಿಲ್ಲ. ಅವನ್ನೆಲ ಸರಕಾರವೇ ಕಬಳಿಸುತ್ತಿದೆ.

ಬಹುಶಃ ಈ ಬಾರಿ ಉತ್ತಮ ಮಳೆ ಬರುವ ಮುನ್ಸೂಚನೆ ಕೊಟ್ಟಿರುವುದರಿಂದ ಒಳ್ಳೆ ಬೆಳೆ ಬಂದು ಆಹಾರ ಪದಾರ್ಥಗಳ ಬೆಲೆಗಳು ಇಳಿಯಬಹುದು ಎಂಬ ನಿರೀಕ್ಷೆಯನ್ನು ಇಟ್ಟುಕೊಂಡಿರುವ ಸರಕಾರ, ಈ ರೀತಿ ಮತ್ತೆ ಡೀಸೆಲ್-ಪೆಟ್ರೋಲ್ ಬೆಲೆಯೇರಿಕೆ, ಜತೆಗೆ ಜೂನ್ 1 ರಂದ ವಸೂಲಿ ಮಾಡುತ್ತಿರುವ 0.5% 'ಕೃಷಿ ಕಲ್ಯಾಣ ಸೆಸ್' ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹಾಕಿರುವುದರಿಂದ ಇವೂ ಮುಂದಿನ ತಿಂಗಳುಗಳ ಸೂಚ್ಯಂಕಗಳಲ್ಲಿ ಪ್ರಕಟವಾಗಲಿವೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ.

ಈ ನಡುವೆ ಆರ್ಥಿಕ ರಂಗದಲ್ಲಿ ಹಿನ್ನಡೆ ಮುಂದುವರೆಯುತ್ತಲೇ ಇದೆ. ಮೇ ತಿಂಗಳಲ್ಲಿ ಮತ್ತೆ ಒಟ್ಟು ರಫ್ತುಗಳಲ್ಲಿ ಇಳಿಕೆಯಾಗಿದೆ. ಇದು ಸತತ 18ನೇ ತಿಂಗಳ ಇಳಿಕೆ. ಎಪ್ರಿಲ್ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯಲ್ಲಿ 0.8% ಇಳಿಕೆಯಾಗಿದೆ ಎಂದು ಜೂನ್ 10ರಂದು ಪ್ರಕಟವಾದ ಅಂಕಿ-ಅಂಶಗಳು ಹೇಳುತ್ತಿವೆ.

ಈ ಹಿನ್ನೆಲೆಯಲ್ಲಿ ಜಿಡಿಪಿ ಬೆಳವಣಿಗೆ 7.6% ಎನ್ನುವುದು ಕೇವಲ ಅಂಕಿ-ಅಂಶಗಳ ಮಾಯಾಜಾಲ ಎಂಬ ಟೀಕೆ ಅರ್ಥಶಾಸ್ತ್ರದ ಜ್ಞಾನವಿಲ್ಲದವರ ಟಿಪ್ಪಣಿಗಳು ಎಂದು ಯೋಜನಾ ಆಯೋಗವನ್ನು ಕಳಚಿ ಹಾಕಿ ರಚಿಸಿದ 'ನೀತಿ ಆಯೋಗ'ದ ಸದಸ್ಯರೊಬ್ಬರು ಆಲಾಪಿಸುತ್ತಿದ್ದಾರೆ.

2 ವರ್ಷಗಳಲ್ಲಿ 4ನೇ ಅಮೆರಿಕಾ ಯಾತ್ರೆ ದೇಶಕ್ಕೆ ಕೊಟ್ಟಿರುವುದೇನು?

ಗಣೇಶ ಮತ್ತು ಇತರ 12 ಪ್ರಾಚೀನ ಶಿಲ್ಪ ಕೃತಿಗಳು, ಪ್ರತಿಯಾಗಿ ಅಮೆರಿಕಾಕ್ಕೆ ಎರಡು ಗಟ್ಟಿ ಭರವಸೆಗಳು ಎನ್ನುತ್ತಾರೆ ಈ ಹಿಂದೆ ಭಾರತೀಯ ವಿದೇಶಾಂಗ ಸೇವೆಯಲ್ಲಿ ಹಿರಿಯ ಸ್ಥಾನಗಳಲ್ಲಿ ಇದ್ದ, ಎರಡು ದೇಶಗಳಿಗೆ ರಾಯಭಾರಿಯೂ ಆಗಿದ್ದ ವಿದೇಶಾಂಗ ಧೋರಣೆಗಳ ಪರಿಣಿತ ಎಂ.ಕೆ.ಭದ್ರಕುಮಾರ್.

ಭಾರತದಿಂದ ಕಳ್ಳತನದಿಂದ ಸಾಗಿಸಲ್ಪಟ್ಟ ಗಣೇಶನ ಮೂರ್ತಿ ಮತ್ತು ಚೋಳಕಾಲದ ಶಿಲ್ಪಗಳೂ ಸೇರಿದಂತೆ ಇನ್ನೂ 12 ಶಿಲ್ಪ ಕೃತಿಗಳನ್ನು ವಾಶಿಂಗ್ಟನ್‌ನಲ್ಲಿ ಒಂದು ಗಂಭೀರ 'ಪ್ರಾಯಶ್ಚಿತ್ತ' ಸಮಾರಂಭದಲ್ಲಿ ಭಾರತಕ್ಕೆ ಒಪ್ಪಿಸಲಾಯಿತು. ಆದರೆ ಭೇಟಿಯ ಕೊನೆಯಲ್ಲಿ ಹೊರಡಿಸಿದ 3785 ಪದಗಳ ಜಂಟಿ ಹೇಳಿಕೆಯಲ್ಲಿ ಈ ಬಗ್ಗೆಯೇನೂ ಪ್ರಸ್ತಾಪವಿಲ್ಲ.

ಹಾಗಿದ್ದರೆ ಭಾರತಕ್ಕೆ ಈ ಜಂಟಿ ಹೇಳಿಕೆಯಲ್ಲಿ ಏನಿದೆ? ಭದ್ರಕುಮಾರ್. ಪ್ರಕಾರ ಈ ಪ್ರಶ್ನೆಗೆ ಒಂದು ಸಂಕ್ಷಿಪ್ತ ಉತ್ತರ-ಇದೊಂದು ಅತ್ಯಂತ ನಿರಾಶಾದಾಯಕ ಭೇಟಿ.

ಮೋದಿಯವರ ಅಧಿಕೃತ ಮಾತುಕತೆಗಳ ಒತ್ತು ಇದ್ದದ್ದು ಎರಡು ವಿಷಯಗಳ ಮೇಲೆ ಎನ್ನುತ್ತಾರೆ ಅವರು. ಇವರಡೂ ಅಮೆರಿಕಾಕ್ಕೇ ಹೆಚ್ಚು ಪ್ರಯೋಜನಕಾರಿಯಾದವುಗಳು

1. ಅಮೆರಿಕನ್ ಕಂಪನಿಗಳಿಗೆ ಭಾರತದಲ್ಲಿ ಮಾರುಕಟ್ಟೆಯ ಲಭ್ಯತೆ ಮತ್ತು ಸುಧಾರಣೆಗಳು 2. ಭಾರತಕ್ಕೆ ಶಸ್ತ್ರಾಸ್ತ್ರಗಳ ಮಾರಾಟ.

ಉಳಿದವೆಲ್ಲ ಸೈಡ್‌ಶೋಗಳಷ್ಟೇ ಅಂತೆ.

ಭಾರತಕ್ಕೆ 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಸ್ಥಾನಮಾನ ಕೊಡಲಾಗಿದೆ. ಇದರ ಅರ್ಥ ಅಮೆರಿಕನ್ ಶಸ್ತ್ರಾಸ್ತ್ರಗಳು ಮತ್ತು ತಂತ್ರಜ್ಞಾನದ ಖರೀದಿಯಲ್ಲಿ ಇತರ ಅಮೆರಿಕನ್ ಮಿತ್ರ ದೇಶಗಳಂತಹ ಆದ್ಯತೆ ಸಿಗುತ್ತದೆ.



ವ್ಯಂಗ್ಯಚಿತ್ರ: ಅಡ್ವ್ಯೂರ್, ಟೈಮ್ಸ್ ಆಫ್ ಇಂಡಿಯಾ

ಅಂದರೆ ಭಾರತಕ್ಕೆ ಅನುಕೂಲಕರವಾದ ಬೆಲೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಕೊಡಲಾಗುತ್ತದೆಯೇ? ಇಲ್ಲ.


ಮಿಲಿಟರಿ ತಂತ್ರಜ್ಞಾನದ ವರ್ಗಾವಣೆಯಾಗುತ್ತದೆಯೇ?

ಅದೂ ಇಲ್ಲ ಎನ್ನುತ್ತಾರೆ ಭದ್ರಕುಮಾರ್. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒಟ್ಟಿಗೇ ರೂಪಿಸುವ, ಒಟ್ಟಿಗೇ ತಯಾರಿಸುವ ಮಾತುಗಳೆಲ್ಲ ಇದುವರೆಗೆ ಕೇವಲ ಮಾತುಗಳೇ ಆಗಿ ಉಳಿದಿವೆ. ಈ ವಿಷಯದಲ್ಲಿ ಅದರ ಘನಿಷ್ಟ ನಾಟೋ ಮಿತ್ರರೊಂದಿಗಿನ ಅನುಭವ ಅತ್ಯಂತ ಕೆಟ್ಟದಾಗಿದೆ.


ಇನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ಪರಮಾಣು ಪೂರೈಕೆದಾರರ ಗುಂಪು(ಎನ್‌ಎಸ್‌ಜಿ) ಮತ್ತು ಅಪೆಕ್‌ಗಳಲ್ಲಿ ಭಾರತದ ಪ್ರವೇಶಕ್ಕೆ ಬೆಂಬಲ ಹೊಸದೇನಲ್ಲ. ಇದರರ್ಥ ಅಮೆರಿಕಾ ಈ ಸಂಘಟನೆಗಳಲ್ಲಿ ಭಾರತದ ಸದಸ್ಯತ್ವಕ್ಕೆ ಅಡ್ಡಿಯಾಗುವುದಿಲ್ಲ ಎಂದಷ್ಟೇ. ಆದರೆ ಪ್ರವೇಶ ದೊರಕಿಸಿಕೊಡಲು ಅದಕ್ಕೆ ಸಾಧ್ಯವೂ ಇಲ್ಲ(ಅಥವ ಆಶಯವೂ ಇಲ್ಲ) ಎಂದು ಭದ್ರಕುಮಾರ್ ವಿಶ್ಲೇಷಿಸುತ್ತಾರೆ. ಈಗಿನ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಇವೆಲ್ಲ ಭಾರತ ಮತ್ತು ಚೀನಾದ ನಡುವಿನ ಸಂವಾದಗಳ ಗುಣಮಟ್ಟವನ್ನೇ ಅವಲಂಬಿಸಿದೆ ಎಂದು ಅವರು ಹೇಳುತ್ತಾರೆ.

ಎಂಟಿಸಿಆರ್, ಅಂದರೆ ಕ್ಷಿಪಣಿ ತಂತ್ರಜ್ಞಾನ ಹತೋಟಿ ವ್ಯವಸ್ಥೆಗೆ ಭಾರತಕ್ಕೆ ಪ್ರವೇಶ ಸಿಕ್ಕಿರುವುದು ಈ ಅಮೆರಿಕಾ ಯಾತ್ರೆಯಿಂದಾಗಿ ಎಂದು ಕಾರ್ಪೊರೇಟ್ ಪತ್ರಿಕೆಗಳು ಬಿಂಬಿಸುತ್ತಿವೆ. ಆದರೆ ವಾಸ್ತವವಾಗಿ ಇದು ಸಾಧ್ಯವಾಗಿರುವುದು ಇಟೆಲಿ ತನ್ನ ಆಕ್ಷೇಪವನ್ನು ಹಿಂತೆಗೆದುಕೊಂಡದ್ದರಿಂದ. ಭಾರತದಲ್ಲಿ ಕೊಲೆ ವಿಚಾರಣೆಗೊಳಪಟ್ಟಿದ್ದ ಇಬ್ಬರು ಇಟಾಲಿಯನ್ ನಾವಿಕರನ್ನು ಬಿಡುಗಡೆ ಮಾಡಿದ್ದರಿಂದಷ್ಟೇ ಅದು ತನ್ನ ಆಕ್ಷೇಪವನ್ನು ಹಿಂತೆದುಕೊಂಡಿತು ಎಂದು ಭದ್ರಕುಮಾರ್ ಹೇಳುತ್ತಾರೆ.

ಅಮೆರಿಕಾಕ್ಕೆ ಮೋದಿಯವರ ಈ ನಾಲ್ಕನೇ ಯಾತ್ರೆಯ ವೆಚ್ಚ ರೂ.2.8ಲಕ್ಷ ಕೋಟಿ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ. ಅಮೆರಿಕಾದ ವೆಸ್ಟಿಂಗ್‌ಹೌಸ್ ಕಂಪನಿಯ ಆರು ಪರಮಾಣು ರಿಯಾಕ್ಟರುಗಳನ್ನು ಪಡೆಯಲು ಅಮೆರಿಕಾ ಒಪ್ಪಿದೆ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ ವಾಸ್ತವವಾಗಿ ಆರ್ಡರ್ ಇಲ್ಲದೆ ನಲುಗುತ್ತಿರುವ ಈ ಕಂಪನಿಯ 6 ರಿಯಾಕ್ಟರುಗಳನ್ನು ಖರೀದಿಸಲು ಭಾರತ ಒಪ್ಪಿ ಅದಕ್ಕೆ ಜೀವದಾನ ಮಾಡುತ್ತಿದೆ ಎನ್ನುತ್ತಾರೆ ಪುರಕಾಯಸ್ಥ. ಇದಕ್ಕೆ ಭಾರತ ತೆರಬೇಕಾದ ಬೆಲೆ ರೂ.2.8ಲಕ್ಷ ಕೋಟಿ ಅಗುತ್ತದಂತೆ.



ಕಳೆದ ಕೆಲವು ವಾರಗಳಿಂದ 'ಕೇಂದ್ರೀಯ ಫಿಲ್ಮ್ ಪ್ರಮಾಣ ಪತ್ರ ಮಂಡಳಿ'(ಸಿಬಿಎಫ್‌ಸಿ)ಯ ಅಧ್ಯಕ್ಷ, ಮೋದಿಯವರ ಸ್ವಯಂಘೋಷಿತ 'ಚಮಚಾ' ಪಂಕಜ್ ನಿಹ್ಲಾನಿ ಮತ್ತೆ ಸುದ್ದಿಯಲ್ಲಿದ್ದಾರೆ. ಪಂಜಾಬಿನ ಮಾದಕ ದ್ರವ್ಯಗಳ ಸಮಸ್ಯೆಯನ್ನು ಬಿಂಬಿಸುವ ಚಿತ್ರ 'ಉಡ್ತಾ ಪಂಜಾಬ್'ನ ಹೆಸರಿನಲ್ಲಿ ಪಂಜಾಬ್ ಕೈಬಿಡಬೇಕು ಎಂದು ಸೇರಿದಂತೆ 89 'ಕಟ್'ಗಳನ್ನು ಮಾಡಿದ್ದರ ವಿರುದ್ಧ ಚಿತ್ರದ ನಿರ್ಮಾಪಕರು ಮುಂಬೈ ಹೈಕೋರ್ಟ್ ಮೆಟ್ಟಿಲು ಹತ್ತಬೇಕಾಯಿತು. ಹೈಕೋರ್ಟ್ ತೀರ್ಪು ನೀಡುವ ಸ್ವಲ್ಪವೇ ಮೊದಲು ಈ ಕಟ್‌ಗಳ ಸಂಖ್ಯೆಯನ್ನು 13ಕ್ಕೆ ಇಳಿಸಲಾಯಿತು. ಆದರೆ ಹೈಕೋರ್ಟ್ ಕೇವಲ ಒಂದು ಕಟ್‌ನೊಂದಿಗೆ ಈ ಚಿತ್ರಕ್ಕೆ ನಿರ್ಮಾಪಕರು ಕೇಳಿರುವಂತೆ 'ಎ' ಪ್ರಮಾಣ ಪತ್ರ ನೀಡಬೇಕು ಎಂದು ಆದೇಶಿಸಿದೆ. ಇದು ನಿಹ್ಲಾನಿಗೆ ಮಾತ್ರವಲ್ಲ, ಸಕಲ ವಿರೋಧಗಳ ನಡುವೆ ಅವರನ್ನು ನೇಮಿಸಿದ 'ಅಚ್ಛೇ ದಿನ್' ಸರಕಾರದ ಕಪಾಳಕ್ಕೂ ಕೋರ್ಟಿನ ಮತ್ತೊಂದು ಏಟು ಎಂದು ಹೇಳಲಾಗುತ್ತಿದೆ-ಸುದ್ದಿ



ವ್ಯಂಗ್ಯ ಚಿತ್ರ ಕೃಪೆ: ಸತೀಶ್ ಆಚಾರ್ಯ

'ಜವಾಬ್ದಾರಿ' ನಿರ್ವಹಿಸುತ್ತಿದ್ದಾರೆ, ಸ್ವಾಮಿ!

'ಉಡ್ತಾ ಪಂಜಾಬ್' ಪ್ರಕರಣದಲ್ಲಿ ಕೋರ್ಟಿನ ಚಾಟಿಯೇಟು ತಿಂದ ಸಿಬಿಎಫ್‌ಸಿ ಅಧ್ಯಕ್ಷರು ತಾನು ತನ್ನ ಜವಾಬ್ದಾರಿ ನಿರ್ವಹಿಸಿರುವುದಾಗಿ ಹೇಳಿದ್ದಾರೆ. ಬಹುಶಃ ಅವರು ನಿಜವೇ ಹೇಳುತ್ತಿದ್ದಾರೆ. ಈ ಎರಡು ವರ್ಷ ''ಅಚ್ಛೇ ದಿನ್'ಗಳನ್ನು ಕಂಡಿರುವುದು ವಿವಿಧ ಸರಕಾರೀ ಪೋಷಿತ ಸಂಸ್ಥೆಗಳಿಗೆ ಮುಖ್ಯಸ್ಥರಾಗಿ ನೇಮಿಸಲ್ಪಟ್ಟ ಇಂತವರೇ ಎಂದು ಈಗ ಎಲ್ಲರೂ ಹೇಳುವಂತಾಗಿದೆ. ಅವರನ್ನೆಲ್ಲ ನೇಮಿಸಿದ್ದೇ ಇಂತಹ 'ಜವಾಬ್ದಾರಿ'ಗಳನ್ನು ಈಡೇರಿಸಲು. 'ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ'(ಐಜಿಎನ್‌ಸಿಎ)ಕ್ಕೆ ಅಧ್ಯಕ್ಷರಾಗಿ ನೇಮಿತರಾಗಿರುವ ರಾಂ ಬಹದ್ದೂರ್ ರಾಯ್ ಇದಕ್ಕೆ ಇತ್ತೀಚಿನ ಉದಾಹರಣೆ.

ಈತ ಮಾಜಿ ಪತ್ರಕರ್ತ ಮತ್ತು ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿಯ ಪ್ರಧಾನ ಕಾರ್ಯದರ್ಶಿಯಾಗಿದ್ದವರು. ಇವರು ಇತ್ತೀಚೆಗೆ 'ಔಟ್‌ಲುಕ್' ಮ್ಯಾಗಝಿನ್‌ಗೆ ನೀಡಿದ ಸಂದರ್ಶನದಲ್ಲಿ ಡಾ. ಅಂಬೇಡ್ಕರ್ ಬಗ್ಗೆ ಹೇಳಿರುವ ಮಾತುಗಳು ಅಂಬೇಡ್ಕರ್ ಅವರನ್ನು 'ಸ್ವಾಧೀನ' ಪಡಿಸಿಕೊಳ್ಳಲು ಹೆಣಗುತ್ತಿರುವ ಆಳುವ ಪಕ್ಷಕ್ಕೆ ಮುಜುಗರ ಉಂಟು ಮಾಡಿದೆ. ಸಂವಿಧಾನ ಬರೆದದ್ದು ಅಂಬೇಡ್ಕರ್ ಅಲ್ಲ, ಬಿ.ಎನ್. ರಾವು ಏನೇನೆಲ್ಲ ಕೊಟ್ಟರೋ ಅದರ ಭಾಷೆಯನ್ನು ಸರಿಪಡಿಸಿ ಪ್ರಸ್ತುತ ಪಡಿಸಿದರಷ್ಟೇ ಎಂದು ಈ ಸಂದರ್ಶನದಲ್ಲಿ ಅವರು ಹೇಳಿದ್ದಾರೆ. ಅದು ಗುಪ್ತಚರ ಸಂಘಟನೆ 'ರಾ' (ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್) ಕೊಡುವ ಹರಕು ಮುರುಕು ಇಂಗ್ಲೀಷಿನಲ್ಲಿರುವ ವರದಿಗಳನ್ನು ಐಪಿಎಸ್ ಅಧಿಕಾರಿಗಳು ಸರಿಯಾದ ಇಂಗ್ಲೀಷಿಗೆ ತಿದ್ದಿ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದಂತೆ ಎಂದು ಅದಕ್ಕೆ ವಿವರಣೆಯನ್ನೂ ಕೊಟ್ಟಿದ್ದಾರೆ!

ಎಂದಿನಂತೆ ಇವು ಟಿಪಿಕಲ್ ಕೇಸರಿ ಅರೆಸತ್ಯಗಳಿಂದ ಕೂಡಿದ ಅಭಿಪ್ರಾಯ ಎಂಬುದು ಸ್ಪಷ್ಟ. ಆದರೆ ಇದರಿಂದ ಮುಜುಗರಕ್ಕೊಳಗಾದ ಬಿಜೆಪಿ ಶೆಡ್ಯೂಲ್ಡ್ ಕಾಸ್ಟ್ ಮೋರ್ಚಾದ ಮುಖಂಡರು ಇತರ ಬಿಜೆಪಿ ಮುಖಂಡರಂತೆ 'ವೈಯಕ್ತಿಕ ಅಭಿಪ್ರಾಯ' ಎಂದು ಸುಮ್ಮನೇ ಕೂರುವಂತಿರಲಿಲ್ಲ. "ರಾಯ್ ಅವರ ಅಭಿಪ್ರಾಯ ಅಂಬೇಡ್ಕರ್ ಬಗ್ಗೆ ಅವರಲ್ಲಿನ ತಿಳುವಳಿಕೆಯ ಅಭಾವವನ್ನು ತೋರಿಸುತ್ತದೆ, ಜತೆಗೆ ಪಿತೂರಿಯ ವಾಸನೆಯೂ ಹೊಡೆಯುತ್ತಿದೆ ಎಂದು ಈ ಮೋರ್ಚಾದ ಮುಖ್ಯಸ್ಥ ದುಷ್ಯಂತ ಕುಮಾರ್ ಗೌತಮ್ ಹೇಳಿದ್ದಾರೆ. ಪಿತೂರಿ ಯಾರದ್ದು ಒಳಗಿನರದ್ದೋ, ಹೊರಗಿನವರದ್ದೋ ಅವರಿಗೂ ತಿಳಿದಂತಿಲ್ಲ. ರಾಯ್ ಒಬ್ಬ ಪ್ರಮುಖ ಚಿಂತಕ ಎಂದು ಸಂಘ ಪರಿವಾರದಲ್ಲಿ ಪರಿಗಣಿಸಲ್ಪಡುತ್ತಿದ್ದಾರೆ ಎಂಬುದನ್ನು ಗಮನಿಸಬೇಕು.

ಅದಿರಲಿ, ರಾಯ್ ಅವರು ಭಾರತೀಯ ಕಲೆಗಳ ಅಧ್ಯಯನಕ್ಕೆಂದು ಸ್ಥಾಪಿಸಿರುವ ಈ ರಾಷ್ಟ್ರೀಯ ಕಲಾಕೇಂದ್ರದ ಮುಖ್ಯಸ್ಥರಾದ ಮೇಲೆ ಇದುವರೆಗಿನ ಸಾಧನೆಯೇನು? ಅದನ್ನು ಆರೆಸ್ಸೆಸ್ ಮುಖ್ಯಕಚೇರಿಯ ಬಡಾವಣೆಯಾಗಿ ಮಾಡಿದ್ದು ಎಂದು ಈ ಸಂಸ್ಥೆಯ ಒಬ್ಬ ಹಿರಿಯ ಅಧಿಕಾರಿ ಹೇಳಿರುವುದಾಗಿ ಪ್ರಖ್ಯಾತ ಪತ್ರಕರ್ತ ಧೀರೇಂದ್ರ ಕೆ ಝಾ (ಸ್ಕ್ರಾಲ್.ಇನ್, ಜೂನ್ 9)ಹೇಳಿದ್ದಾರೆ. ಕೇವಲ ಕಳೆದ 10 ದಿನಗಳಲ್ಲಿ ಕಲೆಗೆ ಯಾವುದೇ ರೀತಿಯಲ್ಲಿ ಸಂಬಂಧಪಡದ 3 ಆರೆಸಸ್ಸೆಸ್ ಸಂಘಟನೆಗಳ ಅಧಿಕೃತ ಸಭೆಗಳು, 4 ಹಿರಿಯ ಆರೆಸ್ಸೆಸ್ಸಿಗರ ಅನೌಪಚಾರಿಕ ಚರ್ಚೆಗಳು ಇಲ್ಲಿ ನಡೆದಿವೆ ಎಂದು ಝಾ ಬರೆದಿದ್ದಾರೆ. ನಿಜ, ನಿಹ್ಲಾನಿಯಂತೆ ರಾಯ್ ಕೂಡ ತಮಗೆ ವಹಿಸಿದ ಹೊಣೆಯನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದಾರೆ!

ತ್ರಿ' ಕರಣಗಳ 25 ವರ್ಷಗಳು

○ ಕೆ.ಈ.ಸಿದ್ದಯ್ಯ

ಪ್ರಕಾಶ ... ವಿಕಾಸ... ವಿನಾಶ... ಭಾರತ....



ಜಾಗತಿಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹೆಬ್ಬಾಗಿಲು ತೆರೆದು 25 ವರ್ಷಗಳು ಪೂರೈಸಿದೆ. ಇಂತಹ ಹೊತ್ತಿನಲ್ಲಿ ಕ್ಷಣಮಾತ್ರದಲ್ಲಿ ಒಮ್ಮೆ ತಿರುಗಿ ನೋಡಿದರೆ ನಮ್ಮ ಕಣ್ಣ ಮುಂದೆ, ಲಾಭಕ್ಕಿಂತ ನಷ್ಟ, ನಷ್ಟಕ್ಕಿಂತ ಸಂಕಷ್ಟ, ಸವಾಲುಗಳು ಎದುರಾಗಿರುವುದು ಎದ್ದುಕಾಣುತ್ತಿದೆ.

ಊರಿಗೆ ಹೋದವನು ಹಾಗೆಯೇ ಹೊಲದಕಡೆ ಹೋಗಿ ನೋಡಿಕೊಂಡು ಬರೋಣವೆಂದು ಹೊರಟೆ. ಗುಡಿಸಲು ಮನೆಯಿಂದ ಹೊರಟಾಗ ಹಳೆಯ ನೆನಪುಗಳು ಬಿಚ್ಚಿಕೊಳ್ಳತೊಡಗಿದವು. ಗುಡಿಸಲು ಮನೆಯ ಮುಂದೆ ಒಂದು ಸಣ್ಣ ಓಣಿ.ಆ ಓಣಿ ಸವಳಕ್ಕೆ ಬಿದ್ದು ಸಣ್ಣದಾಗಿ ಹರಿಯುತ್ತಿದ್ದ ನೀರು. ಆ ನೀರಿಗೆ ಮಣ್ಣಿನ ಕಟ್ಟೆ ಕಟ್ಟಿ ಕೋಡಿ ಮಾಡಿ ಆಟವಾಡುತ್ತಿದ್ದಾಗ ನಮ್ಮೂರ ಕೆರೆಯಿಂದ ಬೆಂಕಿಕಡ್ಡಿ ಗಾತ್ರದ ಮೀನುಗಳು ನೀರಿನಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಹಿಡಿಯಲು ಹೋದರೆ ಕೈಗೆ ಸಿಗದಂತೆ ಬುಳುಬುಳನೆ ಹರಿದು ಹೋಗುತ್ತಿದ್ದವು. ಬೆಂಕಿಕಡ್ಡಿ ಮೀನು ಹಿಡಿಯುವ ಭರದಲ್ಲಿ ನೀರಿಗೆ ಬಿಚ್ಚಿ ಇಡೀ ಅಂಗಿ ನೀರಿನಲ್ಲಿ ನೆಂದು ಹೋಗುತ್ತಿತ್ತು. ಆಗೊಮ್ಮೆ ಈಗೊಮ್ಮೆ ಏಡಿ(ಎಂಡ್ರಿಕಾಯಿ)ಗಳು ಮರಿ ಏಡಿಗಳು ಕಾಣಿಸಿಕೊಳ್ಳುತ್ತಿದ್ದವು. ಅವುಗಳನ್ನು ಹಿಡಿದು ಸುಟ್ಟು ಬಾಯಿಯಲ್ಲಿ ಹಾಕಿಕೊಂಡು ಹಲ್ಲಿನಿಂದ ಕಟಿಕಟಿಯೆಂದು ಕಡಿದು ತಿನ್ನುತ್ತಿದ್ದೆವು. ಓಣಿಯ ಬೇಲಿಯಲ್ಲಿ ತುಗ್ಗಲಿ, ಬೇವು, ಜಾಲಿ, ಗೋಣಿ, ಅಡವಳಸು(ಸೀತಾಫಲ), ಬಂಡ್ರೆ ಗಿಡಗಳು ಇದ್ದವು. ಆದರೆ ಇಂದು ಓಣಿಯೂ ಇಲ್ಲ, ಸವಳ್ಳವೂ ಹರಿಯುತ್ತಿಲ್ಲ. ಗಿಡಮರಗಳು ಇಲ್ಲ, ಮನೆಯ ಸುತ್ತ ಕಟ್ಟಿಗೆಗಳ ರಾಶಿ ಹಾಕಿ ನಮ್ಮನ್ನು ಗುಡಿಸಲು ಮನೆಯಿಂದಲೇ ನೆಲೆಯಿಲ್ಲದಂತೆ ಮಾಡುವ ಜಾತಿಯ ಬಲಾಢ್ಯರ ಹುನ್ನಾರನ್ನು ನೆನೆದು ಬೇಸರವಾಯಿತು.

ದಾರಿಯಲ್ಲಿ ಹೋಗುತ್ತಿರುವ ಸಮಯದಲ್ಲಿ ಬಾಲ್ಯದ ಗೆಳೆಯರು ಸಿಕ್ಕಿದರು. ಮಾತನಾಡಿಸಿ ಹೊಲದ ಕಡೆ ಹೋದೆ. ಒಂದು ಕಿಲೋ ಮೀಟರ್ ದೂರದ ಹೊಲದ ಬಳಿಗೆ ಹೋಗುವ ಹೊತ್ತಿಗೆ ಬಿಸಿಲಿನ ಝಳಕ್ಕೆ ಬೆವರಿಳಿದು ಹೋದೆ. ಹೊಲದ ಮುಖ ನೋಡಿ ಹದಿನೈದಕ್ಕೂ ಹೆಚ್ಚು ವರ್ಷವಾಗಿತ್ತು. ಹಲವು ಬಾರಿಗೆ ಊರಿಗೆ ಹೋದರೂ ಮನೆಯಲ್ಲೇ ಇದ್ದು ಬರುತ್ತಿದ್ದೆ. ಆದರೆ ಅದ್ಯಾಕೋ ಈ ಬಾರಿ ಹೊಲವನ್ನು ನೋಡಬೇಕು ಎಂದು ಹೊರಟಾಗ ಹೊಸಕಟ್ಟೆಯ ಮೇಲಿಂದ ಸೀಳುದಾರಿಯಲ್ಲಿ ನಡೆಯುತ್ತಾ ಹೋದೆ. ಎಲ್ಲಿ ನೋಡಿದರೂ ಬಟಾ ಬಯಲು, ಯಾವ ಹೊಂಗೆಯೂ ಇಲ್ಲ. ಹೊಂಗೆಯ ಸಾಲುಗಳು ಕಾಣುತ್ತಿಲ್ಲ. ಬೇವು, ಮಾವು, ಜಾಲಿ, ಅತ್ತಿತುಗ್ಗಲಿ ಮರಗಳು ಇಲ್ಲ. ಎಲ್ಲಕಡೆಯೂ ಬೆಂಗಾಡು. ಹಿಂದೆ ಇದೇ ದಾರಿಯಲ್ಲಿ ಹೋಗುತ್ತಿದ್ದರೆ, ಹೊಂಗೆಯ ತರಗಿನಲ್ಲಿ ಹಾವು, ಇಲಿ, ಜಿಟ್ಟೆ, ಮುಂಗುಸಿ ಸೇರಿದಂತೆ ಯಾವುದೋ ಹುಳಹುಪ್ಪಟೆಗಳು ಹರಿದ ಸದ್ದು ಕೇಳಿ ಭಯವಾಗುತ್ತಿತ್ತು. ಆದರೆ ಈಗ ಏನೂ ಇಲ್ಲ. ಬಿಸಿ ಗಾಳಿ ಅಲ್ಲೊಂದು ಇಲ್ಲೊಂದು ಕಾಣುವ ಹುಣಿಸೆ ಮರಗಳು ಬಿಟ್ಟರೆ, ದಿಣ್ಣೆಗಳಲ್ಲಿ ಬೋರ್ ಕೊರೆಸಿ ಕಂಬಳಿ ಅಗಲ ಹಸಿರು ಮಾಡಿಕೊಂಡಿರುವುದನ್ನು ಬಿಟ್ಟರೆ ಹಸಿರೆಂಬ ಉಸಿರು ಇಲ್ಲದೆ ದೊಡ್ಡದಾಗಿ ಉಸಿರು ಬಿಡುತ್ತ ಭಾರವಾದ ಹೆಜ್ಜೆ ಹಾಕುತ್ತ ಬಾಲಪ್ಪಕುಂಟೆ ದಾಟಿ, ನಾಯಕನಕುಂಟೆ ಹೋದೆ.

ಹಳ್ಳಗಳು ಮೂರ್‍ನಾಲ್ಕು ಮಟ್ಟು ಆಳವಿದ್ದವು. ಸಾರ ಕಳೆದುಕೊಂಡ ಭೂಮಿ, ಹುಲ್ಲುಕಡ್ಡಿಯೂ ಕಾಣದ ಬರಡು ಭೂಮಿ. ನಿಂತುಕೊಳ್ಳಲು ಒಂದು ಗಿಡವೂ ಇಲ್ಲ. ಮಡಿಕೆ(ನೇಗಿಲು) ಹೊಡೆದ ಸಾಲುಗಳು ಕಾಣದಂತೆ ಬೇಸಾಯ ಮಾಡಿ ಎಷ್ಟು ವರ್ಷವೂ ಕಳೆದು ಹೋಗಿದೆ ಎಂಬಂತೆ ನಮ್ಮ ಜಮೀನು ಕಾಣುತ್ತಿತ್ತು. ಹೊಲದಲ್ಲಿ ಎರಡುಕಡೆ ಬಂಡಿ ಜಾಡುಗಳು ಗೆರೆಯಂತೆ ಮೂಡಿರುವುದು ಬಿಟ್ಟರೆ ಏನೂ ಇರಲಿಲ್ಲ. ಎಲ್ಲಿಯೂ ಗೆದ್ದಲು ಹುಳುಗಳು ಕಂಡು ಬರಲಿಲ್ಲ. ಸಣ್ಣ, ಅತಿಸಣ್ಣ ರೈತರ ಜಮೀನುಗಳೆಲ್ಲವೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಹತ್ತಾರು ಎಕರೆ ಹೊಂದಿದ್ದರೂ ಅವರ ಜಮೀನುಗಳು ಕೆಂಡಕಾರುತ್ತಿದ್ದವು. ಮೊದಲಿನಂತೆ ಹಳ್ಳದ ಆಚೆಯ ಜಮೀನು ನೋಡಲು ಕಾಣುತ್ತಿರಲಿಲ್ಲ. ರಾಯಕ್ಕನ ಮಠ, ಸೊಳಿಬೋದು ಎಲ್ಲವೂ ನಿಂತ ಜಾಗದಿಂದಲೇ ನೋಡುವಂತಿತ್ತು. ಎಲ್ಲವನ್ನು ನೆನೆದು ರೈತರ ಪಾಡು ಏನು ಎಂದು ಯೋಚಿಸುತ್ತ ಮನೆಯ ಕಡೆ ಮರಳಿದೆ.

ಯಾಕೋ ಮನಸ್ಸಿಗೆ ಸಮಾಧಾನವಾಗಲಿಲ್ಲ. ಜಮೀನು ನೋಡಿ ನೋವಾಯಿತು. ನನ್ನ ಮಾವನನ್ನು ರಪರಪನೆ ಮಡಿಕೆ(ನೇಗಿಲು), ಕುಂಟೆ, ಮುಗ್ಗೂರಿಗೆ ಹೊಡೆದುಕೊಂಡು ಬರುವಂತೆ ಗೋಳು ಹೋಯ್ದುಕೊಳ್ಳುತ್ತಿದ್ದ ನೆನಪುಗಳು ಬಂದು ಹೋದವು. ರಣರಣ ಬಿಸಿಲು ನೆತ್ತಿಯ ಮೇಲೆ ಉರಿದು ಬೀಳುತ್ತಿತ್ತು. ಬಿಸಿಲಿನ ಅಲೆಗಳು ದಿನ್ನೆಯಲ್ಲಿ ಕುಣಿಯುತ್ತ ಹೋದಂತೆಕಂಡು ಬರುತ್ತಿತ್ತು. ಇದೆಲ್ಲವೂ ನಿಜ ಎಂದು ನಮ್ಮ ಹೊಲದಿಂದ ಸ್ವಲ್ಪದೂರು ವಾಪಸ್ಸು ಬಂದು ಹುಣಿಸೆ ಮರದ ನೆರಳಿನಲ್ಲಿ ಕುಳಿತೆ. ಇಬ್ಬರು ಸಣ್ಣರೈತರು (ಹೆಸರು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದೇನೆ.), ಕುರಿಗಾಹಿಗಳು ಅಲ್ಲಿಗೆ ಬಂದು ಕೂತು ಮಾತಿಗೆ ಆರಂಭಿಸಿದರು. ಯಾರ ಮಾತು ಕೇಳುವುದು ಯಾರ ಮಾತು ಬಿಡುವುದು ಎನ್ನುವಂತಾಯಿತು.

ಕೊನೆಗೆ ಕುರಿಗಾಹಿಗಳು ಮಾತು ನಿಲ್ಲಿಸಿ ಕುರಿಗಳು ಹೋದವೆಂದು ಅವರು ಅಲ್ಲಿಂದ ಎದ್ದು ಹೋದರು. ಹೋಗುವಾಗ ಇಂಥಾ ಬಿಸಿಲು ಎಂದೂ ನೋಡಿರಲಿಲ್ಲ ಎಂದು ನಿಟ್ಟುಸಿರು ಬಿಟ್ಟು ನೆಲದ ಮೇಲೆ ಹಾಕಿದ್ದ ವಲ್ಲಿಬಟ್ಟೆ ಕೊಡವಿಕೊಂಡು ಎದ್ದು ಹೊರಟು ಹೋದರು. ಹುಲ್ಲು ನೀರಿಲ್ಲದೆ ಕುರಿಗಳು ಬಡಕಲಾಗಿದ್ದವು. ನೀರಿಗಾಗಿ ಗಾವುದ ದೂರ ಹೋಗಬೇಕಪ್ಪ, ಇಲ್ಲೆಲ್ಲೂ ನೀರು ಸಿಗೊಲ್ಲ, ಮೇವು ಇಲ್ಲ ಜನ ಕೆಟ್ಟೋದಂಗೆ ಕಾಲನೂ ಕೆಟ್ಟೋಯ್ತು ಎಂದು ಮಾತನಾಡಿ ಕೊಂಡಿದ್ದು ಕೇಳಿಸಿತ್ತು.

ಇಪ್ಪತ್ತೈದು ವರ್ಷಗಳಲ್ಲಿ

ನಾನು ಕಂಡಂತೆ ಇಪ್ಪತ್ತೈದು ವರ್ಷಗಳ ಹಿಂದೆ ಘನವಾದ ಮಳೆ ಬಿದ್ದಿತ್ತು. ಬಹುತೇಕ ಕೆರೆಗಳು ಕೋಡಿ ಹರಿದಿದ್ದವು. ಹಳ್ಳಗಳಲ್ಲಿ ನೀರು ಸಣ್ಣದಾಗಿ ವರ್ಷ ಕಾಲ ಹರಿದಿತ್ತು. ಆ ಮಳೆ ಇತ್ತೀಚೆಗೆ ಬಿದ್ದಿಲ್ಲ. ಮಳೆ ಇಲ್ಲದೆ ಬೆಳೆಯೂ ಇಲ್ಲ. ಬೆಳೆ ಇಲ್ಲದೆ ರೈತರ ಕೈಯಲ್ಲಿ ಕಾಸು ಓಡಾಡುತ್ತಿಲ್ಲ. ಮಳೆಯಿಲ್ಲದೆ ಹಸಿರು ಇಲ್ಲ, ಅಂತರ್ಜಲವೂ ಬತ್ತಿ ಹೋಗಿದೆ. ಸಾವಿರ ಅಡಿ ಕೊರೆದರೂ ನೀರಿನ ಸೆಲೆಯೇ ಕಾಣುತ್ತಿಲ್ಲ. ಇದ್ದಬದ್ದ ನೀರಾವರಿ ಬೆಳೆಗಳೆಲ್ಲವೂ ಒಣಗಿ ಹೋಗಿವೆ. ಎಲ್ಲೋ ಒಬ್ಬಿಬ್ಬರು ದೊಡ್ಡ ರೈತರು ತೋಟ ತುಡಿಕೆ ಇಟ್ಟುಕೊಂಡಿದ್ದಾರೆ. ಇನ್ನುಳಿದಂತೆ ಯಾವ ರೈತರೂ ನೆಮ್ಮದಿಯಿಂದ ಜೀವನ ನಡೆಸದ ಪರಿಸ್ಥಿತಿ ಉಂಟಾಗಿದೆ.





ಕಳೆದ ಇಪ್ಪತ್ತು ವರ್ಷಗಳಿಂದ ಸರಿಯಾಗಿ ಮಳೆ ಬೀಳುತ್ತಿಲ್ಲ. ಬಿದ್ದರೂ ಅಕಾಲಿಕ ಮಳೆಯಾಗುತ್ತದೆ. ಇದರಿಂದ ಕಡಲೆಕಾಯಿ ಬೆಳೆದಿಲ್ಲ ಬಿತ್ತನೆ ಬೀಜವೂ ಇಲ್ಲ. ಕೊಳ್ಳಲು ಕೈಯಲ್ಲಿ ದುಡ್ಡಿಲ್ಲ. ಈ ಸಾರಿ ಬೀಜ ಬಿತ್ತುವುದು ಅನುಮಾನ. ನಾಲ್ಕೈದು ವರ್ಷದಿಂದ ಬಿತ್ತನೆಗೂ ಬೀಜ ಸಿಗದಂತಾಗಿದೆ. ಮಳೆ ಹೋಗಿ ಮುಗಿಲು ಹೊಕ್ಕಿತು. ರೈತರ ಬಾಳು ಬರಡಾಯಿತು. ನೀರಿನ 'ಕಣ್ಣು' ಎಲ್ಲಿಯೂ ಕಾಣುತ್ತಿಲ್ಲ. ಏನು ಮಾಡೋದು ಜೀವನ ಎಂದು ಅಪ್ಪ ಕೇಳಿದಾಗ ಏನೊಂದು ಮಾತನಾಡದೆ ಸುಮ್ಮನಾಗಿದ್ದೆ. ಅಪ್ಪನ ಮಾತುಗಳು ಆತಂಕ, ದುಗುಡ ದುಮ್ಮಾನವನ್ನು ತೋರಿಸುತ್ತಿದ್ದವು. ಯಾರಿಗೂ ಉತ್ತರ ಹೇಳಲಾರದ ಸ್ಥಿತಿಯಲ್ಲಿ ಕೆಲಸಕ್ಕೆ ಬಂದೆ. ಇದಕ್ಕೆಲ್ಲ ಯಾರು ಕಾರಣ? ಸರ್ಕಾರದ ನೀತಿಗಳೇ? ಕೃಷಿ ಇಲಾಖೆಯ ಧೋರಣೆಯೇ? ನಮ್ಮನ್ನು ಆಳುವವರ ತಲೆಕೆಟ್ಟ ಆಲೋಚನೆಗಳೇ? ಎಂದು ಯೋಚಿಸಿದಾಗ ಹೌದು ಎನ್ನದೆ ಬೇರೆದಾರಿಯೇ ಇಲ್ಲ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹೆಬ್ಬಾಗಿಲು ತೆರೆದು 25 ವರ್ಷಗಳು ಪೂರೈಸಿದೆ. ಇಂತಹ ಹೊತ್ತಿನಲ್ಲಿ ಕ್ಷಣಮಾತ್ರದಲ್ಲಿ ಒಮ್ಮೆ ತಿರುಗಿ ನೋಡಿದರೆ ನಮ್ಮ ಕಣ್ಣ ಮುಂದೆ, ಲಾಭಕ್ಕಿಂತ ನಷ್ಟ, ನಷ್ಟಕ್ಕಿಂತ ಸಂಕಷ್ಟ, ಸವಾಲುಗಳು ಎದುರಾಗಿರುವುದು ಎದ್ದುಕಾಣುತ್ತಿದೆ. ಕಾರ್ಪೋರೇಟ್ ಜಗತ್ತಿನ ಎದುರು ಕೃಷಿ, ಕೃಷಿಕಾರ ರೈತರು, ಮಹಿಳೆಯರು, ಸಂಘಟಿತ ಕಾರ್ಮಿಕರು, ಅಸಂಘಟಿತ ಕೂಲಿ ಕಾರ್ಮಿಕರು, ವಿದ್ಯಾರ್ಥಿ, ಯುವಜನರು ಕುಗ್ಗಿ ನಡುಬಗ್ಗಿ ನಲುಗಿ ಹೋಗಿದ್ದಾರೆ. ಜನಪರವಲ್ಲದ ತ್ರಿಕರಣಗಳ ಆಹ್ವಾನದಿಂದ ಬದುಕು ಮೂರಾಬಟ್ಟೆಯಾಗಿದೆ. ಕೃಷಿ ವಲಯ ಕ್ಷೀಣವಾಗಿದೆ. ದನಕರುಗಳು ಕಣ್ಮರೆಯಾಗಿವೆ. ದುಡಿಯುವ ಕೈಗಳ ಕೆಲಸವನ್ನು ಬಂಡವಾಳಗಾರರ ಯಂತ್ರಗಳು ಕಸಿದುಕೊಂಡಿವೆ. ರೇಷ್ಮೆ, ಕಡಲೆಕಾಯಿ, ತೆಂಗು, ರಾಗಿ, ಭತ್ತ, ಬೇಳೆ ಬೆಳೆಯುತ್ತಿದ್ದ ರೈತರು ಈಗ ಏನನ್ನೂ ಮಾಡಲು ಆಗದೆ ನೇಣಿಗೆ ಕೊರಳೊಡ್ಡುತ್ತಿದ್ದಾರೆ. ಸಾಲದ ಸುಳಿಗೆ ಸಿಲುಕಿ ನಲುಗಿ ಹೋಗಿದ್ದಾರೆ. ಕುಟುಂಬ ನಿರ್ವಹಣೆ ಕಷ್ಟಕರವಾಗಿದೆ. ಮಕ್ಕಳನ್ನು ಓದಿಸಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ವಿದೇಶಿ ಸರಕುಗಳು, ವಿದೇಶಿ ಸಂಕರ ತಳಿ ಬೀಜಗಳು ಭಾರತದ ಮಾರುಕಟ್ಟೆ ಯನ್ನು ಆವರಿಸಿವೆ. ದೇಶೀಯ ತಳಿಗಳು ನಾಶವಾಗಿವೆ.

'ಸುಸ್ಥಿರ'...'ಸುಸ್ಥಿರ'

ದೇಶ ದಿಕ್ಕೆಟ್ಟಿರುವ ಸನ್ನಿವೇಶದಲ್ಲಿ 'ಸುಸ್ಥಿರ ಬದುಕು', 'ಸುಸ್ಥಿರ ಕೃಷಿ' ಸೇರಿದಂತೆ ಸುಸ್ಥಿರ ಸಿದ್ಧಾಂತದ ಮಂಡನೆಯಾಗುತ್ತಿದೆ. ಇದು ಹೇಗಿದೆಎಂದರೆ 'ಊರು ಹಾಳಾದ ಮೇಲೆ ದಿಡ್ಡಿ ಬಾಗಿಲು ಹಾಕಿದರು' ಎಂಬ ಗಾದೆಯಂತಾಗಿದೆ. ಪ್ರಧಾನಿ ನರೇಂದ್ರ ಮೋದಿ, ರಂಗಕರ್ಮಿ ಪ್ರಸನ್ನ, ಕೆಲವು ವಿಜ್ಞಾನಿಗಳು ಸೇರಿದಂತೆ ಹೀಗ ವೈವಿಧ್ಯಮಯ ಜೀವನ ನಡೆಸುವವರು ಸುಸ್ಥಿರ ಸಿದ್ಧಾಂತ ಮಂಡಿಸುತ್ತ ದೇಶದ ಜನರನ್ನು ಗೊಂದಲಗೊಳ್ಳುವಂತೆ ಮಾಡುತ್ತಿದ್ದಾರೆ. ನಿಜವಾಗಿಯೂಇವರು ಮಂಡಿಸುವ ಸುಸ್ಥಿರ ಸಿದ್ಧಾಂತದಿಂದ ಈ ದೇಶದ ಬಹುತ್ವದ ಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬುದನ್ನು ಮನಗಾಣಬೇಕಾಗಿದೆ. ಜಾಗತಿಕ, ಉದಾರ ಮತ್ತು ಖಾಸಗಿ ಎಂಬ ತ್ರಿಕರಣಗಳ ದಾಳಿಗೆ ದೇಶದ ಕೃಷಿ ಮತ್ತು ಬದುಕು ಎಂದೋ ಕೊಚ್ಚಿ ಹೋಗಿದೆ. ಇಂತಹ ಹೊತ್ತಿನಲ್ಲಿ ಸುಸ್ಥಿರದ ಮಾತು ಬಿಟ್ಟು ಕೃಷಿ, ರೈತರು ಮತ್ತು ಜನಸಾಮಾನ್ಯರನ್ನು ಉಳಿಸುವ ನೀತಿಗಳನ್ನು ರೂಪಿಸಬೇಕಾಗಿದೆ.

ವಿದೇಶಿ ಕಂಪನಿಗಳು, ವಿದೇಶಿ ಸಂಕರ ತಳಿ ಬೀಜಗಳು, ವಿದೇಶಿ ವಸ್ತುಗಳು, ಸರಕುಗಳು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿದ ಮೇಲೆ ಅಧಿಕಾರಕ್ಕೆ ಬಂದ ಅಟಲ್ ಬಿಹಾರಿ ವಾಜಪೇಯಿ ರಸ್ತೆಗಳನ್ನು ಖಾಸಗಿಯವರಿಗೆ ವಹಿಸಿ ಭಾರತ ಪ್ರಕಾಶಿಸುತ್ತಿದೆ ಎಂದು ಹೇಳಿ ಹೋದರು. ನಂತರ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ ಉದ್ಯೋಗಖಾತ್ರಿ, ಆಹಾರ ಭದ್ರತಾ ಕಾಯ್ದೆ ಮೊದಲಾದ ಕಾರ್ಯಕ್ರಮಗಳನ್ನು ತಂದು ಹಗರಣಗಳಲ್ಲಿ ಮುಳುಗಿ ಮಿಂದೆದ್ದು ಅಧಿಕಾರ ಕಳೆದುಕೊಂಡರು. ಈಗ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿ ಭಾರತ ವಿಕಾಸವಾಗುತ್ತಿದೆ ಎಂದು ವಿದೇಶಗಳನ್ನು ಸುತ್ತುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಆದರೆ ಈ ದೇಶದ ಬೆನ್ನೆಲುಬು ಎಂದು ಕರೆದು ಕರೆದು ರೈತರ ಬೆನ್ನುಮೂಳೆ ಮುರಿಯುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಂಡವಾಳಗಾರರನ್ನು ಆಕರ್ಷಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿವೆ. ಬಂಡವಾಳ ಹೂಡಿಕೆಗೆ ಆಹ್ವಾನ ನೀಡುತ್ತ ವಿದೇಶಿ ಕಂಪನಿಗಳಿಗೆ ಇಡೀದೇಶದ ಪ್ರಮುಖ ಜಾಗಗಳನ್ನು ಗುತ್ತಿಗೆ ನೀಡಲು ಹೊರಟಿವೆ. ಇದುಅಪಾಯಕಾರಿ ಬೆಳವಣಿಗೆ.

ಗುತ್ತಿಗೆಮಯ

ಇದೇ ಪರಿಸ್ಥಿತಿ ಮುಂದುವರಿದರೆ ದೇಶದಲ್ಲಿ ಗುತ್ತಿಗೆ ಸರ್ಕಾರ ಬಂದರೂ ಅಚ್ಚರಿ ಇಲ್ಲ. ಎಲ್ಲವೂ ಗುತ್ತಿಗೆಮಯವಾಗಿ ಇಡೀ ದೇಶದ ಜನಸಮೂಹವನ್ನೇ ಕತ್ತು ಹಿಡಿದು ನೂಗಿದರೂ ಕೇಳುವವರೇ ಗತಿ ಇಲ್ಲವಾಗುತ್ತದೆ. ಬಹುತ್ವ ನೆಲೆಗಳು ಮರೆಯಾಗಿ ಗುತ್ತಿಗೆ ಭಾರತ ತಲೆಎತ್ತುವ ಸಾಧ್ಯತೆ ಇದೆ. ಹಾಗಾಗಿ ದೇಶ ಎದುರಿಸುತ್ತಿರುವ ಕೃಷಿ ಬಿಕ್ಕಟ್ಟನ್ನು ನಿವಾರಿಸಲು ದೇಶದ ಎಲ್ಲಾ ರೈತ, ದಲಿತ, ಕಾರ್ಮಿಕ, ಶ್ರಮಿಕ, ಮಹಿಳ, ಜನಪರ ಚಳವಳಿಗಳು ಹೊಸ ಸ್ವರೂಪವನ್ನು ಪಡೆದುಕೊಳ್ಳಬೇಕಿದೆ. ಹೊಸ ಮಾರ್ಗ, ಹೊಸ ದಾರಿ ಹುಡುಕಾಟಕ್ಕೆ ಸಜ್ಜಾಗಬೇಕಾಗಿದೆ. ಎಲ್ಲ ಚಳವಳಿಗಳ ಒಳ್ಳೆಯ ಅಂಶಗಳನ್ನು ಕಸಿ ಮಾಡಿ ಒಂದು ಛತ್ರಿಯಡಿ ಬರಬೇಕು. ಕೇಂದ್ರ ಮತ್ತು ರಾಜ್ಯಗಳಲ್ಲಿ ಹೊಸ ಸಾಹಿತ್ಯಕ ಚಳವಳಿ ಹುಟ್ಟು ಹಾಕಬೇಕು. ಸಾಹಿತ್ಯ ಚಳವಳಿಯೇ ಎಲ್ಲ ಚಳವಳಿಗಳಿಗೂ ತಾಯಿಬೇರು. ತಾಯಿಬೇರು ಬಲಪಡಿಸಬೇಕಾದ ಅಗತ್ಯವಿದೆ. ತಾಯಿಬೇರು ಬಲಗೊಂಡರೆ ಇತರೆ ಚಳವಳಿಗಳಿಗೆ ಬಲ ಬರುತ್ತದೆ. ಹಾಗಾದಾಗ ಮಾತ್ರ ಭಾರತದ ಬ್ರಿಟೀಷರನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಗುತ್ತದೆ.

ಆದ್ದರಿಂದ ದೇಶದ ಎಲ್ಲಾ ವಿಚಾರಧಾರೆಗಳು ಒಂದೆಡೆ ಸಂಯೋಗಗೊಳ್ಳಬೇಕು. ಬುದ್ಧ, ಬಸವ, ನಾರಾಯಣ ಗುರು, ಜ್ಯೋತಿಬಾ ಫುಲೆ, ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನರಾಂ, ಚಾರ್ವಾಕ ಪರಂಪರೆ, ಜನಪರ, ಪ್ರಗತಿಪರ, ಕಮ್ಯೂನಿಸ್ಟ್, ಮಹಿಳೆ, ಕಾರ್ಮಿಕ ಚಳವಳಿಗಳು ಒಂದೆಡೆ ಬರಬೇಕು. ಆಗ ಮಾತ್ರ ಬೆಳಕನ್ನು ಕಾಣಲು ಸಾಧ್ಯ. ಸುಂದರ ಸಮಾಜ ನಿರ್ಮಾಣದ ಕನಸು ನನಸಾಗುತ್ತದೆಂದು ನಂಬಬಹುದು. ಸಮಾಜ ಸುಧಾರಣಾ ಚಳವಳಿಗಳು ಇಲ್ಲದೇ ಹೋದರೆ ಭಾರತ ವಿನಾಶವಾಗುತ್ತದೆ. ಇದಾಗುವ ಮುನ್ನ ಎದ್ದೇಳಬೇಕು. ಎದ್ದು ಕೂಗಿದರೆ ಸಾಲದು ಜನರ ನಡುವೆ ಹೋಗಬೇಕು. ಋಣಾನುಋಣ ಕಾಂಚಣದ ವ್ಯಾಮೋಹದಲ್ಲಿ ಬದುಕನ್ನೇ ಬರ್ಬರ ಮಾಡಿಕೊಳ್ಳುತ್ತಿರುವ ಜನರಿಗೆ ತಿಳುವಳಿಕೆ ಮೂಡಿಸಬೇಕು. ಚುನಾವಣೆಯೆಂಬ ಅಸ್ತ್ರದ ಮೂಲಕ ಸರ್ಕಾರಗಳನ್ನು ವಾಪಸ್ ಕರೆಸಿಕೊಳ್ಳುವ ಚಳವಳಿಗೆ ಚಾಲನೆ ದೊರೆಯಬೇಕಾಗಿದೆ. ಆಗ ಮಾತ್ರ ಆಳುವವರು ಮಾತು ಕೇಳುವವರಾಗುತ್ತಾರೆ. ●

ಖಾಸಗೀಕರಣದ ವಿರುದ್ಧ ಹರಿಯಾಣ ವಿದ್ಯುತ್ ನೌಕರರ ಸತತ ಹೋರಾಟ ಜೂನ್ 29-30ರಂದು ಎರಡು ದಿನಗಳ ಮುಷ್ಕರಕ್ಕೆ ಸಿದ್ಧತೆ

ವಿದ್ಯುತ್‌ವಲಯದ ಕಂಪನೀಕರಣ ಮತ್ತು ಆ ದಾರಿಯಲ್ಲಿ ಖಾಸಗೀಕರಣ ನವ-ಉದಾರವಾದೀ ಧೋರಣೆಗಳ ಒಂದು ಪ್ರಮುಖ ಅಂಶ. ಹರಿಯಾಣದಲ್ಲೂ ಇದನ್ನು ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಆರಂಭಿಸಿತ್ತು. ಭಿದರ ಪರಿಣಾಮವೆಂದರೆ ಈ ಪ್ರಕ್ರಿಯೆ 1998ರಲ್ಲಿ ಆರಂಭವಾದಾಗ ಇದ್ದ ನಷ್ಟದ ಪ್ರಮಾಣ 450 ಕೋಟಿ ರೂ.ಗಳಾದರೆ, ಈಗ ಅದು 34 ಸಾವಿರ ಕೋಟಿ ರೂ.ಗಳನ್ನು ದಾಟಿದೆ. ಸಾಲದ ಹೊರೆ 30ಸಾವಿರ ಕೋಟಿ ರೂ.ಗಳಾಗಿವೆ.

ಆದರೂ ನಂತರ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರಕಾರ ಅದನ್ನು ಇನ್ನಷ್ಟು ರಭಸದಿಂದ ಮುಂದುವರೆಸುತ್ತಿದೆ. ಹೈಕೋರ್ಟ್ ಈ ವಿದ್ಯುತ್ ವಿತರಣಾ ನಿಗಮಗಳ ಭಾರೀ ನಷ್ಟಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುವಂತೆ ಹೇಳಿದ್ದರೂ ಭ್ರಷ್ಟಾಚಾರದ ವಿರುದ್ಧ ಭಾಷಣಗಳನ್ನು ಕೊಡುವ ಪ್ರಧಾನ ಮಂತ್ರಿಗಳ ಪಕ್ಷದ ಸರಕಾರ ಆ ಬಗ್ಗೆ ಏನೂ ಮಾಡುತ್ತಿಲ್ಲ. ಬದಲಿಗೆ ಸಾಕಷ್ಟು ದೊಡ್ಡ ಪ್ರಮಾಣದ ಆದಾಯಗಳನ್ನು ತರುತ್ತಿರುವ ರಾಜ್ಯ ವಿದ್ಯುತ್ ವಿತರಣಾ ನಿಗಮದ 23 ಸಬ್-ಡಿವಿಶನ್‌ಗಳನ್ನು ಖಾಸಗಿಯವರಿಗೆ ವಹಿಸಿಕೊಡಲು ನಿರ್ಧರಿಸಿದೆ. ಈ ನಿರ್ಧಾರದ ವಿರುದ್ಧ ಆರಂಭವಾದ ವಿದ್ಯುತ್ ನೌಕರರ ಹೋರಾಟ ಈಗ ಹಲವು ಹಂತಗಳನ್ನು ದಾಟಿ ಬಂದಿದೆ.

ಎಪ್ರಿಲ್26 ರಂದು ಪಂಚಕುಲಾದಲ್ಲಿ ವಿದ್ಯುತ್ ನಿಗಮಗಳ ಕೇಂದ್ರ ಕಚೇರಿಯಿರುವ ಶಕ್ತಿ ಭವನದ ಎದುರು ಒಂದು ಭಾರೀ ಮತಪ್ರದರ್ಶನ ನಡೆಯಿತು. ಮೇ 11ರಂದು ಪ್ರತಿಭಟನಾರ್ಥ 7471 ಕಾಂಟ್ರಾಕ್ಟ್ ಕಾರ್ಮಿಕರೂ ಸೇರಿದಂತೆ 25133 ನೌಕರರು ಒಂದು ದಿನ ರಜಾ ಹಾಕಿದರು. ಬಿಜೆಪಿ ಸರಕಾರ ನೌಕರರೊಂದಿಗೆ ಮಾತುಕತೆ ನಡೆಸುವ ಬದಲು ರಜಾ ಹಾಕಿದವರ ಮೇಲೆ ಕ್ರಮ ಕೈಗೊಳ್ಳಲು ಮುಂದಾಯಿತು. ಈ ಹಿನ್ನೆಲೆಯಲ್ಲಿ ಮೇ 12ರಂದು ಸಭೆ ಸೇರಿದ ವಿದ್ಯುತ್ ನೌಕರರ ಜಂಟಿ ವೇದಿಕೆ ಜೂನ್ 29-30ರಂದು ಎರಡು ದಿನಗಳ ರಾಜ್ಯವ್ಯಾಪಿ ಮುಷ್ಕರ ನಡೆಸಲು ನಿರ್ಧರಿಸಿ, ಅದಕ್ಕೆ ತಯಾರಿ ಆರಂಭಿಸಿದೆ.

ಬಿಜೆಪಿ ಸರಕಾರ ವಿದ್ಯುತ್‌ನೌಕರರನ್ನು ವಿದ್ಯುತ್ ಬಳಕೆದಾರರ ವಿರುದ್ಧ ಎತ್ತಿ ಕಟ್ಟುವ ತಂತ್ರ ಬಳಸುತ್ತದೆ ಎಂದು ಗಮನಿಸಿರುವ ವಿದ್ಯುತ್ ನೌಕರರ ಸಂಘಟನೆಗಳು ಖಾಸಗೀಕರಣದ ವಿರುದ್ಧ ಹೋರಾಟದಲ್ಲಿ ಬಳಕೆದಾರರನ್ನೂ ಒಳಗೊಳ್ಳುವ ಯೋಜನೆ ಹಾಕಿಕೊಂಡಿವೆ.

ಮೇ 11ರ ರಜಾ ಚಳುವಳಿಯಲ್ಲಿ ಭಾಗವಹಿಸಿದ ಕಾಂಟ್ರಾಕ್ಟ್ ನೌಕರರ ವಜಾ ಮತ್ತು ಖಾಯಂ ನೌಕರರಿಗೆ ವರ್ಗಾವಣೆ ಮುಂತಾದ ಕಿರುಕುಳಗಳ ವಿರುದ್ಧ 'ಸರ್ವ ಕರ್ಮಚಾರೀ ಸಂಘ ಹರಿಯಾಣ'ದ ನೇತೃತ್ವದಲ್ಲಿ ಹರಿಯಾಣ ಸರಕಾರದ ವಿವಿಧ ಇಲಾಖೆಗಳ ನೌಕರರು ಪ್ರತಿಭಟನೆ ನಡೆಸಿದರು. ಕಿಸಾನ್ ಸಭಾ, ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಇತರ ಸಾಮೂಹಿಕ ಸಂಘಟನೆಗಳೂ ವಿದ್ಯುತ್ ನೌಕರರ ಬೇಡಿಕೆಯ ಬಗ್ಗೆ ಚರ್ಚೆ ನಡೆಸುವಂತೆ ಹರಿಯಾಣ ಸರಕಾರವನ್ನು ಆಗ್ರಹಿಸಿದವು.



ವಿದ್ಯುತ್ ನೌಕರರ ಜಂಟಿ ವೇದಿಕೆ ಪ್ರಮುಖ ಮುಖಂಡರ 11 ತಂಡಗಳನ್ನು ರಚಿಸಿದೆ, ಇವು ರಾಜ್ಯದಲ್ಲಿ ಸಂಚರಿಸಿ ಹೋರಾಟಕ್ಕೆ ಸ್ಪಷ್ಟ ಸ್ವರೂಪ ನೀಡುತ್ತಿವೆ. ಮೇ 21ರಿಂದ ಜೂನ್ 3ರವರೆಗೆ ಎಲ್ಲ ಶಾಸಕರು, ಎಂಪಿಗಳು ಮತ್ತು ಮಂತ್ರಿಗಳು ನಿವಾಸಗಳ ಮುಂದೆ ಪ್ರತಿಭಟನೆಗಳು ನಡೆದಿವೆ. ಜೂನ್4ರಿಂದ 13 ರವರೆಗೆ ರಾಜ್ಯದ ವಿವಿಧೆಡೆಗಳಲ್ಲಿ ವಿದ್ಯುತ್ ನೌಕರರು ಮತ್ತು ಬಳಕೆದಾರರ ಜಂಟಿ ವಿಚಾರ ಸಂಕಿರಣಗಳು ನಡೆದಿವೆ. ಈಗ ಜೂನ್ 15ರಿಂದ 25 ರವರೆಗೆ ಜಂಟಿ ವೇದಿಕೆ ರಚಿಸಿದ 11 ತಂಡಗಳು ಎಲ್ಲ ಘಟಕಗಳಿಗೆ ಭೇಟಿ ನೀಡಿ ಸಭೆಗಳನ್ನು ನಡೆಸುತ್ತಿವೆ. ಒಟ್ಟಿನಲ್ಲಿ ಎರಡು ದಿನಗಳ ಮುಷ್ಕರ ಭಾರೀ ಯಶಸ್ಸು ಸಾಧಿಸುವಂತೆ ಪ್ರಯತ್ನಗಳು ನಡೆದಿವೆ.

ದಾದ್ರಿಯಲ್ಲಿ ಶಾಂತಿ ಕದಡುವ ಬಿಜೆಪಿ ಮುಖಂಡರ ದ್ವೇಷ ಭಾಷಣಗಳ ವಿರುದ್ಧ ಕ್ರಮ ಕೈಗೊಳ್ಳಿ: ದಿಲ್ಲಿಯಲ್ಲಿ ಧರಣಿ



ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿ ಜಂತರ್ ಮಂತರ್‌ನಲ್ಲಿ, ದಾದ್ರಿಯಲ್ಲಿ ಮತ್ತೆ ಕೋಮುಧ್ರುವೀಕರಣ ತರುವ ದುಷ್ಟ ಹುನ್ನಾರಗಳ ವಿರುದ್ಧ ಧರಣಿ ಕಾರ್ಯಕ್ರಮವನ್ನು ಜೂನ್ 11ರಂದು ಸಂಘಟಿಸಿತು. ಇದರಲ್ಲಿ ನೂರಾರು ಮಂದಿ ಭಾಗವಹಿಸಿದರು.

ಧರಣಿಯನ್ನುದ್ದೇಶಿಸಿ ಮಾತನಾಡುತ್ತ ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ವಿಧಾನ ಸಭಾ ಚುನಾವಣೆಗಳು ಸನ್ನಿಹಿತವಾಗುತ್ತಿರುವಂತೆ ಹಿಂದುತ್ವ ಪಡೆಗಳು ಇಡೀ ಪಶ್ಚಿಮ ಉತ್ತರಪ್ರದೇಶದಲ್ಲಿ ಕೋಮುಧ್ರುವೀಕರಣವನ್ನು ತರಲು ಪ್ರಯತ್ನಿಸುತ್ತಿವೆ ಎಂದರು. ಉದ್ರೇಕಕಾರಿ ಹೇಳಿಕೆಗಳನ್ನು ನೀಡಿರುವ ಕೇಂದ್ರ ಮಂತ್ರಿಗಳಾದ ಸಂಜೀವ ಬಲ್ಯಾನ್ ಮತ್ತು ಮಹೇಶ ಶರ್ಮರವರನ್ನು ವಜಾ ಮಾಡಬೇಕು ಎಂದು ಧರಣಿಯಲ್ಲಿ ಆಗ್ರಹಿಸಲಾಯಿತು.

ರಾಜಸ್ತಾನ: ಬಿಸಿಲಿನ ಝಳದಿಂದ 3 ಮನರೇಗಾ ಕಾರ್ಮಿಕರ ಸಾವು

ರಾಜಸ್ತಾನದ ಜೈಸಲ್ಮೇರ್ ಜಿಲಲೆಯ ಪೋಖ್ರನ್, ಅಜ್ಮೀರ್ ಜಿಲ್ಲೆಯ ಪಿಸಂಗನ್ ಏಮತ್ತು ಬರನ್ ಜಿಲ್ಲೆಯ ಅಕ್ರಿತ್ ಖೇಡಿಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದ ಮೂವರು ಮಹಿಳೆಯರು ಬಿಸಿಲಿನ ಝಳದಿಂದ ಜೂನ್ 8ರಂದು ಸಾವಿಗೀಡಾಗಿದ್ದಾರೆ, ಅಲ್ಲದೆ ನೂರಾರು ಕಾರ್ಮಿಕರು ಬಿಸಿಲಿನ ಬೇಗೆಯಿಂದ ಸರಿಯಾದ ರಕ್ಷಣೆಯಿಲ್ಲದೆ ಕಾಯಿಲೆ ಬಿದ್ದಿದ್ದಾರೆ ಎಂದು ಸಿಪಿಐ(ಎಂ) ರಾಜಸ್ತಾನ ರಾಜ್ಯ ಕಾರ್ಯದರ್ಶಿ ಅಮ್ರ ರಾಮ್ ಹೇಳಿದ್ದಾರೆ.

ಮನರೇಗ ಕಾರ್ಮಿಕರಿಗೆ ಸರಿಯಾದ ಆಶ್ರಯ ಮತ್ತು ಕುಡಿಯುವ ನೀರನ್ನು ಒದಗಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಆದರೆ ಅತ್ತ ಈ ಮೂರು ಜಿಲ್ಲೆಗಳ ಆರೋಗ್ಯ ಮತ್ತು ವೈದ್ಯಕೀಯ ಅಧಿಕಾರಿಗಳು ತಮ್ಮ ವಯಾಪ್ತಿಯಲ್ಲಿ ಇಂತಹ ಸಾವುಗಳೇನೂ ಸಂಭವಿಸಿಲ್ಲ ಎಂದು

ಮಾಧವಿ ಸರ್ಕಾರ್ ನಿಧನ

ಬಿಹಾರದ ಮಾಜಿ ಸಿಪಿಐ(ಎಂ)ಶಾಸಕಿ ಮತ್ತು ಮಾಜಿ ರಾಜ್ಯಸಮಿತಿ ಸದಸ್ಯೆ ಮಾಧವಿ ಸರ್ಕಾರ್ ಅವರು ಜೂನ್ 14ರಂದು ನಿಧನ ಹೊಂದಿದ್ದಾರೆ. ಅವರು ಈ ಪ್ರದೇಶದಲ್ಲಿ ದುಡಿಯುವ ಜನರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು.

ಆಕೆಯ ಪತಿ ಅಜಿತ್ ಸರ್ಕಾರ್ ಈ ಪ್ರದೇಶದ ಒಬ್ಬ ಜನಪ್ರಿಯ ಸಿಪಿಐ(ಎಂ) ಮುಖಂಡರಾಗಿದ್ದರು. ಶಾಸಕರೂ ಅಗಿದ್ದ ಅವರನ್ನು 18 ವರ್ಷಗಳ ಹಿಂದೆ, 1998ರಲ್ಲಿ ಇದೇ ದಿನ ಪಾಳೆಯಗಾರೀ ದೊರೆಗಳ ಹಸ್ತಕರು ಗುಂಡಿಟ್ಟು ಕೊಂದಿದ್ದರು.



ತ್ರಿಪುರಾದಲ್ಲಿ ಇತಿಹಾಸ ಪಠ್ಯಕ್ರಮದ ಬಗ್ಗೆ ಎಡ-ವಿರೋಧಿಗಳ ಕುಚೇಷ್ಟೆ ಬಯಲು

ಪುಟ 2 ರಿಂದ

ಪಠ್ಯಕ್ರಮ 2015-16ರ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿದೆ, ಮತ್ತು ಹತ್ತನೇ ತರಗತಿಯ ಪಠ್ಯಕ್ರಮ 2016-17ರ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ. ಇವರಡನ್ನು ಒಟ್ಟಿಗೇ ಇಟ್ಟಾಗ ಖಂಡಿತವಾಗಿಯೂ ನಿಮ್ಮ ಸಂದೇಹಗಳಿಗೆ ವಿರಾಮ ಸಿಗುತ್ತದೆ ಮತ್ತು ಮಾಧ್ಯಮಗಳ ವರದಿಗಳ ಕುಚೇಷ್ಟೆಗೆ ಕೂಡ. ತರಗತಿ ಒಂಭತ್ತು ಮತ್ತು ಹತ್ತರ ಪಠ್ಯಕ್ರಮಗಳು ಒಟ್ಟಾಗಿ ಉನ್ನತ ಮಾಧ್ಯಮಿಕ ಶಿಕ್ಷಣದ ಪರೀಕ್ಷೆಯ ಭಾಗ ಎಂಬುದಾಗಿ ನೋಡಬೇಕು" ಎಂದು ರಮೇಶ್ ಚೆನ್ನಿತಾಲ ಅವರಿಗೆ ಬರೆದ ಪತ್ರದಲ್ಲಿ ಹೇಳುತ್ತ **"ಇದು ನೀವು ಎತ್ತಿದ ಪ್ರಶ್ನೆಗೆ ವಿರಾಮ ನೀಡುತ್ತದೆ ಮತ್ತು ಮಾಧ್ಯಮಗಳ ಆರೋಪಗಳು ಬುಡವಿಲ್ಲದ್ದು ಎಂದು ನೀವೂ ಒಪ್ಪುತ್ತೀರಿ" ಎಂದು ಸೀತಾರಾಮ್ ಯೆಚೂರಿಯವರು ಆಶಯ ವ್ಯಕ್ತಪಡಿಸಿದ್ದಾರೆ.**

ತ್ರಿಪುರ ಮಾಧ್ಯಮಿಕ ಶಿಕ್ಷಣ ಮಂಡಳಿಯ ಪರೀಕ್ಷೆಗೆ ಸಿದ್ಧಪಡಿಸಿದ ಇತಿಹಾಸದ ಪಠ್ಯಕ್ರಮವನ್ನು ನೋಡಿದರೆ ಕೆಲವು 'ಇತಿಹಾಸಕಾರ'ರ ಮತ್ತು ಮಾಧ್ಯಮಗಳ ಇಂತಹ ಕುಚೇಷ್ಟೆ, ಬುಡವಿಲ್ಲದ ಅಪಾದನೆಗಳು ಏಕೆ ಎಂಬುದನ್ನು ಮನಗಾಣಬಹುದು. ಇತಿಹಾಸದ ಪಠ್ಯಕ್ರಮ ಹೀಗಿದೆ:

ತರಗತಿ ಒಂಭತ್ತು(2016ರಿಂದ ಜಾರಿ)

ಘಟಕ-1: ಫ್ರೆಂಚ್ ಕ್ರಾಂತಿ(1789) ಮತ್ತು ಅದರ ಪ್ರಭಾವ

ಅ. ಕಾರಣಗಳು-ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ; ತತ್ವಜ್ಞಾನಿಗಳ ಪಾತ್ರ

ಆ. ಘಟನೆಗಳು-ಬೆಸ್ತಿಲೆ ಪತನ, ಟೆನ್ನಿಸ್ ಕೋರ್ಟ್ ಪ್ರತಿಜ್ಞೆ

ಇ. ಕ್ರಾಂತಿಕಾರಿ ಆದರ್ಶಗಳ ಪ್ರಭಾವ-ಹೊಸ ಫ್ರೆಂಚ್ ಸಂವಿಧಾನ, ಪಾಳೆಯಗಾರಿಕೆಯ ರದ್ದತಿ, ನಾಗರಿಕರ ಹಕ್ಕುಗಳ ಘೋಷಣೆ

ಘಟಕ-2:ಅರಣ್ಯ ಸಮಾಜ ಮತ್ತುವಸಾಹತುಶಾಹೀ ಆಳ್ವಿಕೆ

ಅ. ಅರಣ್ಯನಾಶದತ್ತ ಒಯ್ದ ಕಾರಣಗಳು

ಆ. ಅರಣ್ಯ ನಿಯಮಗಳು ಮತ್ತು ಅವುಗಳ ಪ್ರಭಾವ

ಇ. ಅರಣ್ಯದಲ್ಲಿ ಬಂಡಾಯ-ಸಂತಾಲ, ಮುಂಡ, ಅಲ್ಲೂರಿ

ಘಟಕ-3: ಇತಿಹಾಸ ಮತ್ತು ಕ್ರೀಡೆಗಳು

ಅ. ಇಂಗ್ಲೆಂಡ್ ಮತ್ತು ಭಾರತದಲ್ಲಿ ಕ್ರಿಕೆಟ್ ಬೆಳವಣಿಗೆ

ಆ. ಪಾರ್ಸಿ ಸಮುದಾಯದ ಪಾತ್ರ

ಇ. ಬಾಂಬೆ ಜಿಮ್ಖಾನ ಮತ್ತು ಕಲ್ಕತ್ತ ಕ್ರಿಕೆಟ್ ಕ್ಲಬ್ ಉದಯ

ಈ. ಕ್ರಿಕೆಟ್ ಆಟದ ನಿಯಮಗಳ ಆರಂಭ

ಉ. ಕ್ರಿಕೆಟ್ ಆಟದ ನಿರ್ವಸಾಹತೀಕರಣ ಮತ್ತು ಮಹಾತ್ಮ ಗಾಂಧಿಯವರ ಕಣ್ಣೋಟ

ಘಟಕ-4: ರಶ್ಯನ್ ಕ್ರಾಂತಿ(1917) ಮತ್ತು ಅದರ ಪ್ರಭಾವ

ಅ. ಕಾರಣಗಳು- ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ

ಆ. ಸಮಾಜವಾದದ ಉದಯ

ಇ. ಲೆನಿನ್ ಪಾತ್ರ

ಘಟಕ-5: ನಾಝೀವಾದ ಮತ್ತು ಹಿಟ್ಲರನ ಉದಯ

ಅ. ಹಿನ್ನೆಲೆ- ವೈಮರ್ ಗಣತಂತ್ರ

ಆ. ಹೊಣೆಯಾದ ಅಂಶಗಳು-ವರ್ಸೆಲ್ಸ್ ಸಂಧಿ, ಆರ್ಥಿಕ ಮುಗ್ಗಟ್ಟು, ಪ್ರಜಾಪ್ರಭುತ್ವದ ನಾಶ.

ಘಟಕ-6: ಕೃಷಿಯ ಇತಿಹಾಸ

ಅ. ಇಂಗ್ಲೆಂಡ್‌ನಲ್ಲಿ ಆಧುನಿಕ ಕೃಷಿಯ ಆರಂಭ

ಆ. ಕೃಷಿಯಲ್ಲಿ ಯಾಂತ್ರಿಕರಣ

ಇ. ವಸಾಹತುಶಾಹೀ ಕೃಷಿ(ಭಾರತ), ಅಫೀಮು, ಚಹಾ ಮತ್ತು ಸಣಬು ಕುರಿತಂತೆ ವಿಶೇಷ ಪ್ರಸ್ತಾಪ

ತರಗತಿ ಹತ್ತು(2017ರಿಂದ ಜಾರಿ)

ಘಟಕ-1: ನವಭಾರತದ ಬೆಳವಣಿಗೆ

* ಪಾಶ್ಚಿಮಾತ್ಯ ಶಿಕ್ಷಣದ ಆರಂಭ-ಆಂಗ್ಲವಾದಿಗಳು ಮತ್ತು ಪೌರ್ವಾತ್ಯವಾದಿಗಳ ಅಭಿಪ್ರಾಯಗಳು, ಲಾರ್ಡ್ ಬೆಂಟಿಂಕ್, ಮೆಕಾಲೆಯ ಸೂಚನೆ ಪತ್ರ, ವುಡ್ಸ್ ವರದಿ ರವಾನೆ ಮತ್ತು ಹಂಟರ್ ಕಮಿಶನ್
* ಸಾಮಾಜಿಕ ಸುಧಾರಣಾ ಆಂದೋಲನಗಳು-ರಾಮಮೋಹನ ರಾಯ್, ಹೆಚ್‌ವಿಎಲ್ ಡೆ-ರೋಝಿಯೊ, ಈಶ್ವರಚಂದ್ರ ವಿದ್ಯಾಸಾಗರ, ಜ್ಯೋತಿಬಾ ಫುಲೆ, ಸೈಯದ್ ಅಹ್ಮದ್ ಖಾನ್, ಸ್ವಾಮಿ ದಯಾನಂದ, ಸ್ವಾಮಿ ವಿವೇಕಾನಂದ

ಘಟಕ-2: ಭಾರತದಲ್ಲಿ ರಾಷ್ಟ್ರೀಯ ಆಂದೋಲನ

* ಭಾರತ ರಾಷ್ಟ್ರೀಯ ಕಾಂಗ್ರೆಸ್(1885-1905)-ಮಂದಗಾಮಿಗಳು ಮತ್ತು ತೀವ್ರಗಾಮಿಗಳು
* ಗಾಂಧಿ ಮತ್ತು ಸಾಮೂಹಿಕ ಆಂದೋಲನಗಳು: ಅಸಹಕಾರ, ನಾಗರಿಕ ಕಾಯಿದೇ ಭಂಗ, ಕ್ವಿಟ್ ಇಂಡಿಯಾ
* ಸುಭಾಷ್‌ಚಂದ್ರ ಬೋಸ್ ಮತ್ತು ಆಝಾದ್ ಹಿಂದ್ ಸೇನೆ(ಐಎನ್‌ಎ)

ಘಟಕ-3: ರೈತರ ಮತ್ತು ಕಾರ್ಮಿಕರ ಬಂಡಾಯಗಳು

* ನಾವಿಕ ಬಂಡಾಯ, 1946
* ತೆಲಂಗಾಣ, ತೆಭಾಗ, 1946
* ಕಾರ್ಮಿಕ ಆಂದೋಲನಗಳು, 1920-1945

ಘಟಕ-4: ಈಶಾನ್ಯ ಭಾರತ

* ಅಸ್ಸಾಂ ಮತ್ತು 1857ರ ಬಂಡಾಯ
* ಮಣಿಪುರ ಮತ್ತು ತ್ರಿಪುರ ಸಂಸ್ಥಾನಗಳ ವಿಲೀನ
* ಅರುಣಾಚಲ ಪ್ರದೇಶ, ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್ ಮತ್ತು ಸಿಕ್ಕಿಂ ರಚನೆ

ಪ್ರಾಜೆಕ್ಟ್- ಆಂತರಿಕ ಮೌಲ್ಯಮಾಪನ

ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳಬೇಕು

* ಭಾರತದಲ್ಲಿ ಪತ್ರಿಕಾರಂಗದ ಇತಿಹಾಸ
* ಸ್ವದೇಶಿ ಯುಗದಲ್ಲಿ ಕೈಗಾರಿಕೆಗಳ ಬೆಳವಣಿಗೆ
* 19ನೇ ಮತ್ತು 20ನೇ ಶತಮಾನದ ಭಾರತದ ಕ್ರಾಂತಿಕಾರಿ ಚಳುವಳಿಗಳು-ಖುದೀರಾಂ ಬೋಸ್/ಬಾಘಾ ಜತಿನ್/ಭಗತ್ ಸಿಂಗ್/ ಸೂರ್ಯ ಸೆನ್/ ಪ್ರೀತಿಲತಾ ವಡ್ಡೇದರ್/ಕಲ್ಪನಾ ದತ್/ಬೀಣಾ ದಾಸ್
* ತ್ರಿಪುರದಲ್ಲಿ ದೇವಸ್ಥಾನದ ಶಿಲ್ಪಕಲೆ/ತ್ರಿಪುರದ ಜಾನಪದ ಹಾಡುಗಳು, ನೃತ್ಯಗಳು ಮತ್ತು ಹಬ್ಬಗಳು

ಭಾರತದ ಸ್ವಾತಂತ್ರ್ಯ ಆಂದೋಲನದ ಬಗ್ಗೆ, ಅದರಲ್ಲಿ ಮಹಾತ್ಮ ಗಾಂಧಿಯವರ ಪಾತ್ರದ ಬಗ್ಗೆ, ಈ ಚಳುವಳಿಯನ್ನು ವಿರೋಧಿಸಿದ ಆರೆಸ್ಸೆಸ್ ಮತ್ತಿತರ ಕೋಮುವಾದಿಗಳಂತಲ್ಲದೆ ಪ್ರಮುಖ ಪಾತ್ರ ವಹಿಸಿದ ಕಮ್ಯುನಿಸ್ಟರ ಸ್ಪಷ್ಟ ನಿಲುವಿನ ಬಗ್ಗೆ ತುಸುವಾದರೂ ತಿಳುವಳಿಕೆ ಇರುವ ಯಾರಿಗೇ ಆದರೂ, ಈ ವಿಷಯಗಳನ್ನು ಮರೆಮಾಚುವ ಅಗತ್ಯ ರಾಜಸ್ತಾನದ ಬಿಜೆಪಿ ಸರಕಾರಕ್ಕೆ ಇದ್ದಂತೆ ತ್ರಿಪುರಾದ ಎಡರಂಗ ಸರಕಾರಕ್ಕೇನೂ ಇಲ್ಲ ಎಂಬುದು ತಿಳಿದಿರುತ್ತದೆ. ಈ ಇತಿಹಾಸಕಾರರಿಗೆ ಮತ್ತು ಕಾಂಗ್ರೆಸ್ ಮುಖಂಡರಿಗೆ ತಿಳಿದಿರದಿದ್ದರೆ, ಬಹುಶಃ ಅದು ಅವರ ಅಜ್ಞಾನವನ್ನು ಅಥವ ದುರುದ್ದೇಶವನ್ನು ಪ್ರದರ್ಶಿಸಿದೆ.

ಈಗಷ್ಟೇ ಆರಂಭವಾಗಿರುವ ಹೊಸ ಪಠ್ಯಕ್ರಮದ ಒಂಭತ್ತನೇ ತರಗತಿಯ ಪಠ್ಯವನ್ನು ಮಾತ್ರ ಪ್ರಸ್ತಾಪಿಸಿ ಅದಾಗಲೇ ಪ್ರಕಟವಾಗಿರುವ ಪಠ್ಯಕ್ರಮದ ಹತ್ತನೇ ತರಗತಿಯ ಪಠ್ಯವನ್ನು ಮರೆಮಾಚಿ ಮಾಡಿರುವ ಕುಚೇಷ್ಟೆ ಇದು ಎಂಬುದು ಸ್ಪಷ್ಟ.

ಜೂನ್ 14: ಫ್ರಾನ್ಸ್ ಕೆಂಪಾದಾಗ



ಜೂನ್ 14ರಂದು ಇಡೀ ಪ್ಯಾರೀಸ್ ಏಕೆ, ಇಡೀ ಫ್ರಾನ್ಸೇ ಕೆಂಪಾಯಿತು. ಅಂದು ಪ್ಯಾರೀಸ್ ಕಾರ್ಮಿಕರ ಅತಿ ದೊಡ್ಡ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಇದು ಯಥಾ ಪ್ರಕಾರ ಜಾಗತಿಕ ಮಾಧ್ಯಮಗಳಿಗೆ ಸುದ್ದಿಯಾಗಲಿಲ್ಲ. ಅವು ಎಂದಿನಂತೆ 'ಬೆರಳೆಣಿಕೆಯ ಕೆಲವು ಗೂಂಡಾಗಳು' 'ಬೀದಿಯಲ್ಲಿ ದೊಂಬಿ' ಮಾಡಿದರು ಎಂದು ವರದಿ ಮಾಡಿದವು. ಆದರೆ ಅಂದಿನ ಪ್ರದರ್ಶನದಲ್ಲಿ ಭಾರತ ಸೇರಿದಂತೆ ಇಡೀ ಜಗತ್ತಿನ ಕಾರ್ಮಿಕರ ನಾಯಕರೂ ಭಾಗವಹಿಸಿದ್ದರು. ಅವರು ಈ ಚಾರಿತ್ರಿಕ ಘಟನೆಗೆ ಸಾಕ್ಷಿಯಾದರು. ಅವರಿಂದಾಗಿ ಇಡೀ ಜಗತ್ತಿಗೆ ಇದು ಸುದ್ದಿಯಾಗಿದೆ.

ಅವರಲ್ಲೊಬ್ಬರಾದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಜಂಟಿ ಕಾರ್ಯದರ್ಶಿ ಕಾ. ವಿಜೂ ಕೃಷ್ಣನ್ ಇತ್ತೀಚಿನ ತಿಂಗಳುಗಳ ಫ್ರೆಂಚ್ ಕಾರ್ಮಿಕರ ಪ್ರತಿಭಟನಾ ಪ್ರದರ್ಶನಗಳನ್ನು 'ಫ್ರೆಂಚ್ ಕ್ರಾಂತಿಯ ನಂತರ ಅತೀ ದೀರ್ಘವಾದ ಅತೀ ದೊಡ್ಡದಾದ ಪ್ರತಿಭಟನಾ ಪ್ರದರ್ಶನಗಳು' ಎಂದು ಕರೆದಿದ್ದಾರೆ. ಅವರ ಪ್ರಕಾರ ಜೂನ್ 14ರ ಪ್ರದರ್ಶನ ಕಳೆದ ಕೆಲವು ತಿಂಗಳುಗಳ ಪ್ರದರ್ಶನಗಳಲ್ಲೇ ಅತಿ ದೊಡ್ಡದು. ಪ್ಯಾರೀಸಿನಲ್ಲಿ 12 ಲಕ್ಷ ಜನ ಭಾಗವಹಿಸಿದ್ದರು. ಫ್ರಾನ್ಸಿನ ಇತರೆಡೆ ಇನ್ನೂ 15 ಲಕ್ಷ ಜನ ಭಾಗವಹಿಸಿದ್ದರು. ಅಂದರೆ ಒಂದೇ ದಿನದಲ್ಲಿ 27 ಲಕ್ಷ ಜನ ಭಾಗವಹಿಸಿದ್ದರು. ಪ್ಯಾರೀಸಿನಲ್ಲಿ ಈಗ ಯುರೋ ಫುಟ್ ಬಾಲ್ ಪಂದ್ಯಗಳು ನಡೆ-ಯುತ್ತಿದ್ದು, ಯುರೋಪಿನ ಎಲ್ಲಾ ಫುಟ್ ಬಾಲ್ 'ಸ್ಟಾರ್'ಗಳು ಸೇರಿದರೂ ಇಡೀ ಯೂರೋಪಿನಿಂದ ಇಷ್ಟು ಜನರನ್ನು ಅಣಿ ನೆರೆಸುವುದು ಅಸಾಧ್ಯ. ಆದ-ರೆ ಸಿ.ಜಿ.ಟಿ.(ಫ್ರಾನ್ಸಿನ ಅತ್ಯಂತ ದೊಡ್ಡ ಕೇಂದ್ರೀಯ ಟ್ರೇಡ್ ಯೂನಿಯನ್) ಮತ್ತು ಎಲ್ಲಾ ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಕೊಟ್ಟ ಒಂದು ಜಂಟಿ ಕರೆಗೆ ಓಗೊಟ್ಟು 27 ಲಕ್ಷ ಜನ ಸೇರಿದ್ದರು.

ಪ್ರತೀ ಪ್ರತಿಭಟನೆಯ ಹೊಸ ಅಲೆ ದೊಡ್ಡದೂ ವ್ಯಾಪಕವೂ

ಮಾರ್ಚ್ 9ರಿಂದಲೇ ಆರಂಭವಾದ ಪ್ರತಿಭಟನೆಗಳು ಆರಂಭವಾಗಿವೆ. ಆ ನಂತರ ಒಂದಾದ ನಂತರ ಒಂದು ಹಲವಾರು ಪ್ರತಿಭಟನೆಯ ಅಲೆಗಳು ಎದ್ದಿವೆ. ಪ್ರತೀ ಪ್ರತಿಭಟನೆಯ ಅಲೆ ಹಿಂದಿನದಕ್ಕಿಂತ ದೊಡ್ಡದೂ, ವ್ಯಾಪಕವೂ (ಇನ್ನೂ ಹೆಚ್ಚು ನಗರಗಳನ್ನೂ ಪ್ರದೇಶಗಳನ್ನು, ಕಾರ್ಯಕ್ಷೇತ್ರಗಳನ್ನೂ ಒಳಗೊಳ್ಳುವಂತಹದೂ) ಆಗಿದ್ದವು. ಈಗ ಈ ಪ್ರತಿಭಟನೆಯ ಅಲೆಗಳು ಇಡೀ ಫ್ರಾನ್ಸನ್ನು, ಹೆಚ್ಚು ಕಡಿಮೆ ಎಲ್ಲಾ ಕಾರ್ಯಕ್ಷೇತ್ರಗಳನ್ನೂ ಒಳಗೊಂಡಿವೆ. ಫ್ರಾನ್ಸಿನ ಮೂರನೇ ಒಂದರಷ್ಟು ಪೆಟ್ರೋಲ್ ಬಂಕುಗಳು ಮುಚ್ಚಿವೆ. ಫ್ರಾನ್ಸಿನ 8ರಲ್ಲಿ 5 ತೈಲ ಸಂಸ್ಕರಣ ಘಟಕಗಳಿಗೆ ಕಾರ್ಮಿಕರು ದಿಗ್ಬಂಧನ ಹಾಕಿದ್ದಾರೆ. ಕಾರ್ಮಿಕರ ಮುಷ್ಕರದಿಂದಾಗಿ ಅಣು ಶಕ್ತಿ ಕೇಂದ್ರಗಳ ವಿದ್ಯುತ್ ಉತ್ಪಾದನೆ ಶೇ. 20 ಕಡಿತವಾಗಿದೆ. ಸ್ವಚ್ಛತಾ ಕಾರ್ಮಿಕರು, ಪೈಲಟುಗಳು,

> 'ಫ್ರೆಂಚ್ ಕ್ರಾಂತಿಯ ನಂತರ ಅತೀ ದೀರ್ಘವಾದ ಅತೀ ದೊಡ್ಡದಾದ ಪ್ರತಿಭಟನಾ ಪ್ರದರ್ಶನಗಳು ಇವು. .. .. ಎರಡು ದಶಕಗಳ ಕಾಲ ಹಲವಾರು ಹೋರಾಟಗಳಲ್ಲಿ ಪ್ರತಿಭಟನೆಗಳಲ್ಲಿ ಭಾಗವಹಿಸಿರುವ ನನಗೂ ಇದೊಂದು ಅಭೂತಪೂರ್ವ ಅನುಭವ. ಇಂತಹ ಭಾರೀ ಸಂಖ್ಯೆಯಲ್ಲಿ ಯುವಜನರ ಪಾಲ್ಗೊಳ್ಳುವಿಕೆ, ಉತ್ಸಾಹ, ವರ್ಣರಂಜಿತ ಮತ್ತು ಜನತೆಯ ಬೆಂಬಲದ ಪ್ರಮಾಣ ನಾನು ಯಾವತ್ತೂ ಕಂಡಿಲ್ಲ."
>
> **– ಕಾ. ವಿಜೂ ಕೃಷ್ಣನ್ – ಜಂಟಿ ಕಾರ್ಯದರ್ಶಿ, ಅಖಿಲ ಭಾರತ ಕಿಸಾನ್ ಸಭಾ**

ಟ್ರಾಂ ಡ್ರೈವರುಗಳು, ಇತರ ಸಾರಿಗೆ ನೌಕರರು, ವಿದ್ಯುತ್ ನೌಕರರು, ಸರಕಾರದ ವಿಶ್ವವಿದ್ಯಾಲಯದ ನೌಕರರು – ಹೀಗೆ ಎಲ್ಲಾ ಕ್ಷೇತ್ರಗಳ ಕಾರ್ಮಿಕರು ನೌಕರರು ಮುಷ್ಕರ ಹೂಡಿದ್ದಾರೆ. ಜೂನ್ 14ರಂದು ಐಫೆಲ್ ಟವರ್‌ನ ಕಾರ್ಮಿಕರು ಸಹ ಮುಷ್ಕರದಲ್ಲಿ ಭಾಗವಹಿಸಿದ್ದರು. ಈ ದೀರ್ಘ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿರುವ ಸರಕಾರದ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರುದ್ಧ ಆನ್-ಲೈನ್ ಪೆಟಿಶನ್ ಗೆ ಹಲವು ದಶಲಕ್ಷ ಸಹಿಗಳು ಬಂದಿವೆ.

ಸರಕಾರ ಕೈ ಕಟ್ಟಿಕೊಂಡು ಕುಳಿತಿಲ್ಲ. ಅತ್ಯಂತ ತೀವ್ರವಾದ ದಮನ ಹರಿಯ ಬಿಟ್ಟಿದೆ. ಪ್ರತಿಭಟನಾ ಪ್ರದರ್ಶನಗಳ ಮೇಲೆ ಬಲಪಂಥೀಯ ಗೂಂಡಾಗಳು ಪೋಲಿಸರೂ ಹಿಂಸಾತ್ಮಕ ದಾಳಿಗಳನ್ನು ನಡೆಸುತ್ತಿದ್ದಾರೆ. ಅಶ್ರುವಾಯು ದಾಳಿಗಳನ್ನು ಸಿಡಿಸಲಾಗುತ್ತಿದೆ. ಜಲ ಫಿರಂಗಿ ಪ್ರಯೋಗಿಸಲಾಗುತ್ತಿದೆ. ಕಾರ್ಮಿಕ ನಾಯಕರನ್ನು ಬಂಧಿಸಲಾಗುತ್ತಿದೆ. ಅವರ ಮೇಲೆ ಪ್ರತಿಬಂಧಗಳನ್ನು ಹೇರಲಾಗುತ್ತಿದೆ. ಜೂನ್ 14ರ ಭಾರೀ ಪ್ರತಿಭಟನೆಯ ದಿನ 200 ಪ್ರಮುಖ ಕಾರ್ಮಿಕ ನಾಯಕರ ಮೇಲೆ ಅದರಲ್ಲಿ ಭಾಗವಹಿಸದಂತೆ ಪ್ರತಿಬಂಧ ಹೇರಲಾಯಿತು. ಮುಷ್ಕರದ ಬಗ್ಗೆ, ಕಾರ್ಮಿಕರ ಮತ್ತು ಕಾರ್ಮಿಕ ನಾಯಕರ ಮೇಲೆ ಮಾಧ್ಯಮಗಳಲ್ಲಿ ಅಪಪ್ರಚಾರವನ್ನು ಹರಿಯ ಬಿಡಲಾಗುತ್ತಿದೆ. ಇದರ ವಿರುದ್ಧ ಪ್ರತಿವಾದ ಹೂಡುವ ಪ್ರಜಾಸತ್ತಾತ್ಮಕ ಅವಕಾಶವನ್ನು ಟ್ರೇಡ್ ಯೂನಿಯನುಗಳಿಗಾಗಲಿ, ರಾಜಕೀಯ ಪಕ್ಷಗಳಿಗಾಗಲಿ ಕೊಡಲಾಗುತ್ತಿಲ್ಲ. ಪ್ರತಿಭಟನೆಗಳಲ್ಲಿ ಭಾಗವಹಿಸಿದವರ ಮೇಲೆ ದಂಡಗಳನ್ನು ವಿಧಿಸಲಾಗುತ್ತಿದೆ. ಜುಲೈ ಕೊನೆಯ ವರೆಗೆ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಆದರೂ ಪ್ರತಿಭಟನೆ ಅಲೆ ಅಲೆಯಾಗಿ ವ್ಯಾಪಕವಾಗಿ ಹರಡುತ್ತಿರುವುದನ್ನು ತಡೆಯಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ.

ಸರಕಾರದ ಕಾರ್ಮಿಕ ಕಾನೂನುಗಳ ತಿದ್ದುಪಡಿ ಕಾನೂನುಬದ್ಧ ಕೆಲಸದ ಗಂಟೆಗಳನ್ನು ವಾರಕ್ಕೆ 35ರಿಂದ 48 ಗಂಟೆಗಳಿಗೆ ಏರಿಸಲಿದೆ. ಅದನ್ನು 'ವಿಶೇಷ ಸಂದರ್ಭಗಳಲ್ಲಿ' 60 ಗಂಟೆಗಳಿಗೂ (ಅಂ-ದರೆ ದಿನಕ್ಕೆ 12 ಗಂಟೆಗಳಿಗೂ) ಏರಿಸಬಹುದು.



ಶರತ್‌ಚಂದ್ರ

ಓವರ್ ಟೈಮ್ ನ್ನು ಶೇ. 25ರಿಂದ ಶೇ. 10ಕ್ಕೆ ಇಳಿಸಲಾಗುವುದು. 'ಅನ್ಯಾಯಯುತ ವಜಾ'ದ ಪ್ರಕರಣಗಳಲ್ಲೂ ಪರಿಹಾರವನ್ನು 15 ತಿಂಗಳುಗಳ ವೇತನಕ್ಕೆ ಮಿತಿಗೊಳಿಸಲಾಗಿದೆ. ಇದು ಫ್ರೆಂಚ್ ಕಾರ್ಮಿಕರು ನೂರು ವರ್ಷಗಳ ಕಾಲ ಹೋರಾಟದಲ್ಲಿ ಪಡೆದ ಸಾಮಾಜಿಕ ಭದ್ರತೆಯನ್ನು ಕಸಿದುಕೊಳ್ಳುವ ಹುನ್ನಾರವಾದ್ದರಿಂದ ಇಂತಹ ಅಭೂತಪೂರ್ವ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಅದೂ ಇನ್ನಷ್ಟು ಹೆಚ್ಚು ಉದ್ಯೋಗ ಸೃಷ್ಟಿಸುವ ನೆಪದಲ್ಲಿ ಈ ತಿದ್ದುಪಡಿಗಳನ್ನು ತರಲಾಗುತ್ತಿದೆ. ಆದರೆ ಉದ್ಯೋಗ ಸೃಷ್ಟಿಸುವ ವಿಚಾರದಲ್ಲಿ ಈ ಮತ್ತು ಹಿಂದಿನ ಫ್ರೆಂಚ್ ಸರಕಾರದ ರೆಕಾರ್ಡು ಎಷ್ಟು ಕೆಟ್ಟದಿದೆ ಎಂದರೆ ಅದನ್ನು ಯಾರೂ ನಂಬಲು ತಯಾರಿಲ್ಲ. ಫ್ರಾನ್ಸ್ ಯೂರೋಪಿನಲ್ಲೇ ಅತ್ಯಂತ ಹೆಚ್ಚಿನ ನಿರುದ್ಯೋಗ ಪ್ರಮಾಣ ಹೊಂದಿರುವ ದೇಶಗಳಲ್ಲಿ ಒಂದು. ಯುವಕರಲ್ಲಿ ನಿರುದ್ಯೋಗ ಪ್ರಮಾಣ ಎರಡು ಪಟ್ಟಿಗಿಂತಲೂ ಹೆಚ್ಚು. ಫ್ರಾನ್ಸಿನಲ್ಲಿ 65 ಲಕ್ಷ ನಿರುದ್ಯೋಗಿಗಳು ಇದ್ದಾರೆ.

'ಹೋರಾಟವನ್ನು, ಆಶಾಭಾವನೆಯನ್ನು ಜಾಗತೀಕರಿಸೋಣ'

ಜೂನ್ 14ರ ಈ ಅಭೂತಪೂರ್ವ ಚಾರಿತ್ರಿಕ ಪ್ರತಿಭಟನಾ ಪ್ರದರ್ಶನಕ್ಕೆ ಸಾಕ್ಷಿಯಾದವರು 86 ದೇಶಗಳಿಂದ ಬಂದಿದ್ದ 123 ಕಾರ್ಮಿಕ ಸಂಘಟನೆಗಳ 225 ಪ್ರತಿನಿಧಿಗಳು. ಅವರು ಪ್ಯಾರೀಸಿನಲ್ಲಿ ಜೂನ್ 13ರಿಂದ 17 ವರೆಗೆ ನಡೆದ ಕೃಷಿ, ಆಹಾರ, ಜವಳಿ ಮತ್ತು ಸಂಬಂಧಿತ ಕೈಗಾರಿಕೆಯ ಕಾರ್ಮಿಕರ ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನಿನ 4ನೇ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದರು. ಪ್ರತಿನಿಧಿಗಳು 'ಹೋರಾಟವನ್ನು, ಆಶಾಭಾವನೆಯನ್ನು ಜಾಗತೀಕರಿಸೋಣ' ಎಂಬ ಕಾರ್ಮಿಕ ಅಂತರ್ರಾಷ್ಟ್ರೀಯತೆಯ ನೀತಿ ಅನುಸರಿಸಿ ಅಂದಿನ ಪ್ರತಿಭಟನೆಯಲ್ಲಿ ಭಾಗವಹಿಸಲು ನಿರ್ಧರಿಸಿದರು. ಅಂದಿನ ಪ್ರತಿಭಟನೆಯ ಮೇಲೆ ದಾಳಿಯಾಗಬಹುದು ಎಂದು ಪ್ರತಿನಿಧಿಗಳಿಗೆ ಎಚ್ಚರಿಕೆ ಕೊಡಲಾಯಿತು. ಆದರೂ ಯಾವ ಪ್ರತಿನಿಧಿಯೂ ಹಿಂಜರಿಯಲಿಲ್ಲ. ಹಲವು ಕಡೆ ದಾಳಿಗಳು ನಡೆದವೂ ಕೂಡಾ.

"ಎರಡು ದಶಕಗಳ ಹೋರಾಟಗಳ ಪ್ರತಿಭಟನೆಗಳಲ್ಲಿ ಭಾಗವಹಿಸಿರುವ ನನಗೂ ಇದೊಂದು ಅಭೂತಪೂರ್ವ ಅನುಭವ. ಇಂತಹ ಭಾರೀ ಸಂಖ್ಯೆಯಲ್ಲಿ ಯುವಜನರ ಪಾಲ್ಗೊಳ್ಳುವಿಕೆ, ಉತ್ಸಾಹ, ವರ್ಣರಂಜಿತ ಮತ್ತು ಜನತೆಯ ಬೆಂಬಲದ ಪ್ರಮಾಣ ನಾನು ಯಾವತ್ತೂ ಕಂಡಿಲ್ಲ. ಇಂತಹ ಪ್ರಮಾಣದ ವೈವಿಧ್ಯಮಯ ತಮ್ಮಟೆ ವಾದ್ಯಗಳು, ವರ್ಣರಂಜಿತ ಪೋಷಾಕುಗಳು, ಕೆಂಬಾವುಟಗಳು, ವರ್ಣರಂಜಿತ ಬ್ಯಾನರುಗಳು, ಹಾಡುಗಳು, ಸಂಗೀತ ನೋಡಿಲ್ಲ. ದಾರಿಯ ಇಕ್ಕೆಲದಲ್ಲೂ ಕಟ್ಟಡಗಳ ಮೇಲೆ ಕೆಂಬಾವುಟ, ಬ್ಯಾನರುಗಳು, ಘೋಷಣೆಗಳೊಂದಿಗೆ ಜನ ತಮ್ಮ ಬೆಂಬಲ ವ್ಯಕ್ತ ಪಡಿಸುತ್ತಿದ್ದರು. ಅದೊಂದು ಅತ್ಯಂತ ಶಿಸ್ತಿನ, ಆದರೂ ಹಬ್ಬದ ವಾತಾವರಣದ ಪ್ರದರ್ಶನವಾಗಿತ್ತು' ಎನ್ನುತ್ತಾರೆ ಕಾ. ವಿಜೂ ಕೃಷ್ಣನ್.

ಕಾ. ಹನ್ನನ್ ಮುಲ್ಲಾ (ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ), ವಿಜಯರಾಘವನ್ (ಕೃಷಿ ಕೂಲಿಕಾರರ ಸಂಘಟನೆ ಪ್ರಧಾನ ಕಾರ್ಯದರ್ಶಿ), ಸುನೀತ್ ಚೋಪ್ರಾ (ಕೃಷಿ ಕೂಲಿಕಾರರ ಸಂಘಟನೆ ಜಂಟಿ ಕಾರ್ಯದರ್ಶಿ) ಹಾಗೂ ಬಿ.ಕೆ.ಎಂ.ಯು. ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ■

ಫಿಲಿಪ್ಪಿನ್ಸ್‌ನಲ್ಲಿ ಕುಟುಂಬ ರಾಜಕೀಯಕ್ಕೆ ಕೊನೆ

ಫಿಲಿಪ್ಪೀನ್ಸ್ ನಲ್ಲಿ ಹಲವು ದಶಕಗಳಿಂದ ನಡೆದು ಬರುತ್ತಿರುವ ಕುಂಟುಬ ರಾಜಕಾರಣಕ್ಕೆ ಕೊನೆ ಹಾಡಲಾಗಿದೆ. ತಳಮಟ್ಟದಿಂದ ಬಂದ ಯಾವುದೇ ಹಿಂದೆ ಅಧಿಕಾರದಲ್ಲಿದ್ದ ಯಾವುದೇ ರಾಜಕೀಯ ಕುಟುಂಬಗಳಿಂದ ಬಾರದ ರಾಜಕಾರಣಿ ಅಧ್ಯಕ್ಷರಾಗಿ ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. 71 ವರ್ಷದ ರೊಡ್ರಿಗೊ ಡುಟಾರ್ಟ್ ಶೇ. 38 ಮತ ಪಡೆದು ಹಲವು ವಿರೋಧಿಗಳನ್ನು ಹಿಂದಕ್ಕೆ ಹಾಕಿ ಅಧ್ಯಕ್ಷರಾಗಿದ್ದಾರೆ. ಹಿಂದಿನ ಇಬ್ಬರು ಅಧ್ಯಕ್ಷರೂ ಇನ್ನು ಹಿಂದಿನ ಅಧ್ಯಕ್ಷರುಗಳ ಪುತ್ರಿಯರಾಗಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಚುನಾವಣೆಯಲ್ಲಿ ಅಪರಾಧ, ಭ್ರಷ್ಟಾಚಾರ, ಬಡತನ ಮತ್ತು ನಿರುದ್ಯೋಗ ಪ್ರಮುಖ ವಿಷಯಗಳಾಗಿ ಹೊಮ್ಮಿದ್ದು, ಮೊದಲ ಎರಡರ ವಿರುದ್ಧ ಯುದ್ಧ ಸಾರುವೆ ಎಂಬ ಭರವಸೆ ಮುಡಿಸಿದ್ದು ರೊಡ್ರಿಗೊ ವಿಜಯಕ್ಕೆ ಕಾರಣವಾಗಿದೆ ಎನ್ನಲಾಗಿದೆ.



ದೀರ್ಘ ಕಾಲ ದವಾವೊ ನಗರದ ಮೇಯರ್ ಆಗಿದ್ದ ರೊಡ್ರಿಗೊ ಅಲ್ಲಿ ಹೇಳಿದ್ದನ್ನು ಮಾಡಿ ತೋರಿಸಿದ್ದು, ಇದು ಅವರ ನೆರವಿಗೆ ಬಂದಿದೆ. ಅತ್ಯಂತ ಅಪರಾಧ-ಗ್ರಸ್ತ ಎಂದು ಕುಖ್ಯಾತವಾಗಿದ್ದ ಈ ನಗರವನ್ನು ದಿಟ್ಟ (ಹಲವು ಬಾರಿ ಕ್ರೂರ ಎಂದು ಹೇಳಲಾದ) ಕ್ರಮಗಳಿಂದ ಅವರು ಅತ್ಯಂತ ಸುರಕ್ಷಿತ ನಗರವಾಗಿಸಿದ್ದರು. ನಾನು ಅಧ್ಯಕ್ಷನಾದರೆ 6 ತಿಂಗಳು ದೇಶದಲ್ಲಿ ರಕ್ತದ ಕೋಡಿ ಹರಿಯಬಹುದು. ಆದ-ರೆ ಅಪರಾಧ ನಿರ್ನಾಮ ಮಾಡುತ್ತೇನೆ ಎಂಬುದು ಅವರ ಚುನಾವಣಾ ಭರವಸೆಯಾಗಿತ್ತು! ಅಮೆರಿಕದ ಬಗ್ಗೆ ಅಷ್ಟೇನೂ ಒಲವು ಇರದ ರೊಡ್ರಿಗೊ ದೇಶದ ಸಾರ್ವಭೌಮತೆಗೆ ಹೆಚ್ಚಿನ ಆದ್ಯತೆ ಕೊಡುವವರು. ಚೀನಾದ ವಿರುದ್ಧ ಅಮೆರಿಕಾದ ಪರ ದೇಶದ ವಿದೇಶ ನೀತಿಯನ್ನು ಅವರು ಬದಲಿಸುವ ಸಾಧ್ಯತೆ ಇದೆ. ಚೀನಾ ಮತ್ತು ಅಮೆರಿಕ ನಡುವೆ ಸಮಾನ ದೂರ ಸಾಧಿಸಬಹುದು ಎಂಬುದು ಅವರ ನಿಲುವು. ನೆರೆಯ ಚೀನಾದ ಜತೆ ಉತ್ತಮ ಸಂಬಂಧ ದೇಶಕ್ಕೆ ಒಳ್ಳೆಯದು. ಅಮೆರಿಕದ ಮೇಲೆ ಅತಿ ಅವಲಂಬನೆ ಒಳ್ಳೆಯದಲ್ಲ ಎಂಬುದು ಅವರ ನಿಲುವು.

ಅವರಿಗೆ ಕಮ್ಯುನಿಸ್ಟ್ ಪಕ್ಷದ ಜತೆ ಉತ್ತಮ ಸಂಬಂಧವಿದ್ದು, ದಕ್ಷಿಣದಲ್ಲಿ ಕಮ್ಯುನಿಸ್ಟ್ ಗೆರಿಲ್ಲಾ ಜತೆ ಸರಕಾರ ಪಡೆಗಳು ತೊಡಗಿರುವ ಕದನವನ್ನು ನಿಲ್ಲಿಸಿ ಅಲ್ಲಿ ಶಾಂತಿ ಸ್ಥಾಪಿಸುವುದಾಗಿಯೂ ಚುನಾವಣೆಯಲ್ಲಿ ಭರವಸೆ ಕೊಟ್ಟಿದ್ದಾರೆ. ಅವರು ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಮತ್ತು ಸ್ಥಾಪಕರೊಬ್ಬರ ವಿದ್ಯಾರ್ಥಿಯಾಗಿದ್ದು ಇದನ್ನು ಜಾರಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅವರು ದೇಶಾಂತರದಲ್ಲಿರುವ ಕಮ್ಯುನಿಸ್ಟ್ ನಾಯಕರನ್ನು ಸಂಪರ್ಕಿಸಿಯೂ ಇದ್ದಾರೆ. ■

RNI No. KARKAN /2006/17926 Posted on every Satuarday
Licensed to Post without prepayment License No. WPP-283

ಆದಿವಾಸಿಗಳನ್ನು ಉಳಿಸಿ ದೇಶದ ಸಂಸ್ಕೃತಿ ಕಟ್ಟಿ



ಕಾಡನ್ನು ಕಾಪಾಡಿಕೊಂಡು ಬಂದ ಆದಿವಾಸಿ–ಬುಡಕಟ್ಟು ಜನರಿಗೆ ಕಾಡುನಾಶ ಮಾಡುವವರೆಂಬ ಹಣೆಪಟ್ಟಿ ಕಟ್ಟಿ ಮೂಲ ನೆಲೆಯಿಂದ ಹೊರಗಟ್ಟುವ ಪ್ರಯತ್ನ ನಡೆದಿರುವುಉ ವಿಷಾದನೀಯ. ಆಳುವ ಜನರನ್ನು ಹೊಗಳುವ ಚರಿತ್ರೆ ಕಾಣುತ್ತಿರುವ ಇಂದಿನ ದಿನದಲ್ಲಿ ಆದಿವಾಸಿಗಳನ್ನು ಉಳಿಸಿಕೊಳ್ಳುವ ಮೂಲಕ ದೇಶದ ಸಂಸ್ಕೃತಿ ಕಟ್ಟುವ ಚರಿತ್ರೆ ನಿರ್ಮಾಣವಾಗಬೇಕಿದೆ ಎಂದು ಬುಡಕಟ್ಟು ಆಧ್ಯಯನ ತಜ್ಞರು ಹಾಗೂ ಹಂಪಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ। ಹಿ.ಚಿ.ಬೋರಲಿಂಗಯ್ಯ ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ಜೋಯ್ಡಾದಲ್ಲಿ ಬಿಜಿವಿಎಸ್ ಕಾಲೇಜಿನಲ್ಲಿ ಜೂನ್ 12 ರಿಂದ 14ರವರೆಗೆ ಮೂರು ದಿನಗಳ ಕಾಲ ಆದಿವಾಸಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ ಮತ್ತು ಹಕ್ಕುಗಳ ಜಾಗೃತಿ ರಾಜ್ಯ ಶಿಬಿರವನ್ನು ಡಾ।ಹಿ.ಚಿ.ಬೋರಲಿಂಗಯ್ಯರವರು ಡೋಲು ಬಾರಿಸುವ ಮೂಲಕ ಉದ್ಘಾಟಿಸಿದರು.

ಪ್ರಾರಂಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ಜೂಲಿಯಾನಾ ಫರ್ನಾಂಡಿಸ್ ರವರ ಬುಡಕಟ್ಟುಗಳ ಕುರಿತಾದ ಮೇಲ್ವರ್ಗದವರ ದಬ್ಬಾಳಿಕೆಯ ಕುರಿತು ಹಾಡನ್ನು ಹೇಳುವ ಮೂಲಕ ಅಧ್ಯಯನ ಶಿಬಿರ ಪ್ರಾರಂಭವಾಯಿತು.


ಅಧ್ಯಕ್ಷತೆ ವಹಿಸಿದ್ದ ಆದಿವಾಸಿ ರಾಷ್ಟ್ರೀಯ ಅಧಿಕಾರ ಮಂಚ್ ಕೇಂದ್ರ ಸಮಿತಿ ಸದಸ್ಯರಾದ ಎಸ್.ವೈ.ಗುರುಶಾಂತ್ ರವರು ಮಾತನಾಡಿ "ಅರಣ್ಯ ಪ್ರದೇಶದಿಂದ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಪರೋಕ್ಷವಾಗಿ ಸರಕಾರ ಮಾಡುತ್ತಿದೆ. ಅರಣ್ಯ ಹಕ್ಕುಗಳ ಕಾಯ್ದೆ ಸಮರ್ಪಕವಾಗಿ ಜಾರಿ ಆಗಬೇಕಿದೆ. ಇದಕ್ಕಾಗಿ ಹೋರಾಟ ಮಾಡಲು ನಾವು ಸಿದ್ಧರಿದ್ದೇವೆ. ಕಸ್ತೂರಿ ರಂಗನ್, ಹುಲಿ ಯೋಜನೆ, ಆನೆ ಕಾರಿಡಾರ್ ಹೀಗೆ ಹಲವು ಹೋಜನೆಗಳ ಮೂಲಕ ಬುಡಕಟ್ಟು ಜನರನ್ನು ಹೊರತಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ತಿಳಿಸಿದರು.

ಕೃಷ್ಣಪ್ಪ ಕೊಂಚಾಡಿ ಪ್ರಸ್ತಾವನೆ ಮಾಡಿದರು. ಪ್ರೇಮಾನಂದ ವೆಳಿಪ ಸ್ವಾಗತ ಮತ್ತು ರಾಜ್ಯ ಸಂಚಾಲಕ ವಿಠ್ಠಲ ಮಲೆಕುಡಿಯ ವಂದಿಸಿದರು. ಕಾರ್ಯಕ್ರಮದಲ್ಲಿ ಜೂಲಿಯಾನಾ ಫರ್ನಾಂಡಿಸ್, ಗೋವಾ ರಾಜ್ಯ ಕುಣಬಿ ಸಮಾಜದ ಅ ಧ್ಯಕ್ಷ ಆನಂದ ವೆಳಿನ, ಕಾಟೋಳಿಯ ಬುಡಕಟ್ಟು ಕಲಾವಿದ ಮಹಾದೇವ ವೆಳಿಪ, ಆದಿವಾಸಿ ಸಮಿತಿಯ ಸದಸ್ಯರಾದ ಶಾಂತರಾಮ್ ನಾಯ್ಕ ಉಪಸ್ಥಿತರಿದ್ದರು.

ಶಿಬಿರಕ್ಕೆ ಮಾಜಿ ಶಾಸಕರು ಹಾಗೂ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷರಾದ ಜಿ.ವಿ.ಶ್ರೀರಾಮರೆಡ್ಡಿ, ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮುಂತಾದವರು ಭಾಗವಹಿಸಿ ತರಗತಿ ನಡೆಸಿದರು.

(ಪುಟ 10 ರಲ್ಲಿ)

ಹೆಚ್.ಆರ್. ನವೀನ್‌ಕುಮಾರ್



ಕಾರ್ಮಿಕರ ಶ್ರಮದಿಂದ ಕೆಂಪಾಯಿತು ಕಾರ್ಮಿಕ ನಗರ

ಬೆಂಗಳೂರು ಉತ್ತರ ಜಿಲ್ಲೆಯ ಸಿಐಟಿಯು ಜಿಲ್ಲಾ 11ನೇ ಸಮ್ಮೇಳನವು ಬೆಂ.ಉತ್ತರ ವಲಯ ಸಮಿತಿ ವ್ಯಾಪ್ತಿಯ ದಾಸರಹಳ್ಳಿಯಲ್ಲಿ ನಡೆಯಿತು. ಜೂನ್ 10 ರಿಂದ 12ರವರೆಗೆ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ಜೂನ್ 10ರಂದು ಸಂಜೆ 5 ಗಂಟೆಗೆ ತುಮಕೂರು ರಸ್ತೆಯ 8ನೇ ಮೈಲಿಯಿಂದ ಕೆಂಪು ಸಮವಸ್ತ್ರಧಾರಿಗಳು ಮತ್ತು ಸಿಐಟಿಯು ಬಾವುಟಗಳನ್ನು ಹಿಡಿದ ನೂರಾರು ಕಾರ್ಮಿಕರಿಂದಾಗಿ ತುಮಕೂರು ರಸ್ತೆ ಹಾಗೂ ದಾಸರಹಳ್ಳಿ ಪ್ರದೇಶದ ಗಲ್ಲಿ–ಗಲ್ಲಿಗಳಲ್ಲಿ ಮೆರವಣಿಗೆಯಿಂದಾಗಿ ರಸ್ತೆಗಳೆಲ್ಲೆಲ್ಲಾ ಕೆಂಪಾಗಿದ್ದವು. ಕೇಂದ್ರ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳು ಹಾಗೂ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಘೋಷಣೆಗಳಿಂದಾಗಿ ತಮಟೆಯ ಸದ್ದು ಸಣ್ಣದಾಗಿತ್ತು.

ಟಿ. ದಾಸರಹಳ್ಳಿಯ ಪೈಪ್‌ಲೈನ್ ರಸ್ತೆ ಬಳಿ ಆಕರ್ಷಕವಾದ ಬಹಿರಂಗ ಸಭೆಯ ವೇದಿಕೆ ನಿರ್ಮಿಸಲಾಗಿತ್ತು. ಮುಖ್ಯ ಭಾಷಣಕಾರರಾಗಿ ಆಗಮಿಸಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್ ರವರು ಮಾತನಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಗೂ ಮಾಲೀಕರ ನೀತಿಗಳಿಂದಾಗಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ತಿಳಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರರಂರವರು ಮಾತನಾಡಿ ಕೇಂದ್ರದ ಬಿಜೆಪಿ ಸರ್ಕಾರ ಸರ್ಕಾರವು ಕಾರ್ಮಿಕ ಕಾನೂನು ತಿದ್ದುಪಡಿ ಮಾಡಲು ಹೊರಟಿರುವ ಹಿನ್ನೆಲೆ ಮತ್ತು ಕಾರ್ಮಿಕರಿಗೆ ಅದರಿಂದಾಗುವ ಸಮಸ್ಯೆಗಳ ಕುರಿತು ಮತ್ತು ಬೆಲೆ ಏರಿಕೆ, ಕನಿಷ್ಟ ಕೂಲಿ ಮತ್ತು ಶ್ರೀಮಂತರಪರ ಇರುವ ಮಾಧ್ಯಮಗಳ ಬಗ್ಗೆಯೂ ಮಾತನಾಡದರು.

ಬೆಂ.ಉತ್ತರ ಜಿಲ್ಲಾ ಸಮಿತಿ ಅಧ್ಯಕ್ಷರಾದ ಹೆಚ್. ಎನ್.ಗೋಪಾಲಗೌಡ ಹಾಗೂ ಪ್ರಧಾನ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಮಾತನಾಡಿದರು. ಉಪಾಧ್ಯಕ್ಷರಾದ ಟಿ.ಲೀಲಾವತಿರವರು ಅ ಧ್ಯಕ್ಷತೆ ವಹಿಸಿದರು. ಎಂ.ಎಸ್.ನಿತಿನ್ ರವರು ಸ್ವಾಗತ ಮತ್ತು ಪ್ರಸ್ಥಾವನೆ ಮಾಡಿದರು. ಬಹಿರಂಗ ಸಭೆಯ ಕೊನೆಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತಾರದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಜೂನ್ 11 ಹಾಗೂ 12ರಂದು ಪ್ರತಿನಿಧಿಗಳ ಅಧಿವೇಶವನವನ್ನು ಜಾಲಹಳ್ಳಿ ವೃತ್ತ ಹತ್ತಿರ ಕಾಂ.ಎಸ್.ಪ್ರಸನ್ನಕುಮಾರ್ ನಗರದ ಕಾಂ. ಕೋದಂಡರಾಮ್ ವೇದಿಕೆಯಲ್ಲಿ ಸಮ್ಮೇಳನ ನಡೆಸಲಾಯಿತು. 167 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪ್ರತಿನಿಧಿ ಅಧಿವೇಶನ ಉದ್ಘಾಟನೆ ನಂತರ ಪ್ರಧಾನ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹರವರು ಕರಡು ವರದಿ ಮಂಡನೆ ಮತ್ತು ಪ್ರತಿನಿಧಿಗಳ ಚರ್ಚೆಯ ನಂತರ ಪ್ರಧಾನ ಕಾರ್ಯದರ್ಶಿಗಳ ಉತ್ತರ ನೀಡಿದರು ಅಂತಿಮವಾಗಿ ವರದಿಯನ್ನು ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ಸೆಪ್ಟಂಬರ್ 02ರ ಮುಷ್ಕರ ಯಶಸ್ವಿಗೊಳಿಸಬೇಕೆಂದು ಎಂಬ ನಿರ್ಣಯದ ಜೊತೆಗೆ ಇನ್ನು ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನೂತನ ಜಿಲ್ಲಾ ಸಮಿತಿ

ಸಿಐಟಿಯು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು 40 ಜನರ ಸಮಿತಿಯಾಗಿ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರು: **ಎನ್.ಪ್ರತಾಪ್ ಸಿಂಹ,**
ಪ್ರಧಾನ ಕಾರ್ಯದರ್ಶಿ: **ಪಿ.ಮುನಿರಾಜು,**
ಖಜಾಂಚಿ: **ಸಿ.ನರಸಿಂಹಮೂರ್ತಿ,**

ಉಪಾಧ್ಯಕ್ಷರು : ಹೆಚ್.ಎನ್.ಗೋಪಾಲಗೌಡ, ಮೀನಾಕ್ಷಿ ಸುಂದರಂ, ಆರ್.ಶ್ರೀನಿವಾಸ್, ಟಿ.ಲೀಲಾವತಿ, ಹನುಮಂತರಾವ್ ಹವಾಲ್ದಾರ್, ಕೆ.ಸಿ.ತಿರುಮಲಾಚಾರಿ, ನಳಿನಾಕ್ಷಿ

ಕಾರ್ಯದರ್ಶಿಗಳು : ನಿತಿನ್ ಎಂ.ಎಸ್, ಸಂತೋಷ್, ಬಿ.ಎಸ್. ರುದ್ರಮೂರ್ತಿ, ಟಿ.ಎಂ. ರಾಮಕೃಷ್ಣ,

ಸಹ ಕಾರ್ಯದರ್ಶಿಗಳು : ಮೋಹನ್ ಬಾಬು, ಹೆಚ್.ಬಿ.ಗಂಗರಾಜು, ಎ.ಹೆಚ್.ವಿಜಯಲಕ್ಷ್ಮೀ, ಎಂ.ವೆಂಕಟರಾಜು ಆಯ್ಕೆಯಾಗಿದ್ದಾರೆ.

ಸಮಾರೋಪ ಸಮಾರಂಭ :

ಜೂನ್ 12ರ ಸಮ್ಮೇಳನದ ಕೊನೆ ದಿನ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ರವರು ಮಾತನಾಡಿ ಕನಿಷ್ಠ ಕೂಲಿ 18 ಸಾವಿರವನ್ನು ಎಲ್ಲಾ ಅಸಂಘಟಿತ ಕಾರ್ಮಿಕರಿಗೂ ಜಾರಿ ಮಾಡಬೇಕು, ಬೇಡಿಕೆಗಳನ್ನು ಈಡೇರಿಸಬೇಕೆಂದು ಇತ್ತೀಚಿಗೆ ರಾಜ್ಯ ಸರ್ಕಾರಿ ನೌಕರರ ಹೋರಾಟ ಮತ್ತು ಪೊಲೀಸ್ ಸಿಬ್ಬಂದಿಗಳ ಹೋರಾಟ ಹಿನ್ನೆಲೆ ಪಿಎಫ್ ಹಣದ ವಿಚಾರವಾಗಿ ಗಾರ್ಮೆಂಟ್ಸ್ ಕಾರ್ಮಿಕರ ಎರಡು ದಿನಗಳ ಸಮರಧೀರ ಹೋರಾಟ, ಇದರ ಪರಿಣಾಮ ಪಿಎಫ್ ನೀತಿಯಲ್ಲಿನ ಕೇಂದ್ರ ಸರ್ಕಾರಗಳದ ಬದಲಾವಣೆಯನ್ನು ವಾಪಸ್ಸು ಮಾಡಿದ ಮಹಿಳಾ ಕಾರ್ಮಿಕರ ಯಶಸ್ವಿ ಹೋರಾಟವಾಗಿದೆ. ಕೇಂದ್ರದ ಬಿಜೆಪಿ ಸರ್ಕಾರವು ಕಾರ್ಮಿಕ ಕಾನೂನುಗಳ ತಿದ್ದುಪಡಿ ಮೂಲಕ ಕಾರ್ಮಿಕರಿಗೆ ಈಗ ಸಿಗುತ್ತಿರುವ ಸವಲತ್ತುಗಳ ಕಡಿತವಾಗಲಿದೆ ಮಾತ್ರವಲ್ಲ ಮಾಲೀಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಿದೆ. ಕಾರ್ಮಿಕರ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಸೆಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಮುಷ್ಕರದ ಯಶಸ್ಸಿಗಾಗಿ ಈಗಿನಿಂದಲೇ ಕಾರ್ಮಿಕರ ಮಧ್ಯೆ, ಜನತೆ ಮಧ್ಯೆ, ಮಧ್ಯಮ ವರ್ಗದ ಮಧ್ಯೆ, ಎಲ್ಲಾ ಜನತೆಯ ಮಧ್ಯೆ ಪ್ರಚಾರ–ಪ್ರಕ್ಷೋಭೆ ನಡೆಸಬೇಕೆಂದು ಕರೆ ನೀಡಿದರು.

"ಚೆಗೆವಾರ ಸ್ಪೋರ್ಟ್ಸ್ ಕ್ಲಬ್"

ಸಮ್ಮೇಳನದ ಮುಂಚಿತವಾಗಿ ಪ್ರಚಾರದ ಭಾಗವಾಗಿ "ಚೆಗೆವಾರ ಸ್ಪೋರ್ಟ್ಸ್ ಕ್ಲಬ್" ನಿಂದ ಪುರುಷರಿಗೆ ಕ್ರಿಕೆಟ್, ವಾಲಿಬಾಲ್, ಮಹಿಳೆಯರಿಗೆ ರಂಗೋಲಿ, ಲೆಮನ್ ಸ್ಪೂನ್, ಮಸಿಕಲ್ ಚೇರ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ಸುಮಾರು 500ಕ್ಕೂ ಹೆಚ್ಚು ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**